ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಪ್ರಾದೇಶಿಕಾಂಶಗಳು: ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ
ಜ್ಯೋತಿ ಶೆಟ್ಟಿ

ಮಾರ್ಗದರ್ಶಕರು
ಪ್ರೊ. ಎ. ವಿ. ನಾವಡ

೨೦೧೦

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಪ್ರಾದೇಶಿಕಾಂಶಗಳು:
ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ
ಜ್ಯೋತಿ ಶೆಟ್ಟಿ

ಮಾರ್ಗದರ್ಶಕರು
ಪ್ರೊ. ಎ. ವಿ. ನಾವಡ

೨೦೧೦

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಯೋಗ್ಯತಾ ಪತ್ರ

ಜ್ಯೋತಿ ಶೆಟ್ಟಿ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **'ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಪ್ರಾದೇಶಿಕಾಂಶಗಳು: ಒಂದು ಅಧ್ಯಯನ'** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಪ್ರೊ. ಎ.ವಿ. ನಾವಡ
ಸಂಶೋಧನಾ ಮಾರ್ಗದರ್ಶಕರು

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **'ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಪ್ರಾದೇಶಿಕಾಂಶಗಳು: ಒಂದು ಅಧ್ಯಯನ'** ಶೀರ್ಷಿಕೆಯ ಈ ಸಂಪ್ರಬಂಧವು ಈ ಸಂಶೋಧಕಿಯ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಪ್ರೊ. ಎ.ವಿ. ನಾವಡ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಜ್ಯೋತಿ ಶೆಟ್ಟಿ

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಪ್ರಾದೇಶಿಕಾಂಶಗಳು: ಒಂದು ಅಧ್ಯಯನ

ಅಧ್ಯಾಯಗಳ ವಿವರ

ಅಧ್ಯಾಯ : ಒಂದು

ಪ್ರಾದೇಶಿಕ ಅಧ್ಯಯನ : ಉದ್ದೇಶ, ಸ್ವರೂಪ ಮತ್ತು ನಿರ್ವಚನ.

1. ಪ್ರವೇಶ
2. ಉದ್ದೇಶ
3. ಅಧ್ಯಯನಕ್ಕೆ ಆಕರಗಳು
4. ಪ್ರಾದೇಶಿಕತೆಯ ಸ್ವರೂಪ, ನಿರ್ವಚನ

ಅಧ್ಯಾಯ : ಒಂದು
ಪ್ರಾದೇಶಿಕ ಅಧ್ಯಯನ: ಉದ್ದೇಶ, ಸ್ವರೂಪ ಮತ್ತು ನಿರ್ವಚನ

೧. ಪ್ರವೇಶ

ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ನಂಟು ಅಬಾಧಿತವಾದುದು. ಒಂದು ಕಾವ್ಯ ಅಥವಾ ಸಾಹಿತ್ಯಕೃತಿಯು ಕಾಲ,ದೇಶಗಳ ಪರಿಮಿತಿಯಲ್ಲಿ ವ್ಯಕ್ತಗೊಂಡ ಕಲಾಭಿವ್ಯಕ್ತಿ ಆಗಿರುತ್ತದೆ. ಯಾವುದೇ ಬಗೆಯ ಕಾವ್ಯವಾಗಿರಲಿ, ಅದರಲ್ಲಿ ಸಮಕಾಲೀನ ಸಾಂಸ್ಕೃತಿಕ ಪರಿಸರ, ಮತ್ತು ಅದಕ್ಕೆ ಕವಿಹೃದಯ ಸ್ಪಂದಿಸಿದ ಬಗೆ ಕೃತಿಯಲ್ಲಿ ಸಾಧಿತವಾಗಿರುತ್ತದೆ. ತಳದಿಂದ ಸತ್ವವನ್ನು ಹೀರಿ ರೂಪುಗೊಳ್ಳುವ ಸಾಹಿತ್ಯದಲ್ಲಿ ವಿಶ್ವಮೌಲಿಕತೆ ರೂಪುಗೊಂಡರೂ ಮೂಲದಲ್ಲಿ ತಳದ ಸತ್ವವೇ ಅಡಗಿರುತ್ತದೆ. ಯಾವುದೇ ಸಾಹಿತ್ಯವಾಗಲಿ, ಅದರ ಹುಟ್ಟಿಗೆ ಕಾರಣವಾದ ಕವಿಯ ಮನೋಭೂಮಿಕೆಯಲ್ಲರಳಿದ ಧ್ಯೇಯಾದರ್ಶಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಉತ್ತರ ಭಾರತದಿಂದ ಆಗಮಿಸಿದ ಜೈನಧರ್ಮವು ಸುಮಾರು ಕ್ರಿ.ಶ. ೨ನೆಯ ಶತಮಾನದಲ್ಲಿ ತುಳುನಾಡಿಗೆ ಬಂದು, ಈ ನಾಡಿನ ಮಣ್ಣಿನಲ್ಲಿ ಉಸಿರಿಗೆ ಉಸಿರಾಗಿ ಬೆರೆತುಕೊಂಡಿದೆ. ತುಳುನಾಡಿನ ಸಾಹಿತ್ಯಕ್ಷೇತ್ರವನ್ನೇ ಆಗಲಿ, ರಾಜಕೀಯ ಸಾಂಸ್ಕೃತಿಕ ಇತಿಹಾಸವನ್ನೇ ಆಗಲಿ ವಿಶ್ಲೇಷಿಸಿ ನೋಡಿದರೆ ಅದು ಜೈನಧರ್ಮದ ಈ ಎಲ್ಲ ನೆಲೆಗಳ ವಿಶ್ಲೇಷಣೆಯೇ ಆಗಿರುತ್ತದೆ. ಕರ್ನಾಟಕದ ಆಳರಸರಿಂದ ದೊರೆತ ಪ್ರೋತ್ಸಾಹ, ಉದಾರಾಶ್ರಯಗಳಿಂದಾಗಿ ಜೈನರು ಜನಭಾಷೆಯಾದ ಕನ್ನಡದಲ್ಲಿ ಗ್ರಂಥರಚನೆ ಮಾಡಲು ಸಾಧ್ಯವಾಯಿತು. ಇಲ್ಲಿ ಆಳ್ವಿಕೆ ನಡೆಸಿದ ಅಲೂಪರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಜೈನಧರ್ಮೀಯರೂ, ಜೈನಧರ್ಮದ ಬಗ್ಗೆ ಒಲವು ಇರಿಸಿಕೊಂಡಂತಹ ದೊರೆಗಳಿಂದ ಜೈನಧರ್ಮದ ಜೊತೆಗೆ ಕನ್ನಡ ಸಾಹಿತ್ಯವೂ ಅಜರಾಮರವಾಯಿತು.

ಇಂತಹ ರಾಜಕೀಯ, ಸಾಂಸ್ಕೃತಿಕ ಸಂದರ್ಭದಲ್ಲಿ ಉದಿಸಿದ ಕವಿ ರತ್ನಾಕರವರ್ಣಿ. ಇವನು 'ಭರತೇಶ ವೈಭವ'ವನ್ನು ಸಾಂಗತ್ಯಛಂದಸ್ಸಿನಲ್ಲಿ ರಚಿಸಿ ತುಳುನಾಡಿನ ಜೈನಧರ್ಮದ ಸಾರಸರ್ವಸ್ವವನ್ನು ತನ್ನ ಕಾವ್ಯದಲ್ಲಿ ಹರಳುಗಟ್ಟಿಸಿದ್ದಾನೆ. 'ಭರತೇಶ ವೈಭವ'ದ ಕಥೆಯು ಉತ್ತರಭಾರತದ್ದು. ಆದರೆ ಕಾವ್ಯವನ್ನು ಓದುತ್ತಾ ಹೋದಂತೆ ತುಳುನಾಡಿನ ಮಣ್ಣಿನಲ್ಲಿ ನಡೆದಾಡಿದಂತೆ ಭಾಸವಾಗುತ್ತದೆ.

೨. ಉದ್ದೇಶ

ತುಳುನಾಡಿನ ಇತಿಹಾಸದ ಅಧ್ಯಯನದ ಸಂದರ್ಭದಲ್ಲಿ ವಿದ್ವಾಂಸರು ಇಲ್ಲಿನ ರಾಜಕೀಯ ಆಗುಹೋಗುಗಳ ಬಗ್ಗೆ ಹೆಚ್ಚು ಆಸಕ್ತರಾಗಿದ್ದಾರೆಯೇ ಹೊರತು ತುಳುಮಣ್ಣಿನಲ್ಲಿ ಹುಟ್ಟಿ ಇಲ್ಲಿನ ಪ್ರಾದೇಶಿಕತೆಯನ್ನು, ಸಾರಸಂಸ್ಕೃತಿಯನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿರುವುದರ ಬಗೆಗೆ ಅಧ್ಯಯನ ನಡೆದಿಲ್ಲವೆನಿಸುತ್ತದೆ. 'ಅಯ್ಯಯ್ಯ ಎಂಚ ಪೊರ್ಲಾಂಡೆಂದು' ತುಳುವರು ಮೆಯ್ಯುಬ್ಬಿ ಕೇಳಬೇಕೆಂಬ ರತ್ನಾಕರವರ್ಣಿಯ ಕನಸು 'ಭರತೇಶ ವೈಭವ'ದಲ್ಲಿ ನೆರವೇರಿದ ಬಗೆಯನ್ನು ಇಲ್ಲಿ ಸಮೀಕ್ಷಿಸಲಾಗಿದೆ.

[illegible]

ಸ್ತ್ರೀರೂಪ, ಗೀತ, ನೃತ್ಯ, ನಾಟಕ, ಆರೋಗಣೆ, ಮುನಿಭುಕ್ತಿ ಸಂಧಿಗಳಲ್ಲಿ ತುಳುನಾಡಿನ ಸಾಂಸ್ಕೃತಿಕ ಬದುಕಿನ ಚಿತ್ರಗಳು ಅಡಗಿವೆ. ಡಾ। ಮಹಾದೇವ ಕಣವಿಯವರು ತಮ್ಮ ಸಂಶೋಧನಾ ಪ್ರಬಂಧಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕತೆಯ ಬಗ್ಗೆ ಶ್ರೀ ಕುವೆಂಪು ಅವರೊಡನೆ ನಡೆಸಿದ ಸಂದರ್ಶನದಲ್ಲಿ ಅವರು ಜಾಗತಿಕ ಕಾದಂಬರಿಗಳ ಬಗ್ಗೆ ಮಾತನಾಡುತ್ತಾ "ರಶಿಯನ್ ಕಾದಂಬರಿಗಳಿಗೆ ವಿಶಾಲತೆಯಿದೆ, ವೈವಿಧ್ಯವಿದೆ. ದೇಶ ವಿಶಾಲವಾದುದರಿಂದ ಆ ಕಾದಂಬರಿಗಳು ಪ್ರಾದೇಶಿಕವೂ ಆಗುತ್ತವೆ, ಐತಿಹಾಸಿಕವೂ ಆಗುತ್ತವೆ, ಜಾಗತಿಕವೂ ಆಗುತ್ತವೆ. ರಷ್ಯಾದಂತೆ ಭಾರತವೂ ವಿಶಾಲವಾದ, ಬಹುಸಂಸ್ಕೃತಿಯ ದೇಶ. ಬಹುಭಾಷೆಯ ನೆಲ. ಅಂತೆಯೇ ಇಲ್ಲಿನ ಕಾವ್ಯಗಳು ಪ್ರಾದೇಶಿಕತೆಯನ್ನೊಳಗೊಂಡೇ ಇಡೀ ದೇಶದ ಸಂಸ್ಕೃತಿಯನ್ನು ಬಿಂಬಿಸುವುದನ್ನು ನಾವು ಕಾಣಬಹುದಾಗಿದೆ" ಎಂದಿದ್ದಾರೆ.

೩. ಅಧ್ಯಯನಕ್ಕೆ ಆಕರಗಳು

ತುಳುನಾಡಿನ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿ ಇಲ್ಲಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವಲ್ಲಿ ನೆರವಾಗುವ ಕೆಲವು ಸಂಶೋಧನಾ ಗ್ರಂಥಗಳನ್ನು ಹೆಸರಿಸಬಹುದು. ಡಾ. ಸೂರ್ಯನಾಥ ಕಾಮತರ 'Tuluva in Vijayanagara Time' (೧೯೬೫), ಡಾ. ಬಿ.ಎಸ್. ಶಾಸ್ತ್ರಿಯವರ 'The Portuguese in Kanara' (೧೯೬೯), ಡಾ. ವಸಂತಮಾಧವರ 'Political History of Kanara' ೧೫೬೫–೧೭೬೩ mainly based on Inscriptions (೧೯೭೬), ಡಾ. ಪಿ.ಎನ್. ನರಸಿಂಹಮೂರ್ತಿಯವರ 'Jainism on the Kanara Coast' (೧೯೮೩), ಡಾ. ವಸಂತ ಶೆಟ್ಟರ 'Barakuru-A Metropolitan City of Antiquity History and Culture' (೧೯೮೪) ಮೊದಲಾದ ಗ್ರಂಥಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಸಾದರಪಡಿಸಿದ ಗ್ರಂಥಗಳಾಗಿದ್ದು ಇನ್ನೂ ಪ್ರಕಟಗೊಂಡಿಲ್ಲ. ಡಾ. ವಸಂತಮಾಧವರ 'Religion in Kanara' (೧೯೮೦), 'Trends in Karnataka' (೧೯೭೬) ಕೃತಿಗಳು ಅಮೂಲ್ಯ ಆಕರಗ್ರಂಥಗಳಾಗಿದ್ದು, ಅಭ್ಯಾಸಿಗಳಿಗೆ ಹೆಚ್ಚು ನೆರವನ್ನೂ ಮಾರ್ಗದರ್ಶನವನ್ನೂ ನೀಡುತ್ತವೆ. ಡಾ. ಗುರುರಾಜ ಭಟ್ಟರ ಗ್ರಂಥದ ೧೪ನೇ ಅಧ್ಯಾಯವು 'Jainism in Tulunadu' (ಪು. ೪೨೬) ಜೈನ ಸಂಸ್ಕೃತಿಯ ಬಗ್ಗೆ ಅಧಿಕೃತ ಮಾಹಿತಿಯನ್ನು ನೀಡುವ ಪ್ರಥಮ ಪ್ರಯತ್ನವಾಗಿದೆ. ಜೈನ ಶಾಸನ, ಶಿಲ್ಪ, ಸಾಹಿತ್ಯಗಳನ್ನು ಆಧರಿಸಿ ತುಳುನಾಡಿನ ಜೈನಧರ್ಮದ ಸ್ವರೂಪವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಸುಮಾರು ೧೧೯ ಛಾಯಚಿತ್ರಗಳನ್ನು ನೀಡಿ ತಮ್ಮ ಸಂಶೋಧನೆಗೆ ಖಚಿತ ರೂಪವನ್ನು ನೀಡಿದ್ದಾರೆ. ಇದೇ ಮಾದರಿಯಲ್ಲಿ ಡಾ. ಕೆ.ವಿ. ರಮೇಶರು ಬರೆದ 'ತುಳುನಾಡಿನ ಇತಿಹಾಸ' (೧೯೬೯) ಮತ್ತು ಡಾ. ರಮೇಶ ಎಂ.ಜೆ. ಶರ್ಮಾ ಅವರು ಜೊತೆಯಾಗಿ ರಚಿಸಿರುವ 'ತುಳುನಾಡಿನ ಅರಸುಮನೆತನಗಳು' (೧೯೮೫) ಕೂಡ ಗಮನಿಸಬೇಕಾದ ಕೃತಿಗಳಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇತರ ಸಂಘಸಂಸ್ಥೆಗಳು ಹೊರತಂದಿರುವ ಸ್ಮರಣಸಂಚಿಕೆಗಳಲ್ಲಿ ತುಳುನಾಡಿನ ಜೈನಧರ್ಮ ಮತ್ತು ಸಂಸ್ಕೃತಿಯ ಕುರಿತು ಕೆಲವು ಬಿಡಿಬಿಡಿಯಾದ ಲೇಖನಗಳು ಕಂಡುಬರುತ್ತವೆ. ಪಂಚಕಜ್ಜಾಯ (ಕ.ಸಾ. ಪ. ೧೯೨೭– ಮಂಗಳೂರು)ದಲ್ಲಿ ಎಂ.ಜಿ. ಐತಾಳರ 'ತುಳುನಾಡಿನಪ್ರಾಚೀನ ಕವಿಗಳು' ಪಂಜೆ ಮಂಗೇಶರಾಯರು ಬರೆದಿರುವ 'ಮೂಡಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು', ಗೋವಿಂದ ಪೈ ಅವರು ಬರೆದ 'ಇತಿಹಾಸದ ಇರುಳಲ್ಲಿ ತುಳುನಾಡು' ಲೇಖನಗಳಿವೆ. ಪ್ರಾಚೀನ ಕವಿಗಳು' ಪಂಜೆ ಮಂಗೇಶರಾಯರು ಬರೆದಿರುವ 'ಮೂಡಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು',ಗೋವಿಂದ ಪೈ ಅವರು ಬರೆದ 'ಇತಿಹಾಸದ ಇರುಳಲ್ಲಿ ತುಳುನಾಡು' ಲೇಖನಗಳಿವೆ.

ತೆಂಕನಾಡು (ಕ.ಸಾ.ಪ. ೧೯೪೭ – ಕಾಸರಗೋಡು) ಸ್ಮರಣಸಂಚಿಕೆಯಲ್ಲಿ ಗೋವಿಂದ ಪೈಗಳು ಬರೆದ 'ತುಳುನಾಡು', ಸಾಲೆತ್ತೂರರು ಬರೆದ 'ಅಳಿಯ ಸಂತಾನ ಕಟ್ಟು', ಶ್ರೀಪಾದ ಶರ್ಮರು ಬರೆದಿರುವ 'ದಕ್ಷಿಣ ಕನ್ನಡದಲ್ಲಿ ಜೈನಧರ್ಮದ ಕುರುಹುಗಳು' – ಮುಂತಾದ ಲೇಖನಗಳಿವೆ. ದಿಬ್ಬಣ (ದ.ಕ.ಜಿ.ಸಾ. ಸ. ೧೯೭೧, ಕಾರ್ಕಳ)ದಲ್ಲಿ ಗುರುರಾಜ ಭಟ್ಟರು ಬರೆದ 'ಕಾರ್ಕಳ ಮೂಡುಬಿದಿರೆಯ ಐತಿಹಾಸಿಕ ಹಿನ್ನೆಲೆ' ಲೇಖನವು ಉಪಯುಕ್ತ ವಿವರಗಳನ್ನೊಳಗೊಂಡಿದೆ. ಇದೇ ರೀತಿ ನೇತ್ರಾವತಿ (ದ.ಕ.ಜಿ.ಸ. ೧೯೮೫) ಸ್ಮರಣಸಂಚಿಕೆಯಲ್ಲಿ ಡಾ। ಪಿ. ಎನ್. ನರಸಿಂಹಮೂರ್ತಿಯವರು ಬರೆದ 'ದಕ್ಷಿಣ ಕನ್ನಡದಲ್ಲಿ ಜೈನಧರ್ಮ' ಹಾಗೂ ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ (ಭುವನೇಂದ್ರ ಕಾಲೇಜು, ೧೯೮೫)ದಲ್ಲಿ ಇದೇ ಲೇಖಕರು ಬರೆದಿರುವ 'ಇತಿಹಾಸ – ಕಲೆ ಮತ್ತು ಸಂಸ್ಕೃತಿ' ಲೇಖನದಲ್ಲಿ ಜೈನ ಸಂಸ್ಕೃತಿಯ ಬಗ್ಗೆ ಚರ್ಚಿಸಿದ್ದಾರೆ.

ಜೈನ ಧರ್ಮದ ಪೂರಕ ಮಾಹಿತಿಯನ್ನು ನೀಡುವ ಪುಟ್ಟಸ್ವಾಮಿ ಡಿ. ಅವರ 'ಆಯ್ದ ಕುಸುಮಗಳು' (೧೯೫೩), 'ಜೈನತತ್ವಸಾರಸಂಗ್ರಹ' (೧೯೬೫), ಲಕ್ಷ್ಮೀಸೇನ ಭಟ್ಟಾರಕರ 'ಗೃಹಸ್ಥರ ನಿತ್ಯ ದಿನಚರಿ' (೧೯೫೯), ಪದ್ಮನಾಭ ಶರ್ಮರ 'ಜೈನ ಸಂಸ್ಕೃತಿಯ ಪರ್ವಗಳು' (೧೯೬೯), ಪ. ನಾಗರಾಜಯ್ಯನವರ 'ಹೋಮವಿಧಿ ಕ್ರಿಯಾದರ್ಪಣ' (೧೯೮೮), ಡಾ। ವಿವೇಕ ರೈ ಅವರ 'ತುಳು ಜನಪದ ಸಾಹಿತ್ಯ' (೧೯೮೫), ಡಾ। ಚಿನ್ನಪ್ಪ ಗೌಡರ 'ಭೂತಾರಾಧನೆ – ಜಾನಪದೀಯ ಅಧ್ಯಯನ' (೧೯೯೦), ಡಾ। ಯು.ಪಿ. ಉಪಾಧ್ಯಾಯ ಮತ್ತು ಡಾ । ಸುಶೀಲ ಪಿ. ಉಪಾಧ್ಯಾಯ ಇವರ 'Bhuta Worship' (೧೯೮೪) ಮೊದಲಾದ ಗ್ರಂಥಗಳು. ತುಳುನಾಡಿನ ಜೈನಧರ್ಮದ ಸಾಂಸ್ಕೃತಿಕ ಸ್ವರೂಪದ ವಿವಿಧ ಮುಖಗಳನ್ನು ದಾಖಲಿಸಿ ಪರಿಚಯಿಸುವಲ್ಲಿ ನಮಗೆ ನೆರವಾಗುತ್ತವೆ.

ಕನ್ನಡದಲ್ಲಿ ಬಂದಿರುವ ಕೆಲವು ಗ್ರಂಥಗಳನ್ನೂ ಇಲ್ಲಿ ಉಲ್ಲೇಖಿಸಬಹುದು. ಶೀನಪ್ಪ ಹೆಗ್ಗಡೆ ಅವರು ಬರೆದಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯಕಟ್ಟು' (೧೯೧೫), ಶ್ರೀನಿವಾಸ ಕಿಣಿಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಸಾರ' (೧೯೨೯), ಗಣಪತಿ ರಾವ್ ಐಗಳ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' (೧೯೨೩) ಈ ಮೂರು ಗ್ರಂಥಗಳನ್ನು ಇಲ್ಲಿ ನೆನೆಯಬಹುದು. ಇವುಗಳಲ್ಲಿ ಐಗಳರ್ ಅವರ ಗ್ರಂಥವು ಅತ್ಯಮೂಲ್ಯವಾದ ಮಾಹಿತಿಯನ್ನೊಳಗೊಂಡಿದೆ. ತಮಗೆ ದೊರೆತಿರುವ ಅನೇಕ ಐತಿಹ್ಯಗಳು, ಜನಪದ ಕಥೆಗಳು, ಕೈಫಿಯತ್ತು, ಶಾಸನ, ಇತರ ದಾಖಲೆಗಳನ್ನೆಲ್ಲ ಕಲೆ ಹಾಕಿ ದಕ್ಷಿಣ ಕನ್ನಡದ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಜೈನ ತುಂಡರಸರ ಚರಿತ್ರೆಯನ್ನು ಸಾಕಷ್ಟು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ತಮ್ಮ ಗ್ರಂಥದ ಕೊನೆಯಲ್ಲಿ ತಾವು ಸಂಗ್ರಹಿಸಿದ್ದ ದಾಖಲೆಗಳನ್ನು ಯಥಾವತ್ತಾಗಿ ನೀಡಿ ಉಪಕರಿಸಿದ್ದಾರೆ. ಆ ಬಳಿಕ ಬಂದ ಕೇಶವ ಕುಡ್ವರ 'ದಕ್ಷಿಣ ಕನ್ನಡದ ಇತಿಹಾಸ (ತುಳುವ ಚರಿತ್ರೆ)' (೧೯೪೮), ಶೀನಪ್ಪ ಹೆಗಡೆ ಮತ್ತು ನಾರಾಯಣ ಕಿಲ್ಲೆಯವರ 'ಪ್ರಾಚೀನ ತುಳುನಾಡು' (೧೯೫೪), ಗುರುರಾಜ ಭಟ್ಟರ 'ತುಳುನಾಡು' (೧೯೬೩) ಗ್ರಂಥಗಳನ್ನು ಕೂಡ ಗಮನಿಸಬಹುದಾಗಿದೆ. ಈ ಕೃತಿಗಳು ತುಳುನಾಡನ್ನು ಕೇಂದ್ರವಾಗಿರಿಸಿಕೊಂಡು ಅಧ್ಯಯನ

ನಡೆಸಿದ್ದರೂ ಅಲ್ಲಲ್ಲಿ ಜೈನ ಪರವಾದ ಕೆಲವು ಸಂಗತಿಗಳನ್ನು ಉಲ್ಲೇಖಿಸುತ್ತವೆ. ಗುರುರಾಜ ಭಟ್ಟರ ತುಳುನಾಡು ಕೃತಿಯಲ್ಲಿ ಹದಿನಾರು ಅಧ್ಯಾಯಗಳಿವೆ. ತುಳುನಾಡಿನಲ್ಲಿರುವ ಮೂಲ ಜನಾಂಗಗಳ ಬಗ್ಗೆ ಅವರು ಚರ್ಚೆ ನಡೆಸಿದ್ದಾರೆ. ಇವುಗಳಲ್ಲಿ 'ತುಳುನಾಡಿನಲ್ಲಿ ಜೈನಧರ್ಮ' (ಪು. ೧೮೬) ಎಂಬ ಲೇಖನವು ಜೈನಧರ್ಮದ ಆಗಮನದ ಬಗ್ಗೆ ವಿಶೇಷವಾಗಿ ಚರ್ಚಿಸುತ್ತದೆ. ಲೋಕನಾಥ ಶಾಸ್ತ್ರಿಗಳ 'ಮೂಡಬಿದಿರೆಯ ಚರಿತ್ರೆ' (೧೯೩೭), 'ಸೂತಕಗೋತ್ರ ವಿಚಾರ' (೧೯೫೦), ವೇಣೂರಿನ ಗತವೈಭವ (೧೯೫೦) – ಈ ಮೂರು ಕೃತಿಗಳು ಚಿಕ್ಕವಾದರೂ ಜೈನ ಸಂಸ್ಕೃತಿಯ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುವಲ್ಲಿ ಗಮನಿಸಬೇಕಾದ ಗ್ರಂಥಗಳಾಗಿವೆ.

ಈ ಎಲ್ಲಾ ಮಾಹಿತಿಗಳು ಡಾ। ಎಸ್. ಡಿ. ಶೆಟ್ಟರ 'ತುಳುನಾಡಿನ ಜೈನಧರ್ಮ' ಎಂಬ ಮಹಾಪ್ರಬಂಧದಲ್ಲಿ ನಮಗೆ ದೊರೆಯುತ್ತವೆ. ಆದರೆ ಒಬ್ಬ ಕವಿಕೃತ ಕಾವ್ಯದಲ್ಲಿ ನೆಲೆಗೊಂಡಿರುವ ಆ ಮಣ್ಣಿನ ಮೂಲಸತ್ವವನ್ನು ಕುರಿತ ಅಧ್ಯಯನ ನಡೆದಿಲ್ಲ. ರತ್ನಾಕರವರ್ಣಿಯ 'ಭರತೇಶ ವೈಭವ'ದಲ್ಲಿ ಕರಾವಳಿಯ ಅನೇಕ ಪ್ರಾದೇಶಿಕ ಅಂಶಗಳು ಬಿಂಬಿತವಾಗಿದ್ದು ತುಳುನಾಡಿಗೆ ಸಂಬಂಧಿಸಿದ ಹಲವಾರು ಚಿತ್ರಣಗಳು ನಮಗೆ ಲಭ್ಯವಾಗುತ್ತವೆ.

ಚಾರಿತ್ರಿಕ ದಾಖಲೆಗಳು ಕಟ್ಟಿಕೊಡುವ ಪ್ರಾದೇಶಿಕ ಸಂಸ್ಕೃತಿಗಿಂತ ಕಾವ್ಯ, ಕಲೆಗಳಲ್ಲಿ ದೊರೆಯುವ ಚಿತ್ರಗಳು ಭಿನ್ನವಾಗಿರುತ್ತವೆ. ರಾಜಕೀಯ ಚರಿತ್ರೆಯೇ ಪ್ರಧಾನವಾಗಿರುವ ನಮ್ಮ ಚರಿತ್ರೆಯ ವಿವರಗಳು ಪ್ರಭುತ್ವದ ಪರವಾಗಿರುತ್ತದೆ. ಆದರೆ ರತ್ನಾಕರನಂತಹ ಕವಿ 'ಅರಸು'ಗಳಿಗಿಂತ ದೂರನಿಂತು ಸ್ವಪ್ರತಿಭೆಯನ್ನು ನೆಚ್ಚಿಕೊಂಡು ಬರೆದವನು. ಹೀಗಾಗಿ ಅವನ ಕಾವ್ಯ ನಿರ್ಮಿತಿಯಲ್ಲಿ ದೊರೆವ ನೆಲದ ಸಂಸ್ಕೃತಿ ಹೆಚ್ಚು ವಾಸ್ತವವೂ ಸಹಜವೂ ಆಗಿರುವ ಸಾಧ್ಯತೆ ಇದೆ.

೪. ಪ್ರಾದೇಶಿಕತೆಯ ಸ್ವರೂಪ, ನಿರ್ವಚನ

'ಪ್ರಾದೇಶಿಕತೆ' ಎನ್ನುವುದು ಇತ್ತೀಚಿನ ದಿನಗಳ ಅಧ್ಯಯನಗಳಲ್ಲಿ ಬಳಕೆಯಾಗುತ್ತಿರುವ ಚರ್ಚೆಗೆ ಒಳಗಾಗುತ್ತಿರುವ ಪರಿಕಲ್ಪನೆಯಾಗಿದೆ. ಇದು ಪ್ರಾದೇಶಿಕ ಇತಿಹಾಸ, ಪ್ರಾದೇಶಿಕ ಅಧ್ಯಯನ, ಪ್ರಾದೇಶಿಕ ಸಂಸ್ಕೃತಿ... ಹೀಗೆ ಭಿನ್ನ ಭಿನ್ನ ನೆಲೆಗಳಲ್ಲಿ ಬಳಕೆಯಾಗುತ್ತಿರಬಹುದು. ಪ್ರಾದೇಶಿಕ ಎಂಬ ಪದಕ್ಕೆ ಮಿತಿಗಳಿಲ್ಲ; ವಸ್ತುಶಃ ಅದು ಒಂದು ಪ್ರದೇಶದ ಜೀವನ ವಿಧಾನದಿಂದ ಹಿಡಿದು ಸಾಹಿತ್ಯ – ಸಂಸ್ಕೃತಿಗಳ ನೆಲೆಗಳಲ್ಲಿ ಎಲ್ಲ ಮಗ್ಗುಲುಗಳಿಂದಲೂ ಚರ್ಚಿಸುವಂತಾದ್ದಾಗಿದೆ. ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಜನಸಮುದಾಯ ಅವರ ನಂಬಿಕೆ, ಅರಾಧನೆ, ಆಹಾರ ಪದ್ಧತಿ, ಕೃಷಿ ಆಚರಣೆ... ಇತ್ಯಾದಿ ಎಲ್ಲ ಮುಖಗಳನ್ನೂ ಪರಿಶೀಲಿಸಬೇಕಾಗುತ್ತದೆ.

"ಪ್ರಾಚೀನ ಭಾರತದ ಹಳ್ಳಿಗಳನ್ನು ನಗರ, ಗ್ರಾಮ, ಅಂಚು, ಪ್ರಾದೇಶಿಕ ಕಾಡು ಎಂದು ವಿಂಗಡಿಸುವ ಪದ್ಧತಿಯಿದ್ದು 'ಪ್ರಾದೇಶಿಕತೆ' ಹಳ್ಳಿ ಮತ್ತು ವನಗಳ ನಡುವಿನ ಪ್ರದೇಶದ ಜನಜೀವನವೆಂದು ಹೇಳಲಾಗುತ್ತದೆ. 'ಆಕ್ಸ್‌ಫರ್ಡ್' ಶಬ್ದಕೋಶದಲ್ಲಿ ಪ್ರಾದೇಶಿಕ ಎನ್ನುವುದು ಪ್ರಾಚೀನ ಅರ್ಥದಲ್ಲಿ

ರಾಜ್ಯವೆನ್ನುವ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ಇಂದು ಕೇವಲ ಭೂಭಾಗ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಪ್ರಾಕೃತಿಕ ಸ್ವರೂಪ, ಜಲ ವಾಯುವಿನ ಜೀವ, ವನಸ್ಪತಿಗಳಿಂದ ವಿಶಿಷ್ಟವಾದದ್ದು ಎಂದೂ ಅರ್ಥವಿದೆ. 'ಅಮೇರಿಕನ್ ಕಾಲೇಜು ವಿಶ್ವಕೋಶ'ದಲ್ಲಿ ಪಟ್ಟಣ, ಇಲ್ಲವೇ ಶಾಸನಕ್ಕೊಳಪಟ್ಟ ವಿಭಾಗ ಎಂದೂ, 'ದಿ ವರ್ಲ್ಡ್ ಬುಕ್ ವಿಶ್ವಕೋಶ'ದಲ್ಲಿ ಒಂದು ರಾಜಕೀಯ ಭೌಗೋಳಿಕ ಸಂಲಗ್ನತೆಗೊಳಪಟ್ಟ ಪ್ರದೇಶವೆಂದೂ 'ಅಮೇರಿಕಾನಾ ವಿಶ್ವಕೋಶ'ದಲ್ಲಿ 'ಪ್ರಾದೇಶಿಕ'ವೆಂದರೆ ಪ್ರಾಕೃತಿಕ ಮತ್ತು ಸಾಮಾಜಿಕವಾದ ಒಂದು ಅಖಂಡ ಭೂಭಾಗ, ಅವರ ರೀತಿ –ನೀತಿಗಳು, ಆದರ್ಶಗಳು, ನಂಬಿಕೆಗಳು, ಭೌಗೋಳಿಕ ಮಾನ್ಯತೆ ಮತ್ತು ಮನೋವೈಜ್ಞಾನಿಕ ಸ್ವರೂಪಗಳಲ್ಲಿ ಸಮಾನತೆ ಇರುವಂತಹುದಾಗಿದ್ದು ಇವುಗಳ ಆಧಾರದಿಂದಲೇ ಅವರನ್ನು ಬೇರ್ಪಡಿಸಬಹುದಾಗಿದೆ"[೧] ಎನ್ನಲಾಗುತ್ತಿದೆ. ಸಾಹಿತ್ಯದ ಉಗಮ ಸಮಾಜದಿಂದಲೇ ಆಗಿರುತ್ತದೆ. ಸಮಾಜಕ್ಕೂ ಸಾಹಿತ್ಯಕ್ಕೂ ಇರುವ ನಂಟು ಅಬಾಧಿತವಾದದ್ದು. ಒಂದು ಕಾವ್ಯವು ಕಾಲ, ದೇಶಗಳ ಪರಿಧಿಯೊಳಗೆ ರೂಢವಾದ ಕವಿಯ ಸ್ಪಂದನವಾಗಿರುತ್ತದೆ. ನಿರ್ವಾತದಲ್ಲಿ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲದ ಕವಿಯು ಭಾಷೆಯನ್ನು ಮಾಧ್ಯಮವನ್ನಾಗಿ ಬಳಸಿ ತನ್ನ ಕಾಲದ ಎಲ್ಲ ಮನುಷ್ಯರಿಗೂ ಸಮಾನವಾದ ಅಥವಾ ತಾನಿರುವ ಸಾಮಾಜಿಕ ಪರಿಸರಕ್ಕೆ ವಿಶಿಷ್ಟವಾದ ಸ್ಥಿತಿಗಳಿಗೆ ಕನ್ನಡಿ ಹಿಡಿಯುತ್ತಾನೆನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ಯಾವುದೇ ಕಾವ್ಯವಿರಲಿ, ಮಹಾಕಾವ್ಯವೇ ಆಗಿರಲಿ, ಅದು ಮೂಡಿ ಬಂದ ಯುಗಕ್ಕೆ ಸ್ಪಂದಿಸುತ್ತ ಆ ಕಾಲದ ಎಲ್ಲಾ ಸಾಂಸ್ಕೃತಿಕ ವಿಚಾರಧಾರೆಗಳಿಗೆ ಮುಖವಾಣಿಯಾಗಿ ಯುಗ ಧರ್ಮದೊಡನೆ ಗುಪ್ತಗಾಮಿನಿಯಾಗಿ ಹರಿದು ಎಲ್ಲವನ್ನೂ ಮೌನವಾಗಿ ದಾಖಲಿಸುತ್ತದೆ. ಒಂದು ಸಮಾಜದ ನಡುವೆ ಬದುಕಿ ಅದರ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಪ್ರವಾಹಕ್ಕೆ ಒಳಗಾಗಿ ತನ್ನ ಸ್ವಂತ ಜೀವನವನ್ನು ನೋಡುವುದರ ಜತೆಗೆ ಸೂಕ್ಷ್ಮ ದೃಷ್ಟಿಯಿಂದ ಸುತ್ತಣ ಬದುಕಿನಲ್ಲಿ ನಡೆಯುವ ಮನುಕುಲದ ಎಲ್ಲ ನೆಲೆಗಳ ವ್ಯಾಪಾರಗಳನ್ನು ಒಬ್ಬ ಚಿತ್ರಕಾರ ಹೇಗೆ ತನ್ನ ಕಲಾಕೃತಿಯಲ್ಲಿ ಹಿಡಿದಿಡುವನೋ, ನಾಟಕಕಾರ ತನ್ನ ಪಾತ್ರಗಳಲ್ಲಿ ಅದನ್ನು ಹೇಗೆ ಅಭಿವ್ಯಕ್ತಿಪಡಿಸುತ್ತಾನೋ, ಅಂತೆಯೇ ಕವಿಯೂ ತನ್ನ ಕಾವ್ಯದಲ್ಲಿ ಪಡಿಮೂಡಿಸಬಲ್ಲ.

"ಪ್ರಾದೇಶಿಕ ಎಂಬ ಘಟಕದ ಅಸ್ತಿತ್ವವನ್ನು ರೂಪಿಸುವ ಅಂಶಗಳು ಹಲವು.

೧. ಜನರು

೨. ಭಾಷೆಗಳು

೩. ವೃತ್ತಿಗಳು

೪. ಸಾಹಿತ್ಯಿಕ ರಚನೆಗಳು

೫. ಭೌತಿಕ ನಿರ್ಮಾಣಗಳು

೬. ಸಾಮಾಜಿಕ ಆಚರಣೆಗಳು

೭. ಪ್ರದರ್ಶಕ ಕಲೆಗಳು

೮. ಪ್ರಾಣಿ ಜಗತ್ತು

೯. ಸಸ್ಯಲೋಕ

೧೦. ಭೌಗೋಳಿಕ – ನದಿ – ಬೆಟ್ಟ, ಗುಡ್ಡ – ಖನಿಜ ಸಂಪನ್ಮೂಲಗಳು

ಈ ಪಟ್ಟಿಯನ್ನು ಇನ್ನೂ ಬೆಳೆಸಬಹುದು. ಪ್ರಸ್ತುತ ಪಟ್ಟಿಯಲ್ಲಿ ಉಲ್ಲೇಖಿಸಿರುವ ವಿಷಯಗಳ ನಡುವೆ ಅಂತರ್‌ಸಂಬಂಧವಿರುವುದು ನಿಜ. ಈ ವಿಷಯಗಳು ಪ್ರಾದೇಶಿಕತೆಯ ಕುರಿತ ನಮ್ಮ ಗ್ರಹಿಕೆಯನ್ನು ಸಂಕೀರ್ಣಗೊಳಿಸುತ್ತವೆ. ಪ್ರದೇಶ, ಪ್ರಾದೇಶಿಕತೆ ಒಂದು ಸರಳ ಗ್ರಹಿಕೆಗೆ ದಕ್ಕುವಂತದ್ದಲ್ಲ ಎಂದು ಸೂಚಿಸುವುದು ನನ್ನ ಉದ್ದೇಶವಾಗಿದೆ. ತಾತ್ವಿಕ ಚರ್ಚೆಯ ದೃಷ್ಟಿಯಿಂದ ಪ್ರಾದೇಶಿಕತೆಯನ್ನು ಒಳಗೊಳ್ಳುವ ಘಟಕಗಳು ಪ್ರಧಾನವಾಗಿ ಮೂರು; ೧. **ಮನುಷ್ಯ ಘಟಕ**. ೨. **ಪ್ರಾಣಿ ಘಟಕ**. ೩. **ಸಸ್ಯ ಘಟಕ**. ಈ ಮೂರು ಘಟಕಗಳ ಅಂತರ್ ಸಂಬಂಧದಲ್ಲಿಯೆ ಸಾಹಿತ್ಯ ಮತ್ತು ಸಂಸ್ಕೃತಿಯ ತಾತ್ವಿಕತೆ ಇರುವುದನ್ನು ಡಾ। ಪುರುಷೋತ್ತಮ ಬಿಳಿಮಲೆಯವರು “ಕರಾವಳಿ ಜನಪದ ಕಾವ್ಯದ ತಾತ್ವಿಕ ಹಿನ್ನೆಲೆ” ಎಂಬ ಲೇಖನದಲ್ಲಿ ಸೊಗಸಾಗಿ ವಿಶ್ಲೇಷಿಸಿದ್ದಾರೆ.”[೨]

ಪ್ರಾದೇಶಿಕ ಕಾದಂಬರಿಯನ್ನು ಕುರಿತು ‘ಬ್ರಿಟಾನಿಕಾ ವಿಶ್ವಕೋಶ’ದಲ್ಲಿ “The Regional novel as a serious genere has been devoloped in many directions since Maria Edgeworth’s studies of Irish provihcial life and Balzac’s category of scences of provincial life in “La Comede Humane” There are for example, the American novels of south and many great fictional studies of rural, Urban and Metropolitan communities - George Eliits”. “Middle March” and Balzac’s “La Pere Garriot”[೩] ಎಂದು ವಿವರಿಸಲಾಗಿದೆ. ಇಲ್ಲಿ ಹೇಳಿರುವ ವಿಚಾರಗಳು ಬಹುಮುಖ್ಯವಾಗಿದ್ದು, ಪ್ರಾದೇಶಿಕ ಕಾದಂಬರಿಗಳು ಹಳ್ಳಿಯ, ಪಟ್ಟಣದ, ಅಂತರರಾಷ್ಟ್ರೀಯ, ಸಮ್ಮಿಶ್ರ ವರ್ಗಶ್ರೇಣಿಯ ಜನಜೀವನವನ್ನು ಚಿತ್ರಿಸುತ್ತವೆ. ಪ್ರಾದೇಶಿಕ ಕಾದಂಬರಿಗಳ ಕುರಿತಾಗಿ ‘ಅಮೇರಿಕಾನಾ ವಿಶ್ವಕೋಶದಲ್ಲಿ, “The term regionalism is applied to a variety of literary movements which emphasize the use of unique interests; language and culture of each local unit in country as fundamental elements, of aggragate national literature”[೪] ಎಂಬ ವಿವರಣೆ ಇದೆ. “ಪ್ರಾದೇಶಿಕತೆ” ಎನ್ನುವುದು ಆಯಾ ಪ್ರದೇಶಗಳ ವಿಶಿಷ್ಟವಾದ ಭಾಷೆ, ಸಂಸ್ಕೃತಿ ಮತ್ತು ಅಲ್ಲಿಯ ಜನಗಳ ಆಸಕ್ತಿ ಆಶೋತ್ತರಗಳನ್ನು ಅವುಗಳಿಗೆ ಒತ್ತನ್ನು ಕೊಡುವ ಪ್ರಾದೇಶಿಕ ಘಟಕಗಳನ್ನೊಳಗೊಂಡ ರಾಷ್ಟ್ರೀಯ ಸಾಹಿತ್ಯದ ಭಾಗವಾಗಿಯೇ ಬೆಳೆಯುತ್ತದೆ. ಹೀಗೆ “ಪ್ರಾದೇಶಿಕತೆ”

ಎನ್ನುವುದು ಒಂದು ರಾಷ್ಟ್ರದ ಚಿಕ್ಕ ಘಟಕವಾಗಿರಬಹುದು, ಇಲ್ಲವೇ ಅತಿ ವಿಸ್ತಾರವಾದ ಸಮ್ಮಿಶ್ರ ವರ್ಗ ಶ್ರೇಣಿಯನ್ನು ಒಳಗೊಂಡಿರಬಹುದು ಎಂಬ ವಿಚಾರ ಸ್ಪಷ್ಟವಾಗುತ್ತದೆ. ಅಂದರೆ, ಪ್ರಾದೇಶಿಕ ಕಾದಂಬರಿಗಳು ಇತರ ಬಗೆಯ ಕಾದಂಬರಿಗಳಂತೆ ವಿಶಾಲವಾದ 'ಜನಜೀವನ'ವನ್ನು ಕುರಿತವು ಎಂಬುದು ಗಮನಾರ್ಹ"[೫]

ಸಾಹಿತ್ಯ ಚಿಂತನೆಗಳು ತಮ್ಮ ಮೂಲಭೂತ ಪರಿಕಲ್ಪನೆಯಲ್ಲಿ ಬಹುಮುಖ್ಯ ಅಂಶಗಳಾದ ಕಲಾತ್ಮಕತೆ, ಸರ್ವಕಾಲಿಕತೆ ಮತ್ತು ಬದ್ಧತೆ ಈ ಮೂರು ಅಂಶಗಳು ಕಾಲಚಕ್ರದಲ್ಲಿ ಬದಲಾವಣೆಗೊಳಪಡುತ್ತಾ ಇರುತ್ತವೆ. ಒಂದು ಕಾವ್ಯದಲ್ಲಿ ಕವಿಗೆ ವೇದ್ಯವಾದ ಎಲ್ಲ ಅಂಶಗಳೂ ದಾಖಲೀಕರಣಗೊಂಡಿರುತ್ತವೆ. ರಾಜೇಂದ್ರ ಚೆನ್ನಿ ತಮ್ಮ 'ಅಮೂರ್ತತೆ ಮತ್ತು ಪರಿಸರ'ದಲ್ಲಿ ಹೀಗೆ ಹೇಳಿದ್ದಾರೆ; "ಮೂರ್ತತೆ ಕೇವಲ ಸಂವಹನೆ ಅಥವಾ ಅಭಿವ್ಯಕ್ತಿಗೆ ಸೀಮಿತವಾದುದಲ್ಲ. ಅದು ಒಬ್ಬ ಸಾಹಿತಿ ಅನುಭವವನ್ನು ಗ್ರಹಿಸುವ ಬಗೆಗೆ, ಅವನು ತನಗೆ ಸಾಹಿತ್ಯಿಕ – ಚಾರಿತ್ರಿಕ ಸಂದರ್ಭದಲ್ಲಿ ದಕ್ಕಿದ ಅನುಭವದ ಅರ್ಥವನ್ನು ಶೋಧಿಸುವ ಬಗೆಗೆ ಸಂಬಂಧಪಟ್ಟದ್ದು. ಕೆಲವು ಸಾಮಾನ್ಯೀಕರಣಗಳ, ಅಮೂರ್ತ ಪರಿಕಲ್ಪನೆಗಳ ಸಹಾಯವಿಲ್ಲದೆಯೆ ಅನುಭವವನ್ನು ಗ್ರಹಿಸುವುದು ಅಥವಾ ಸಾಹಿತ್ಯ ಸಂವಹನೆಗೆ ಬೇಕಾದ ಹಾಗೆ ಅರ್ಥೈಸುವುದು ಅಸಾಧ್ಯವೇನೋ ನಿಜ"[೬]

ಪ್ರಾದೇಶಿಕ ಸಂವೇದನೆಯು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಅನೇಕ ತಂತ್ರಗಳನ್ನು ಬಳಸಿಕೊಂಡಿದೆ. ಇದು ಪ್ರಾದೇಶಿಕತೆಯ ಚರಿತ್ರೆಯ ವಾಸ್ತವತೆಯ ಹಲವು ಮಗ್ಗುಲುಗಳಲ್ಲಿನ ಒಂದು ಲಕ್ಷಣವಾಗಿದೆ. ಕಾವ್ಯಗಳು ರಾಷ್ಟ್ರೀಯ ಅಥವಾ ಭಾರತೀಯ ಎನ್ನಬಹುದಾದ ಎಲ್ಲ ಧಾರ್ಮಿಕ, ಸಾಂಸ್ಕೃತಿಕ ಚೌಕಟ್ಟುಗಳ ವಿರುದ್ದ ತನ್ನ ಪ್ರಾದೇಶಿಕತೆಯನ್ನು ಮಿಳಿತಗೊಂಡು ಮೂಡಿದೆ. "ಸಂಸ್ಕೃತದ ಲಾಕ್ಷಣಿಕ ವಿಮರ್ಶೆಯ ಸೂತ್ರಗಳು, ಸಂಸ್ಕೃತಿಯ ಮೂಲದಲ್ಲಿರುವ ಪುರಾಣಕತೆಗಳು ಇವು ಭಾರತೀಯವೆನ್ನಬಹುದಾದ ಅಮೂರ್ತಗಳಾಗಿದ್ದರೂ, ಇವುಗಳನ್ನು ಪ್ರಾದೇಶಿಕ ಸಂವೇದನೆಗೆ ಅಳವಡಿಸಿಕೊಳ್ಳುವಾಗ ದೇಸಿ ನುಡಿಗಟ್ಟುಗಳನ್ನು ರಚನೆಗಳನ್ನು ಮತ್ತು ಪುರಾಣಕತೆಗಳಲ್ಲಿ ಮಾರ್ಪಾಟುಗಳನ್ನು ನಮ್ಮ ಬರಹಗಾರರು ಬಳಸಿಕೊಂಡರು. ಹೀಗೆ ಮಾಡುವಾಗ ಪ್ರಾದೇಶಿಕ ಅನುಭವದ ದಟ್ಟತೆಯನ್ನು, ಸಾಂದ್ರತೆಯನ್ನು ನಮ್ಮ ಬರಹಗಾರರು ಬಳಸಿಕೊಳ್ಳಬೇಕಾಯಿತು. ಅಂದರೆ ಉದ್ದೇಶಪೂರ್ವಕವಾಗಿ ನಮ್ಮ ದೃಷ್ಟಿಯನ್ನು ತೀರ ಹತ್ತಿರದ ವಾಸ್ತವದ ಮೇಲೆ ಕುದುರಿಸಿಕೊಂಡರು."[೭]

ಪ್ರಾದೇಶಿಕತೆಯೆಂದರೆ ಅದು ಕೇವಲ ಒಂದು ನಿರ್ದಿಷ್ಟ ಜನಾಂಗದ, ಪ್ರದೇಶದ ಸರ್ವತೋಮುಖ ಲಕ್ಷಣಗಳಲ್ಲ, ಆದಾಗ್ಯೂ ಅದು ಸಾರ್ವತ್ರಿಕವಾಗುತ್ತದೆ. ರಾಷ್ಟ್ರೀಯ ನೆಲೆಗಟ್ಟಿನಲ್ಲಿ ನಿಲ್ಲಬಲ್ಲಂತಹ ಕಾದಂಬರಿ ಪ್ರಾದೇಶಿಕವಾಗಿರಬಹುದು. 'ಪ್ರಾದೇಶಿಕತೆ'ಯನ್ನು ಒಂದು ಪ್ರಕಾರವಾಗಿ ಅಥವಾ ವರ್ಗೀಕರಣವಾಗಿ ಪರಿಗಣಿಸುವುದು ತಪ್ಪೆನಿಸುತ್ತದೆ. ಅದು ಮಣ್ಣಿಂದ ಸಹಜವಾಗಿ ಕಥಾನಕದೊಡನೆ ಮೂಡಿಬಂದ ಅವಿರ್ಭಾವ.

"ಷೇಕ್ಸ್‌ಪಿಯರ್ ಒಂದೆಡೆ ತನ್ನ ನಾಟಕಗಳನ್ನು ಕುರಿತು "To give a local habitation and a name" ಸ್ಥೂಲವಾಗಿ ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಅವಶ್ಯಕತೆ, ಅದರ ವೈಶಿಷ್ಟ್ಯಗಳನ್ನು

ಪರ್ಯಾಯವಾಗಿ ಸೂಚಿಸಿದ್ದಾನೇನೋ ನಿಜ. ಆದರೆ ಆತನ ದೃಷ್ಟಿಯಲ್ಲಿ ನಾಟಕದ ವಸ್ತು ಪಾತ್ರಗಳಲ್ಲಿ, ಅವುಗಳ ಸಂಯೋಜನೆಯಲ್ಲಿಯೇ ಆತನಿಗೆ ಹೆಚ್ಚು ಆಸಕ್ತಿಯಿತ್ತೆಂದು ತೋರುತ್ತದೆ"[೮]. ಅಂತೆಯೇ ಪ್ರಾದೇಶಿಕತೆಯೆಂದರೆ ಕೇವಲ ಒಂದು ಪ್ರದೇಶ ಅಥವಾ ಭೌಗೋಳಿಕತೆಗೆ ಅನ್ವಯಿಸಿ ಹೇಳಲಾಗದು. ಆದರೆ ಭೌಗೋಳಿಕತೆಯ ಸಕಲ ವಿವರಗಳು ಇಲ್ಲದೆ ಪ್ರಾದೇಶಿಕತೆಯ ನಿರ್ವಚನವೂ ಅಸಾಧ್ಯವೆನಿಸುತ್ತದೆ. ಒಂದು ರಾಷ್ಟ್ರದ ಜನಾಂಗದ ಭೌಗೋಳಿಕ ಪರಿಸರ, ಆರ್ಥಿಕ, ಸಾಮಾಜಿಕ ಸಮಸ್ಯೆಗಳು, ರೂಢಿ, ಸಂಸ್ಕಾರಗಳು, ಭಾಷೆ, ಉಡುಗೆ – ತೊಡುಗೆ... ಹೀಗೆ ಕವಿ ತನ್ನ ಕಾಲದ ಜೀವನವನ್ನು ಸಮಗ್ರತೆಯಲ್ಲಿ ಬಿಂಬಿಸಬೇಕು.

ಸಾಹಿತ್ಯ ಕೃತಿಯನ್ನು ಕೇವಲ ಕೃತಿಯೆಂದು ಮಾತ್ರ ಪರಿಗಣಿಸಬೇಕು, ಕವಿಯ ಕಾಲಕ್ಕೆ ಸಂಬಂಧಿಸಿದ ಆತ್ಮ ಕಥನಾತ್ಮಕ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಅನಗತ್ಯ ಎಂಬ ವಾದವೂ ಇದೆ. ಆದರೆ ಈ ವಾದವನ್ನು ಸುಳ್ಳಿನ ತಳಹದಿಯ ಮೇಲೆ ನಿಂತಿದೆ ಎಂದು ತಳ್ಳಿ ಹಾಕಬೇಕಾಗಬಹುದು. ಉದಾಹರಣೆಗೆ ಅಕ್ಕಮಹಾದೇವಿ, ಬಸವಣ್ಣನವರ ವಚನಗಳನ್ನು ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತಿಗತಿಗಳ ಹಿನ್ನೆಲೆಯಿಲ್ಲದೆ ಅಧ್ಯಯನ ಅಸಾಧ್ಯ. ಒಂದು ಕಾವ್ಯದ ಆವಿರ್ಭಾವಕ್ಕೆ ಕಾರಣವಾದ ಸಾಮಾಜಿಕ ಸಂದರ್ಭ ಅಥವಾ ಸೂಕ್ತ ಪರಿಸರವನ್ನು ಗಮನಿಸುವುದಾದರೆ ಪ್ರಾಚೀನ ಕಾವ್ಯಗಳ ಮಟ್ಟಿಗಂತೂ ಅದು ಒಂದು ಸಾಮಾಜಿಕ ಅಧ್ಯಯನವೇ ಆಗಿದೆ.

ಕಾವ್ಯಕ್ಕೆ, ಸಾಹಿತ್ಯಕ್ಕೆ ಪ್ರಾದೇಶಿಕತೆಯಿಂದಾಗುವ ಲಾಭವೇನು ಎಂಬ ಪ್ರಶ್ನೆಗೆ ಉತ್ತರವನ್ನು ನಾವು "Eneyclopedia Americana"ದಲ್ಲಿ ನೋಡಬಹುದಾಗಿದೆ. "Regionalism recognizes the power of environment in moulding the artist and his readers and claims that the artist expresses himself most effectively when his people and his place speak through him. The expression in literature of a way of life charactic of a region resulting from areas physical, historic and cultural features will inevitably vary from region to region. It will have diverse subject matter, the physical land scape, local customs, speech and points of view and will employ a variety of techniques growing out of the folk and local modes of expression with their dis-smilar rythoms, imagery and synbolism. This diversity should reginalists believe, be cherished and ecouraged as a means of providing a complete picture of American scene and devoloping a truely national culture, for it is only through discovering developing and using the resources of each separate community that any thing approaching universality is likely to be achived"[೯] ಈ ಹೇಳಿಕೆಯು ಸಾರ್ವತ್ರಿಕ ಪ್ರಾದೇಶಿಕ ಧೋರಣೆಯಾಗಿದೆ.

ಒಂದು ಭಾಷೆಯ ಸಾಹಿತ್ಯ ಚರಿತ್ರೆಯು ಒಂದು ಸಮುದಾಯದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಗೆ ಸಮನಾಂತರವಾಗಿ ಬೆಳೆಯುವ ಸಂಗತಿ. ಸಾಹಿತ್ಯ ಚರಿತ್ರೆಕಾರನು ಯಾವಾಗಲೂ ಕವಿ, ಕೃತಿಗಳ ಕಾಲ, ಜಾತಿ, ಕೌಟುಂಬಿಕ ಸಂಗತಿಗಳಿಂದ ಮಾತ್ರ ಪ್ರಭಾವಿತನಾಗಿರುವುದಿಲ್ಲ, ಬದಲಾಗಿ ಸಾಹಿತಿಯು ತಾನು ಕಾವ್ಯ ರಚಿಸಿದ ಕಾಲದ ಸಕಲ ರಾಜಕೀಯ, ಸಾಂಸ್ಕೃತಿಕ, ಜನಾಂಗಿಕ ಸಂದರ್ಭಗಳ ಕಡೆಗೆ ಇವನ ಗಮನ ಹರಿಯುತ್ತದೆ.

ಕೊನೆ ಟಿಪ್ಪಣಿ

೧. **ಡಾ। ಮಹಾದೇವ ಕಣವಿ** : ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು, ಒಂದು ಅಧ್ಯಯನ, ಪುಟ ಸಂ. ೬೫, ಪ್ರತಿಮಾ ಪ್ರಕಾಶನ

೨. **ಡಾ। ಕೆ. ಚಿನ್ನಪ್ಪ ಗೌಡ,** : ಸಂಸ್ಕೃತಿ ಸಿರಿ, ಅಧ್ಯಾಯ – ೨೦ – ಪ್ರಾದೇಶಿಕ ಇತಿಹಾಸ ಮತ್ತು ಜಾನಪದ, ಪು. ಸಂ. ೨೮೫, ಮುಡಿಪು ಪ್ರಕಾಶನ ಮಂಗಳ ಗಂಗೋತ್ರಿ

೩. Encyclopedia Britanica, Vol. 16

೪. Encyclopedia Americana, Vol. 17, P. 473

೫. **ಡಾ। ಮಹಾದೇವ ಕಣವಿ** : ಕನ್ನಡ ಪ್ರಾದೇಶಿಕ ಪ್ರಾದೇಶಿಕ ಕಾದಂಬರಿಗಳು ಒಂದು ಅಧ್ಯಯನ, ಪುಟ ಸಂ. ೫೭, ಪ್ರತಿಮಾ ಪ್ರಕಾಶನ

೬. **ರಾಜೇಂದ್ರ ಚೆನ್ನಿ** : ಅಮೂರ್ತತೆ ಮತ್ತು ಪರಿಸರ, ಪುಟ ಸಂ. ೧ ಅನನ್ಯ ಗ್ರಂಥಮಾಲೆ ಪ್ರಕಾಶನ

೭. **ರಾಜೇಂದ್ರ ಚೆನ್ನಿ** : ಅಮೂರ್ತತೆ ಮತ್ತು ಪರಿಸರ, ಪುಟ ಸಂ. ೩೭ ಅನನ್ಯ ಗ್ರಂಥಮಾಲೆ ಪ್ರಕಾಶನ

೮. **ಡಾ। ಮಹಾದೇವ ಕಣವಿ** : ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು ಒಂದು ಅಧ್ಯಯನ, ಪುಟ ಸಂ. ೭೦, ಪ್ರತಿಮಾ ಪ್ರಕಾಶನ

ಅಧ್ಯಾಯ : ಎರಡು

ರತ್ನಾಕರವರ್ಣಿಯ ಬದುಕು, ವ್ಯಕ್ತಿತ್ವ, ಕೃತಿಗಳು

1. ರತ್ನಾಕರವರ್ಣಿಯ ಬದುಕು : ಐತಿಹ್ಯಗಳ ಸುತ್ತಮುತ್ತ
2. ರತ್ನಾಕರವರ್ಣಿಯ ಕೃತಿಗಳು – ಸಮೀಕ್ಷೆ

ಅಧ್ಯಾಯ : ಎರಡು
ರತ್ನಾಕರ ವರ್ಣಿಯ ಬದುಕು, ವ್ಯಕ್ತಿತ್ವ, ಕೃತಿಗಳು

೧. ರತ್ನಾಕರನ ಬದುಕು : ಐತಿಹ್ಯಗಳ ಸುತ್ತಮುತ್ತ

ತುಳುನಾಡಿನ ಮಹಾಕವಿ ರತ್ನಾಕರವರ್ಣೀ 'ಭರತೇಶ ವೈಭವ'ವೆಂಬ ಮಹಾಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿ, 'ಸಾಂಗತ್ಯಲೋಕದ ಚಕ್ರವರ್ತಿ' ಎನಿಸಿಕೊಂಡಿದ್ದಾನೆ. "ಕೇಳಿರೋ ಭವ್ಯರು ನಿಮಗೊಂದು ಸುಕಥೆಯ ಹೇಳುವೆನು ಎಂದು ಆಶ್ಚರ್ಯಕರವಾದ ಆತ್ಮಪ್ರತ್ಯಯದೊಡನೆ ಅವನು ತನ್ನ 'ಭರತೇಶ ವೈಭವ'ವನ್ನು ನಿರೂಪಿಸಿದ್ದಾನೆ"[೧]. ೧೬ನೆಯ ಶತಮಾನದ ಕನ್ನಡ ಕವಿಗಳಲ್ಲಿ ಅಗ್ರಗಣ್ಯನೆನಿಸಿದ್ದಾನೆ. "ಇವನಿಗಿಂತ ಮೊದಲು ಸಾಂಗತ್ಯದಲ್ಲಿ ಅನೇಕರು ಕೃತಿ ರಚನೆ ಮಾಡಿದ್ದರೂ, ಇಂದಿಗೂ ಸಾಂಗತ್ಯದ ಗಾಡಿ, ಮೋಡಿಗಳಲ್ಲಿ, ದನಿಬನಿಗಳಲ್ಲಿ, ತಿರುವು ಮುರುವುಗಳಲ್ಲಿ ಅವನನ್ನು ಮೀರಿಸಿದ ಕವಿಯಿಲ್ಲ. ಇವನು ಕನ್ನಡಕ್ಕೆ ಮಹಾಕವಿಯಲ್ಲದೆ ಜಾಗತಿಕ ಮಹಾಕವಿಗಳ ಸಾಲಿಗೆ ಸೇರುತ್ತಾನೆ."[೨] ಕರ್ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಮೂಡುಬಿದಿರೆಯ ಹೆಸರನ್ನು ಚಿರಸ್ಥಾಯಿಗೊಳಿಸಿ ಅದಕ್ಕೊಂದು ವಿಶಿಷ್ಟವಾದ ಸ್ಥಾನವನ್ನು ದೊರಕಿಸಿಕೊಟ್ಟಿದ್ದಾನೆ. ಕನ್ನಡ ಸಾಂಗತ್ಯ ಸಾಹಿತ್ಯದಲ್ಲಿ 'ಭರತೇಶ ವೈಭವ' ಕಾವ್ಯವೊಂದು ಮೈಲುಗಲ್ಲಾಗಿದ್ದು ರತ್ನಾಕರವರ್ಣಿಯ ಹೆಸರು ಸುವರ್ಣಾಕ್ಷರಗಳಲ್ಲಿ ಬರೆದಿರಿಸಬೇಕಾದುದು

"ಮಣಿಶೈಲ ಗತಿಯಿಂದು ಶಾಲಿಶಕಕಾಲಂ ಸಂಧಿರಲ್ತೌಳವಾಂಗಣದೊಳ್ ವೇಣುಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ"[೩] ಎಂಬ ಇನ್ನೊಂದು ಹೇಳಿಕೆ ಈತನು ತುಳುನಾಡಿನ ವೇಣುಪುರದಲ್ಲಿ ಇದ್ದನೆಂಬುದಕ್ಕೆ ಸಾಕ್ಷ್ಯವಾಗಿದೆ. ಇವನ ಬಗ್ಗೆ ಹೆಚ್ಚಿನ ವಿವರಗಳು ನಮಗೆ ಕ್ರಿ.ಶ. ೧೭೭೦-೧೮೪೧ರ ನಡುವೆ ಬಾಳಿದ ದೇವಚಂದ್ರನ ರಾಜಾವಳಿ ಕಥೆಯಿಂದ ತಿಳಿಯುತ್ತವೆ. ಇದರಲ್ಲಿ ರತ್ನಾಕರನ ಬಗ್ಗೆ ಈ ಉಲ್ಲೇಖ ಇದೆ; "ತುಳುವ ದೇಶದ ಮೂಡುಬಿದಿರೆಯೊಳ್ ಸೂರ್ಯವಂಶದರಸುಗಳನ್ವಯದೊಳೆ ದೇವರಾಜನ ಪುತ್ರಂಗೆ ಕಡಲಾದಿ ಪರಮೇಶನ ಪೆಸರಿಡೆ ಬಾಲಕಾಲದೊಳೆ ಕಾವ್ಯಾಲಂಕಾರ ಲಕ್ಷಣಶಾಸ್ತ್ರದೊಳತಿ ನಿಪುಣನಾಗಿ ಸಾರತ್ರಯಕ್ಕೆ ಕೇಶವವರ್ಯರು ರಚಿಸಿದ ವ್ಯಾಖ್ಯಾನಂಗಳಂ ಕುಂದಕುಂದಾರ್ಯೋಕ್ತ ಆಧ್ಯಾತ್ಮ ಸಿದ್ಧಾಂತಕ್ಕೆ ಪ್ರಭೇಂದುಗಳು ಮಾಡಿದ ಟೀಕಂ ಸಮಾಧಿಶತಕ ಏಕಸಪ್ತತಿ ಸ್ವರೂಪ – ಸಂಬೋಧನೆ ಮೊದಲಾದನೇಕ ಪರಮಾಗಮಂಗಳಂ ಹೃದ್ಗತಮಾಗೆ ತಿಳಿದು ಕವೀಶ್ವರನಾಗಿ ಆ ದೇಶದರಸು ಸೋಮವಂಶದ ಭೈರಸ ಒಡೆಯರ ಸಭೆಯೊಳೆ ಶೃಂಗಾರಕವಿಯೆಂಬ ಪೆಸರಾಂತು ವಿದ್ವಾಂಸರ್ಗಧಿಕನಾಗಿ ಯೋಗರತ್ನಾಕರ ಶಾಸ್ತ್ರಾಭ್ಯಾಸದಿಂ ದಶವಾಯುಗಳಂ ಸಾಧಿಸಿರ್ದು ರತ್ನಾಕರನೆಂಬ ಅಭಿದಾನದಿಂ ಪೂರ್ವ ವಯಸ್ಸಿನೊಳೆ ಭೈರಸ ಒಡೆಯರ ಪುತ್ರಿ ಮೋಹಿಸೆ ಸೌದಾಗ್ರಮನೇರಿ ವಾಯುಧಾರಣೆಯಂ ಮಾಡಿ ದಶವಾಯುಗಳಂ ಸಾಧಿಸಿ ಯೋಗಾಭ್ಯಾಸದೊಳೆ

ಪ್ರೌಢನಾಗಿರ್ದುದರಿಂದಾಕೆಯೊಳತ್ಯಾಸಕ್ತನಾಗಿ ಆಕೆಯಂ ಕೂಡಲು ಸೌಧಾಗ್ರದ ಮೇಖಲೆಯನೇರಿ ವಾಯುಧಾರಣೆಯಿಂ ಗವಾಕ್ಷದಿಂದ್ಯೈದುತ್ತೆ ಅವಳೊಳೆ ನೇಹಂ ಮಾಡುತ್ತಿರಲ್ ಅರಸನರಿದು ಪಿಡಿಯುಲುದ್ಯೋಗಿಸಲ್ ಆ ರಾತ್ರಿಯೊಳೆ ಪೋಗಿ ನಿಜಗುರುವಪ್ಪ ಮಹೇಂದ್ರ ಕೀರ್ತಿಗಳಿಂದ ಅಣುವ್ರತ ದೀಕ್ಷೆಗೊಂಡು ಆಗಮಂಗಳೊಳತಿ ನಿಪುಣನಾಗಿ ಆಧ್ಯಾತ್ಮದೊಳಹರ್ನಿಶಂ ಕೂಡಿರೆ ವಿಜಯಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ವೃತ್ತ ವಚನದಿಂ ಮಾಡಿ ಆನೆಯ ಮೇಲೆ ಪ್ರಭಾವನೆಯಂ ಮಾಡಿಸಲೀ ರತ್ನಾಕರಾರ್ಯಂ ಭರತೇಶ್ವರ ಚರಿತಮಂ ೮೪ ಸಂಧಿಯಂ ಮಾತಂಗ ಮನೇರಿಸಿ ಮರೆಯಿಸವೇಲ್ಕೆಂಬುದುಂ ಪಟ್ಟಾಚಾರ್ಯರು ಇದರೊಳೆರಡು ಮೂರು ವಾಕ್ಯಂ ಪುರಾಣಕ್ಕೆ ವಿರೋಧಮಿರ್ಪುದದರಿಂದಾಗದೆಂಬುದುಂ ಅದೆ ಸಂವಾದವಾಗಿ ಚರ್ಚಿಸಿದೊಡೆ ತನ್ನ ತಿರಸ್ಕರಿಸಿ ೭೦೦ ಶ್ರಾವಕರ ಗೃಹದೊಳ್ ಚರಿಗೆಯಂ ಮಾಡದಿರಲ್ ನಿಜಾನುಜೆಯಿಂದಾಹಾರಮಂ ಕೊಳ್ಳುತ್ತೆ ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲಮಾವುದಾದದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ ಬಸವಪುರಾಣಮಂ ಮೊದಲಾಗಿ ಮಾಡಿ ಕೆಲವು ದಿನದಿಂ ಮೇಲೆ ಉಪಶಮಮಂ ತಾಳ್ದು ಸನ್ಮಾರ್ಗದೊಳ್ ನಂಬಿ ನಡೆದಂ. ರತ್ನಾಕರ ಶತಕಂ, ಅಪರಾಜಿತ ಶತಕಂ, ತ್ರಿಲೋಕ ಶತಕಂ, ಆಧ್ಯಾತ್ಮ ಗೀತಗಳ್ ೭೦೦೦ ಗ್ರಂಥದಷ್ಟು ಪೇಲಿದಂ, ಶಕವರುಷ ೧೪೭೯ ಸಂದಿದಿರ್ದುದು. ರಾಜ ಒಡೆಯರ ಕಾಲವಾದ ಮೇಲೆ ಚಾಮರಾಜನ ಕಾಲದಲ್ಲಿ ರತ್ನಾಕರಾರ್ಯವಿರಚಿತ ಭರತೇಶ್ವರ ಚರಿತೆ ೮೪ ಸಂಧಿಯನೋದಿದರು"[೪]

ರತ್ನಾಕರವರ್ಣಿಯು ಮೂಡುಬಿದಿರೆಯ ಸೂರ್ಯವಂಶಕ್ಕೆ ಸೇರಿದ ದೇವರಾಜನ ಮಗ. ಕ್ಷತ್ರಿಯ ವಂಶಜನಾಗಿ ಹುಟ್ಟಿ ಅಂತಹ ವಾತಾವರಣದಲ್ಲಿ ಅವನು ಬೇಗಬೇಗನೆ 'ಕಾವ್ಯಾಲಂಕಾರಶಾಸ್ತ್ರದೊಳತಿ ನಿಪುಣ'ನಾದನು. ಮುಂದೆ ಅವನ ಗುರುವಾದ ಚಾರುಕೀರ್ತಿ ಅವನಿಗೆ ಶ್ರೀ ಶುಚಿದೀಕ್ಷೆಯನ್ನು ಕೊಟ್ಟರು. "ಮೋಕ್ಷ ಗುರು ಹಂನಾಥನೆಂದು ಹೇಳುವುದು ಚಾರುಕೀರ್ತಿಯನ್ನು ಕುರಿತೇ ಎಂದು ತೋರುತ್ತದೆ"[೫] ಎಂಬ ಮಾತೂ ಸಹ ಚರ್ಚಾಸ್ಪದವಾಗಿದೆ. ಹೀಗೆ ಶಾಸ್ತ್ರಪಾರಂಗತನಾದ ರತ್ನಾಕರವರ್ಣಿಯು ಕಾರ್ಕಳದ ಬೈರರಸವೊಡೆಯರ ಆಸ್ಥಾನದಲ್ಲಿ ಆಶ್ರಯವನ್ನು ಪಡೆದು ಶೃಂಗಾರಕವಿಯೆಂದು ಹೆಸರು ಗಳಿಸಿದನು. ಭೈರರಸನ ಪುತ್ರಿ ಈತನಲ್ಲಿ ಅನುರಕ್ತಳಾದಂತೆ. ಇವರ ಪ್ರಣಯ ರಹಸ್ಯ ಅರಸನಿಗೆ ತಿಳಿಯಲು ರತ್ನಾಕರವರ್ಣಿಯು ತನ್ನ ತಲೆಯನ್ನುಳಿಸಿಕೊಳ್ಳಲು ಹುಂಚಕ್ಕೆ ಧಾವಿಸಿ ಮಹೇಂದ್ರ ಕೀರ್ತಿಗಳಿಗೆ ಶರಣಾಗಿ ಅಣುವ್ರತಧಾರಿಯಾದನು. ವಿಜಯಣ್ಣನ "ದ್ವಾದಶಾನುಪ್ರೇಕ್ಷೆ"ಯನ್ನು ಮೀರಿಸಲು ರತ್ನಾಕರವರ್ಣಿಯು "ಭರತೇಶ ವೈಭವ"ವನ್ನು ರಚಿಸಿದನು. ಆದರೆ ಇದರಲ್ಲಿ ಜೈನ ಧರ್ಮ ವಿರೋಧಿ ಅಂಶಗಳಿವೆಯೆಂದು ಕೆಲವು ಕುಹಕಿಗಳು ಆಕ್ಷೇಪ ವ್ಯಕ್ತಪಡಿಸಲು ಮನನೊಂದ ರತ್ನಾಕರ ಸಿದ್ಧನು ವೀರಶೈವನಾಗಿ ಲಿಂಗಧಾರಣೆ ಮಾಡಿದರೂ ಕೊನೆಗೆ ಕೋಪ ತಿಳಿಯಾದ ಮೇಲೆ ಪುನಃ ಜೈನಧರ್ಮಕ್ಕೆ ಹಿಂದಿರುಗಿದುದು ಸ್ವಾರಸ್ಯಪೂರ್ಣವಾಗಿದೆ.

"ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ತಾಂಪುಟ್ಟಿಯಾದೀಕ್ಷೆಯಂ ।
ಧರಿಸೀ ಸನ್ನುತ ಕಾವ್ಯ ಶಾಸ್ತ್ರಗಳುಮಂ ನಿರ್ಮಾಣಮಂ ಮಾಡುತಂ ।

ವರರತ್ನಾಕರಯೋಗಿಯೆಂದು ನಿರುತಂ ವೈರಾಗ್ಯ ಬಂದೇರಲಾಂ ।
ಹರದೀಕ್ಷಾವ್ರತನಾದೆನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥[೬]

ಎಂಬ ಶ್ಲೋಕ ಸೋಮೇಶ್ವರ ಶತಕದ ಕೆಲವು ಓಲೆ ಪ್ರತಿಗಳಲ್ಲಿದ್ದು ಸಂಶೋಧಕರ ಗಮನ ಸೆಳೆಯುತ್ತಿದೆ. ಮನಸ್ಸು ತಿಳಿಗೊಂಡ ಮೇಲೆ ರತ್ನಾಕರ ಪುನಃ ಜೈನ ಧರ್ಮಕ್ಕೆ ಹಿಂತಿರುಗಿ ಕಠಿಣ ವ್ರತಗಳನ್ನು ಪಾಲಿಸುತ್ತ ಶತಕತ್ರಯಗಳನ್ನು ಆಧ್ಯಾತ್ಮ ಗೀತಗಳನ್ನೂ ರಚಿಸಿದನು. ರತ್ನಾಕರನ ಪ್ರಣಯ ಪ್ರಸಂಗ ಮತ್ತು ಅವನ ಮತಾಂತರ ರೋಚಕ ಘಟನೆಗಳಾಗಿವೆ.

"ಕನ್ನಡದ ಮಕ್ಕಳ ಭಾವದ ಹಸಿವನ್ನು ತೀರಿಸಬಲ್ಲ"[೭] ಮಹಾಕವಿ ಎಂಬ ಪ್ರಶಂಸೆಗೆ ಪಾತ್ರನಾಗಿರುವ ರತ್ನಾಕರವರ್ಣಿ ಸ್ವಪರಿಚಯ ನಿರಾಸಕ್ತರಾಗಿರುವ ಪೂರ್ವದ ಮಹಾಕವಿಗಳ ಆದರ್ಶವನ್ನೇ ಅನುಸರಿಸಿದ್ದಾನೆ. ಈತನ ಯಾವುದೇ ಕೃತಿಯಲ್ಲಿಯೂ ಈತನ ಕಾಲದ ಬಗ್ಗೆಯಾಗಲೀ ಮಾತಾಪಿತರ ಬಗ್ಗೆಯಾಗಲೀ ಸ್ಪಷ್ಟವಾದ ವಿವರ ಸಿಗುವುದಿಲ್ಲ.

ರತ್ನಾಕರನೇ ತನ್ನ ಕಾವ್ಯದಲ್ಲಿ ಹೇಳಿಕೊಂಡಿರುವ ಸ್ವ ವಿಷಯ –

(ರತ್ನಾಕರನು 'ಭರತೇಶ ವೈಭವ'ದ ಸರ್ವರ ಮೋಕ್ಷ ಸಂಧಿಯಲ್ಲಿ ಬರೆದಿರುವನು)

ಕ್ಷತ್ರಿಯವಂಶಜನೆಂದು ಕರ್ಣಾಟ ಸುಕ್ಷೇತ್ರನೆಂದಣ್ಣಗಳೆಂದು ।
ಧಾತ್ರಿ ನುಡಿವುದವು ನನ್ನ ಸೊಮ್ಮಲ್ಲೆನ್ನ । ಗಾತ್ರದ ಸೊಮ್ಮಂಬೆ ನಾನು ॥೧೦೮॥
ಸಿದ್ಧಪದಕೆ ಸೋತೆನಾಗಿ ರತ್ನಾಕರ । ಸಿದ್ಧನೆಂದೆನಲೊಲ್ವೆನೊಮ್ಮೆ ।

ಶುದ್ಧನಿಶ್ಚಯದಲ್ಲಿ ನಿಚ್ಚನಿರಂಜನ । ಸಿದ್ಧನೆಂದಾನಿರುತಿಹೆನು ॥೧೦೯॥
ಆಮಯ ಜನನ ಮರಣವುಳ್ಳ ಜನಕರ । ನಾಮವ ಪೇಳ್ವರುರ್ವಿಯೊಳು ।
ಶ್ರೀಮಂದರಸ್ವಾಮಿ ನನ್ನಯ್ಯನೆಂದಾನು । ನೇಮದಿ ಸುಖವಡೆದಿಹನು ॥೧೧೦॥

ದೀಕ್ಷಾಗ್ರಗುರು ಚಾರುಕೀರ್ತಿಯೋಗೀಶ್ವರ । ಮೋಕ್ಷಾಗ್ರಗುರು ಹಂಸನಾಥ ।
ಲಕ್ಷಣವ್ಯವಹಾರನಿಶ್ಚಯದೊಳಗತಿ । ದಕ್ಷ ರತ್ನಾಕರಸಿದ್ಧ ॥೧೧೧॥

ಹೆರವರ ನುಡಿಯಿಲ್ಲದಾನಿರುತಿರ್ದ ನುಂ । ಡುರುಳಿ ಭಟ್ಟಾರಕರಂತೆ ।
ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ । ಗುರುಗಳಂತವರಾಡುತಿಹರು ॥೧೧೨॥

ಮೊಯ್ಯೆಳಿರ್ದಾತ್ಮನ ಬತ್ತಲೆಮಾಡಿ ನಾ । ನೊಯ್ಯ ನೀಕ್ಷಿಸಿದರೆ ತಾವು ।
ಮೆಯ್ಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ । ಹುಯ್ಯಲಿಡುತ ಸುತ್ತುತಿಹರು ॥೧೧೩॥

ಗುರುಹಂಸನಾಥನಾಜ್ಞೆಯೊಳು ಸಿದ್ಧಾಂತದ । ತಿರುಳಂದಾತ್ಮ ಲೀಲಾರ್ಥ ।
ಭರತೇಶ ವೈಭವವೆಂಬ ಕಾವ್ಯವನಿದ । ನೊರೆದೆನು ಸುಖಿಗಳಾಲಿಪುದು ॥೧೧೪॥

ಹಾಗೆಯೇ ರತ್ನಾಕರ ಶತಕದಲ್ಲಿ ಕೆಲವು ವಿಷಯಗಳನ್ನು ಹೇಳಿಕೊಂಡಿದ್ದಾನೆ.

"ಶೃಂಗಾರ ಶ್ರೀ ಕವಿ ಹಂಸರಾಜನೊಡೆಯಾ ರತ್ನಾಕರಧೀಶ್ವರಾ"
ಪರಸಂತೋಷಮೆ ಸೌಖ್ಯಮೆಂಬ ಪರದುಃಖಂ ತನ್ನನೋವೆಂಬ ತಾಂ ।
ಪರನೆಂಬಂದಮನಿಂತುಟೆಂಬ ಪರಲೋಕಂ ತನ್ನನಾಡೆಂಬ ತಾ ।
ತ್ಪರಮ ಜ್ಞಾನಿ ಜಗದ್ಗುರುಂ ಮಮಗುರುಂ ದೇವೇಂದ್ರ ಕೀರ್ತಿ ವ್ರತೀ ।
ಶ್ವರನಾತಂ ಪೆರನಲ್ತು ನೀನೆ ಪಲವೇಂ ರತ್ನಾಕರಧೀಶ್ವರಾ ॥೧೦೮॥

ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ವೆಂ ಕಾಮಿನೀ ಮೂತ್ರದೊ ।
ಜ್ವರ ಮೇಯ್ಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜಮೆಂದೆಂದು ನೆ ।
ತ್ತರನುಂಡಾ ತುಟಿಯಂ ಸುಧಾರುಚಿಎನುತ್ತಾಂ ಬಿಳ್ದುದಂ ಸಾಲದ ।
ನ್ಯರ ನೊಯ್ದೆಂ ಕವಿಯೋ ಮಂಕಪಿಯೋ ನಾಂ ರತ್ನಾಕರಧೀಶ್ವರಾ ॥೬೭॥

ತನ್ನ ಗುರುವನ್ನು ನೆನೆಯುತ್ತಾ ಭಕ್ತಿಯಿಂದ ಚರಣಕ್ಕೆರಗಿರುವ
ಮಣಿಶೈಲಂ ಗತಿಯಿಂದು ಶಾಲಿಶಕಕಾಲಂ ಸಂದಿರತ್ತೌಳದಾಂ ।
ಗಣದೊಶ್ವೇಣು ಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ ।
ಕ್ಷಣ ತಾತ್ಪರಮಿದೀ ತ್ರಿಲೋಕಶತಕಂ ಕಾನೀ ಪಗಲ್ತೊಟ್ಟು ಮುಂ ।
ದಣವೀರಾಂಗದ ಯೋಗಿ ಮುಟ್ಟುತಿಳೆಯೊಳ್ ಸಲ್ಲೀಲೆಯಿಂದೊಪ್ಪುದುಂ ॥೧೨೮॥

ತನ್ನ ಜನ್ಮದಾತರ ಬಗ್ಗೆಯಾಗಲೀ ಅಥವಾ ಇನ್ನಿತರ ಯಾವುದೇ ಮಾಹಿತಿಯನ್ನಾಗಲೀ ಸ್ಪಷ್ಟವಾಗಿ ಕವಿಯು ತನ್ನ ಕಾವ್ಯಗಳಲ್ಲಿ ನೀಡದಿರುವುದು ಸಂಶೋಧಕರಿಗೆ ಸವಾಲಾಗಿದೆ.

೨. ರತ್ನಾಕರವರ್ಣಿಯ ಕೃತಿಗಳು – ಸಮೀಕ್ಷೆ

೧. ತ್ರಿಲೋಕ ಶತಕ

೨. ಭರತೇಶ ವೈಭವ

೩. ರತ್ನಾಕರ ಶತಕ

೪. ಅಪರಾಜಿತ ಶತಕ

೫. ಆಧ್ಯಾತ್ಮ ಗೀತಂಗಳು

ತ್ರಿಲೋಕ ಶತಕವು ಕಂದದಲ್ಲಿ ರಚಿತವಾಗಿದೆ. ಈ ಶತಕದ ಕೊನೆಯಲ್ಲಿ "ಸಪೌದಶತಕಸ್ಯ ಭವ್ಯಂ ಭೂಯಾತ್" ಎಂದಿರುವುದರಿಂದ ಇದರಲ್ಲಿ ೧೨೮ ಪದ್ಯಗಳಿವೆ. ಇದರಲ್ಲಿ ಜೈನ ಧರ್ಮದನ್ವಯ ಪ್ರಾಪಂಚಿಕ ಸ್ವರೂಪವನ್ನು ವಿವರಿಸುತ್ತಾ ನರಕ, ಭುವನಲೋಕ, ನರಲೋಕ, ವ್ಯಂತರ ಲೋಕ, ಜ್ಯೋತಿರ್ಲೋಕ, ಸ್ವರ್ಗಲೋಕ, ಭೋಗ ಭೂಮಿ, ನಿಗೋದ, ಸಿದ್ಧಲೋಕ ಇತ್ಯಾದಿಗಳ ವಿವರಣೆಯಿದೆ.

ಅಪರಾಜಿತೇಶ್ವರ ಸ್ತುತಿಯೊಂದಿಗೆ ಪ್ರಾರಂಭಗೊಂಡಿರುವ ಈ ಶತಕದ ಒಂದು ಪದ್ಯ ಹೀಗಿದೆ.

ತುಂಬಿದ ಚಿದ್ಗುಣದುಂಬರ
ಮೆಂಬಂದದ ಬಯಲ ರೂಪು ಪುರುಷಾಕಾರಮು ।
ಮೆಂಬಿಯು ಮೂಮಿಂಟವರ್ಗೆ ಚಿ
ದಂಬರಪುರುಷರ್ಕಗಳೆಂದು ಸಾರ್ಥಕನಾಮಂ ॥

ಅಪರಾಜಿತೇಶ್ವರ ಶತಕವನ್ನು ವೃತ್ತದಲ್ಲಿ ಬರೆಯಲಾಗಿದ್ದು ಒಟ್ಟು ೧೨೭ ಪದ್ಯಗಳಿವೆ. ಪದ್ಯದ ಕೊನೆಯಲ್ಲಿ 'ಅಪರಾಜಿತೇಶ್ವರಾ' ಎಂಬ ಜಿನನಾಮವಿದ್ದು, ನೀತಿ, ವೈರಾಗ್ಯ, ಆತ್ಮನಿಗೆ ಸಂಬಂಧಿಸಿದ ವಿಚಾರಗಳು ಹೆಚ್ಚಾಗಿ ಪ್ರತಿಪಾದಿತವಾಗಿದೆ ಎನ್ನಬಹುದು. ಉದಾಹರಣೆಗಾಗಿ ಈ ಪದ್ಯವನ್ನು ನೋಡಬಹುದಾಗಿದೆ.

ಇಂಗಡದೊಳ್ ಮುಮಿಂಗಿದವೊಲಿರ್ಪುದು ಮೇಘವಡಂಗಿದರ್ಚವೆ
ಳ್ದಿಂಗಳ ಕಾಂತಿಯೊಳ್ ಬೆರೆಸಿದಂತೆ ವೊಲಿರ್ಪುದು ಸಿದ್ಧರಾಶಿಯೊಳ್ ।
ಸಂಗತವಾದವೊಲ್ ಮೆರೆವುದಾತ್ಮನೊಳಾತ್ಮನನಾತ್ಮನಿಂದೆ ಕಂ
ಚಂಗದೆವಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ ॥

ರತ್ನಾಕರ ಶತಕದಲ್ಲಿ ೧೨೭ ವೃತ್ತಗಳೂ ಒಂದು ಕಂದವೂ ಇದ್ದು ಇದು 'ಶತಕ ಸಾಹಿತ್ಯದ ಅನರ್ಘ್ಯ ರತ್ನ'ವೆಂದು ಕರೆಯಲ್ಪಟ್ಟಿದೆ. ಕವಿಯು ತನ್ನ ವೈಚಾರಿಕತೆ ಪರಿಪಕ್ವವಾದ ಇಳಿವಯಸ್ಸಿನಲ್ಲಿ ಈ ಕೃತಿಯನ್ನು ಬರೆದಿದ್ದಿರಬಹುದು. ಈ ಕಾವ್ಯದಲ್ಲಿ ತುಂಬಿಕೊಂಡಿರುವ ಆಧ್ಯಾತ್ಮದ ತಿರುಳು ಮತ್ತು ಕಾವ್ಯದ ಬಂಧ ಎಂತಹವರನ್ನೂ ಮರುಳುಗೊಳಿಸೀತು.

ಉದಾಹರಣೆ :–

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದುದುಗ್ರಾಸಿ ಬೆ
ದಿಸಲುಂ ಬಾರದ ಚಿನ್ಮಯಂ ಮರಿದು ತನ್ನೊಳ್ಪಂ ಪರಧ್ಯಾನದಿಂ ।
ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೆಯ್ಗೆಸಂ
ದಿಸಿದಂ ತನ್ನದೆ ಚಿಂತಿಸಲೆ ಸುಖಿಯಲಾ ರತ್ನಾಕರಾಧೀಶ್ವರಾ ॥

'ಆಧ್ಯಾತ್ಮ ಗೀತಂಗಳು' ಆಧ್ಯಾತ್ಮ ವಿಚಾರಗಳನ್ನು ಒಳಗೊಂಡ ಗೀತೆಗಳನ್ನು ಹೊಂದಿದ್ದು, ಸುಮಾರು ೨೦೦೦(ಸಾವಿರದಷ್ಟಿದ್ದ) ಗೀತೆಗಳಲ್ಲಿ ಕೇವಲ ೯೪ ಗೀತೆಗಳು ಮಾತ್ರ ದೊರೆತಿದೆ. ದೇವಚಂದ್ರನ 'ರಾಜಾವಳೀ ಕಥೆ'ಯಿಂದ ಈ ಕವಿಯು ಸುಮಾರು ೨೦೦೦ದಷ್ಟು ಗೀತೆಗಳನ್ನು ರಚಿಸಿದ್ದಾನೆಂದು ತಿಳಿದುಬರುವುದು. ಡಾ। ತ.ಸು. ಶಾಮರಾಯರ ಮಾತಿನಲ್ಲಿ ಹೇಳಬೇಕೆಂದರೆ, ಈ ಕೃತಿಯು 'ಜೈನೇತರರೂ ಬಳಸಿಕೊಂಡು ಭೋಗಿಸಬಹುದಾದ ದೊಡ್ಡ ಆಸ್ತಿ' "ಇವುಗಳಲ್ಲಿ ವೈಷ್ಣವ ಸಂಪ್ರದಾಯದ ಚಿಹ್ನೆಗಳೂ

ಕಾಣಿಸಿಕೊಳ್ಳುವುದರಿಂದ ನ್ಯಾಯವಾಗಿ ಇದನ್ನು 'ಅಣ್ಣನ ಪದ'ಗಳೆಂದು ಕರೆಯುವರೆಂದು ಹೇಳಲಾಗಿದೆ. ಇದರಲ್ಲಿ ಕವಿಯ ಸ್ವಾತಂತ್ರ ಮನೋವೃತ್ತಿಯನ್ನೂ, ಧಾರ್ಮಿಕ ಉದಾರತೆಯನ್ನೂ ಗಮನಿಸಬಹುದು"[೮]

ಉದಾಹರಣೆಯಾಗಿ ಈ ಕೆಳಕಂಡ ಪದ್ಯವನ್ನು ನೋಡಬಹುದಾಗಿದೆ.

ನಮ್ಮ ಮನೆಯೊಳಿಂದು ಹಬ್ಬ ನಮಗೆ ಸಂದಣಿ ಬಹಳ
ನಿಮ್ಮ ನುಡಿಸುವರೆ ಹೊತ್ತಿಲ್ಲ ಹೋಗಿ ವಿಷಯಗಳಿರಾ ॥ಪಲ್ಲವಿ॥

ತನುವೆಂಬ ಮನೆಯೊಳು ಪರಮಾತ್ಮನೆಂದೆಂಬ
ಮನೆಯ ದೇವರ ಹಬ್ಬಕಿಂದು
ನೆನೆಯದೆ ಮೀಯಬೇಕು ನಡೆಯದೆ ಬಲಗೊಂಡು
ನೆನಹಿನಮೃತಾನ್ನದುಪಹಾರವಿಡಬೇಕು ॥೧॥

ನೆರವಿಯಿಂದಗಲದೇಕಾಂತದೊಳಿರಬೇಕು
ನೆರೆಯಬೇಕಮಲಗುಣವೆಂಬ ವಸ್ತುಗಳ
ಪರಿಹರಿಸಿ ಕಳೆಯಬೇಕೆನ್ನ ಚಿಂತೆಗಳ
ಎರಡಿಲ್ಲದೊಂದು ಮನದಲ್ಲಿ ಭಜಿಸಬೇಕು ॥೨॥

ನೋಡದೆ ಕಂಡು ನುಡಿಯದೆ ಪೊಗಳಿ ಬಾಯ್ದೆರೆದು
ಬೇಡದೆ ಪರಮಪದವಿಯ ಪಡೆಯಬೇಕು
ನಾಡಾಡಿ ದೈವವಲ್ಲಿವಸಾಮನವಿದು ಧ್ಯಾನ
ರೂಢಿಯೊಳು ಹಂಸನಾಥನ ಭಜಿಸಬೇಕು ॥೩॥

ರತ್ನಾಕರವರ್ಣಿಯ ಶ್ರೇಷ್ಠಕೃತಿಯೆಂದರೆ 'ಭರತೇಶ ವೈಭವ'. ಇದು ಸಾಂಗತ್ಯದಲ್ಲಿದ್ದು 'ಕವಿರತ್ನಾಕರನ ಕಾವ್ಯ ರತ್ನಾಕರ'ವೆಂದು ವಿದ್ವಾಂಸರ ಮೆಚ್ಚುಗೆ ಗಳಿಸಿದೆ. ಈ ಕೃತಿಯಲ್ಲಿ ಹತ್ತು ಸಾವಿರ ಪದ್ಯಗಳಿವೆ. "ಈ ಕೃತಿಯಲ್ಲಿ ಪ್ರಥಮ ತೀರ್ಥಂಕರನಾದ ಪುರುಪರಮೇಶ್ವರನ ಹಿರಿಯ ಮಗನಾದ ಭರತೇಶ ಚಕ್ರವರ್ತಿಯು 'ಗಣನೆಯಿಲ್ಲದ ರಾಜ್ಯ ಸುಖದೊಳಾಡಿ ಧಾರಿಣಿ ಮೆಚ್ಚಿ ಜಿನಯೋಗಿ ಕ್ಷಣಕೆ ಕರ್ಮದ ಸುಟ್ಟು ಜಿನನಾದ ವೈಭವವನ್ನು ಮೆರೆಸಲಾಗಿದೆ"[೯] ಈ ಕೃತಿಯಲ್ಲಿ ೮೪ ಸಂಧಿಗಳಿವೆ.

ಇದು ಪ್ರಥಮ ತೀರ್ಥಂಕರ ವೃಷಭನಾಥನ ಹಿರಿಯ ಮಗನೂ, ೧೬ನೆಯ ಮನುವೂ ಪ್ರಥಮ ಚಕ್ರೇಶ್ವರನೂ ಆದ ಭರತನ ಕಥೆಯಾಗಿದೆ. ಈ ಕತೆಯ ರತ್ನಾಕರನ ಸ್ವಯಂ ಸೃಷ್ಟಿಯಲ್ಲ; "ಜಿನಸೇನ ಮುನಿಯು ತನ್ನ ಸಂಸ್ಕೃತದ ಪೂರ್ವಪುರಾಣದಲ್ಲಿಯೂ, ಆತನನ್ನು ಅನುಸರಿಸಿ ಆದಿ ಕವಿ ಪಂಪನು ಆದಿಪುರಾಣದಲ್ಲಿಯೂ, ಆದಿ ತೀರ್ಥಂಕರನ ಚರಿತ್ರೆಯನ್ನು ಬರೆಯುವಾಗ, ಪ್ರಥಮ ಚಕ್ರಿಯಾದ ಭರತನ ಕಥೆಯನ್ನು ಮುಖ್ಯ ಕಥೆಯ ಪರಿಶಿಷ್ಟವೆಂಬತೆ ಸಾಕಷ್ಟು ವಿಸ್ತಾರವಾಗಿಯೇ ಬರೆದಿದ್ದಾರೆ. ಆದರೆ

ಅವರು ಆತನ ಭೋಗ ಜೀವನವನ್ನು ಸಕೃತ್ತಾಗಿ ಸೂಚಿಸಿ, ಆತನ ದಿಗ್ವಿಜಯ ಪ್ರಕರಣವನ್ನು ಮಾತ್ರ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಅವರು ಕೇವಲ ಸೂಚಿಸಿದ್ದನ್ನು ರತ್ನಾಕರನು ವಿಸ್ತರಿಸಿ, ಭರತನ ಭೋಗ ಜೀವನವನ್ನು ರಂಗುರಂಗಾಗಿ ಚಿತ್ರಿಸಿದ್ದಾನೆ"[೧೦] ಈ ಕಾವ್ಯದಲ್ಲಿ ಭರತೇಶನ ಭವ್ಯಮೂರ್ತಿ ಕಲ್ಪನೆ, ಆದರ್ಶಜೀವನದ ಸಂಪೂರ್ಣ ಸಮನ್ವಯ ಸಾಧನೆ ಇವು ಒಂದು ಸುಂದರ ಚಿತ್ರದಂತೆ ಒಡಮೂಡಿದೆ.

ಜಿ. ಬ್ರಹ್ಮಪ್ಪನವರು ತಮ್ಮ ರತ್ನಾಕರ ವೈಭವದಲ್ಲಿ ರತ್ನಾಕರನ ಬಗ್ಗೆ ಪ್ರಮುಖ ವಿಮರ್ಶಕರ ಅಭಿಪ್ರಾಯವನ್ನು ಒಗ್ಗೂಡಿಸಿದ್ದಾರೆ; "ಭರತೇಶ ವೈಭವದಲ್ಲಿ ತ್ಯಾಗ ಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಮಿಸಿದ್ದಾನೆ. ಅಷ್ಟೇ ಅಲ್ಲ, ಕವಿ ಆ ದರ್ಶನವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೇ ಇಡೀ ಕಾವ್ಯದ ವಿವರ ವಿವರಗಳಲ್ಲೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯ ಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಆ ದೃಷ್ಟಿಯಿಂದ ಇದು ಜಗತ್ಕೃತಿ..."[೧೧] "ಶಿಲ್ಪ ಗಾಯನ ನಾಟ್ಯ ವಾದ್ಯಘೋಷ ಸರಸ ಸಲ್ಲಾಪ ಪ್ರಣಯ ಪ್ರವೃತ್ತಿಗಳನ್ನು ರತ್ನಾಕರನಂತೆ ಚಿತ್ರಿಸಬಲ್ಲ ಕವಿಗಳು ಕನ್ನಡದಲ್ಲಿ ಅಪರೂಪ. ಬಹುಶಃ ಅವನಿಗೇ ಅರ್ಪಿತವಾಗತಕ್ಕದ್ದು ಅಗ್ರತಾಂಬೂಲ. ಹೀಗೆನ್ನುವಾಗ ಪಂಪ, ರನ್ನ, ಕುಮಾರವ್ಯಾಸ ಇವರನ್ನು ನಾನು ಮರೆತಿಲ್ಲ"[೧೨] "ರತ್ನಾಕರನ ಬರವಣಿಗೆಯ ಓಘದಲ್ಲಿ ಸರಸ್ವತಿಯ ಪ್ರಸನ್ನತೆಯಿದೆ; ನಿರ್ಮಲತೆಯಿದೆ. ದರ್ಶನದ ಉನ್ನತಿ ವ್ಯಕ್ತಿಯ ಉದಾತ್ತತೆ ಇವನ್ನು ಚಿತ್ರಿಸುವ ಭಾಷೆ ಮತ್ತು ನುಡಿಯುವ ಛಂದ ಎಷ್ಟು ಸರಳವೋ ಅಷ್ಟು ಭವ್ಯವಾಗಿದೆ"[೧೩]

ತತ್ವವನ್ನೂ ರಸಿಕತೆಯನ್ನೂ ಬೆರೆಸಿ ಯೋಗಭೋಗ ಸಮನ್ವಯದ ಆದರ್ಶ ಪುರುಷನೆಂದು ನಿಲ್ಲಿಸಿದ್ದು ಆತನ ಅಜರಾಮರ ಕೀರ್ತಿಯಾಗಿದೆ"[೧೪]

"ಭಾಮಿನೀ ಷಟ್ಪದಿಗೆ ಕುಮಾರವ್ಯಾಸನು ಹೇಗೋ, ರಗಳೆಗೆ ಹರಿಹರನು ಹೇಗೋ ಸಾಂಗತ್ಯಕ್ಕೆ ರತ್ನಾಕರನು ಹಾಗೆ. ಆಯಾ ಛಂದಸ್ಸಿಗೆ ಅವರವರು ಸಾಮ್ರಾಟರು"[೧೫] "ಕನ್ನಡಿಗರ ವಿಭವಾಂಬೋಧಿಯಲ್ಲಿ ರಾಗರಸಿಕತೆಯ ಮಂದರವನ್ನಿಳುಹಿ ಕಲ್ಪನಾ ವಾಸುಕಿಯನ್ನು ಕಟ್ಟಿ ಕಡೆವಾಗ ಮೂಡಿರಬೇಕು ವೀತರಾಗರಸಿಕತೆಗಾಗರವಾದ ಭರತೇಶ ವೈಭವವೆಂಬ ಕವಿತಾನವನೀತ"[೧೬]

ಕೊನೆ ಟಿಪ್ಪಣಿ

೧. **ವಿ. ಸೀತಾರಾಮಯ್ಯ** : ರತ್ನಾಕರವರ್ಣಿ, ಐಬಿಎಚ್ ಪ್ರಕಾಶನ, ಸಂಪಾದಕರು

೨. **ಚಂದ್ರಶೇಖರ ಐತಾಳ ಗುಂಡ್ಮಿ** : ದಿಬ್ಬಣ – ಸ್ಮರಣ ಸಂಚಿಕೆ, ಪು. ೩೪ ೧೯೭೧, ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ ಕಾರ್ಕಳ

೩. **ಎ. ಶಾಂತಿರಾಜ ಶಾಸ್ತ್ರಿ (ಸಂ.)** : ತ್ರಿಲೋಕ ಶತಕ : ಪು. ೧೨೯

೪. **ಆರ್. ನರಸಿಂಹಾಚಾರ್** : ಕರ್ನಾಟಕ ಕವಿಚರಿತೆ: (ಸನ, ೨), ಪು. ೨೨೬– ೨೭

೫. **ತ.ಸು. ಶಾಮರಾಯ** : ಭರತೇಶ ವೈಭವ (ಪು.ಕ. ೨೨–೧, ಪು. ೨೩)

೬. **ಶ್ರೀ ಎ. ಶಾಂತರಾಜ ಶಾಸ್ತ್ರಿಗಳು** : ಶ.ತ್ರ ಮು IV

೭. **ಮಾಸ್ತಿಯವರ ಪುಸ್ತಕಗಳು** : ಉಪನ್ಯಾಸ – ಭಾಷಣ ೩, ರತ್ನಾಕರನ ಶಬ್ದ ಸಂಪತ್ತು ಪುಟ –೧೫೩

೮. **ವಸಿಷ್ಠ** : ರತ್ನಾಕರವರ್ಣಿಯ ಭರತೇಶ ವೈಭವ, ಪು. ಸಂ. ೮ ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, (ಲಕ್ಷ್ಮೀ ಟಾಕೀಸ್ ಹಿಂಭಾಗ) ಮೈಸೂರು – ೫೭೦೦೨೪

೯. **ವಸಿಷ್ಠ** : ರತ್ನಾಕರವರ್ಣಿಯ ಭರತೇಶ ವೈಭವ, ಪು. ಸಂ. ೯ ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, (ಲಕ್ಷ್ಮೀ ಟಾಕೀಸ್ ಹಿಂಭಾಗ) ಮೈಸೂರು – ೫೭೦೦೨೪

೧೦. **ದಿ। ವಿ. ಸೀತಾರಾಮಯ್ಯ (ಸಂ.)**: ರತ್ನಾಕರ ವರ್ಣಿ, ಪು.ಸಂ. ೭೨ ಐಬಿಎಚ್ ಪ್ರಕಾಶನ, ಗಾಂಧಿನಗರ ಬೆಂಗಳೂರು – ೫೬೦೦೦೯

೧೧. **ಶ್ರೀ ಕುವೆಂಪು** : ಭರತೇಶ ವೈಭವ ಸಂಗ್ರಾಹದ ಮುನ್ನುಡಿ, ಪುಟ ೧

೧೨. **ಎಸ್. ವಿ. ರಂಗಣ್ಣ** : ಶೈಲಿ, ಭಾಗ ... ಪುಟ ೧೨೦–೧೨೧

೧೩. **ಶ್ರೀ ರಂ. ಶ್ರೀ ಮುಗಳಿ** : ಕನ್ನಡ ಸಾಹಿತ್ಯ ಚರಿತ್ರೆ, ಪು ೩೯೫, ಗೀತ ಬುಕ್ ಹೌಸ್, ಮೈಸೂರು

೧೪. **ಶ್ರೀ ವಿ.ಕೃ. ಗೋಕಾಕರು** : ನವ್ಯತೆ ಹಾಗೂ ಕಾವ್ಯ ಜೀವನ, ಪು ೧೦೭

೧೫. **ಶ್ರೀ ತ.ಸು. ಶಾಮರಾಯರು** : ಭರತೇಶ ವೈಭವ, ಸಂಗ್ರಹ, ಪೀಠಿಕೆ ೯೭ ಪ್ರಸರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೬

೧೬. **ಜಿ. ಬ್ರಹ್ಮಪ್ಪ** : 'ಭಾವತಾಪಸ ಭರತೇಶ' ವೀರಭಾರತಿ, II - ೬, ಪುಟ ೧೨೬

ಅಧ್ಯಾಯ : ಮೂರು

ಸಮಕಾಲೀನ ಸಾಮಾಜಿಕ ಚಿತ್ರಣ

ಅಧ್ಯಾಯ : ಮೂರು
ಸಮಕಾಲೀನ ಸಾಮಾಜಿಕ ಚಿತ್ರಣ

ಯಾವುದೇ ಸಾಹಿತ್ಯವಿರಲಿ, ಅದು ತನ್ನ ಕಾಲದ ಪರಂಪರೆಯ ಸಾಮಾಜಿಕ ಸೂಕ್ಷ್ಮಗ್ರಹಿಕೆಗಳನ್ನು ಒಳಗೊಂಡಿರುತ್ತದೆ. ಅದು ತನ್ನ ಅಭಿವ್ಯಕ್ತಿಯಲ್ಲಿ ಸಮಕಾಲೀನ ಸಮಾಜವನ್ನು ಆಳವಾಗಿ ತಳಕುಹಾಕಿಕೊಂಡಿರುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವಿನ ಅವಿನಾಭಾವದ ಅಭಿವ್ಯಕ್ತ ಮಾಧ್ಯಮ ಕಾವ್ಯವಾಗಿರುತ್ತದೆ. ಒಂದು ವಿಶಿಷ್ಟವಾದ ಜೀವನ ವಿಧಾನಕ್ಕೆ ಕಾವ್ಯವು ಕಾಲಚಕ್ರದ ಚಲನೆಯಲ್ಲಿ ಸಾಕ್ಷೀಭೂತವಾಗಿ ನಿಲ್ಲುತ್ತದೆ. ಅದು ಪಾಂಡಿತ್ಯಗರ್ಭಿತವಾಗಿದ್ದರೂ ತನ್ನ ಮೂಲನೆಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕವಿಯ ಮನಸ್ಸು ಮತ್ತು ಗುರಿ ವ್ಯಕ್ತಿ–ಸಮೂಹ ಹಸನಾಗುವ ಕಡೆಗಿದ್ದರೆ ಕಾವ್ಯವೊಂದು ವಿಶಿಷ್ಟ ಪ್ರಭೆಯಿಂದ ಬೆಳಗುವುದರಲ್ಲಿ ಸಂಶಯವಿಲ್ಲ. ಇಂತಹ ಕಾವ್ಯಗಳಲ್ಲಿ ನಾವು ಧನಾತ್ಮಕವಾದ ಒಂದು ಸ್ಥಿರ ಸಾಮಾಜಿಕ ವ್ಯವಸ್ಥೆಯನ್ನು ಕಾಣುತ್ತೇವೆ.

ಕವಿಯು ಸಮಾಜದೊಳಗಿರುವ ವ್ಯಕ್ತಿ–ವ್ಯಕ್ತಿಗಳ ಸಂಬಂಧ, ಸಾಂಸ್ಕೃತಿಕ ಕ್ರಿಯೆ ಮತ್ತು ಇದರಿಂದ ಹೊಮ್ಮುವ ಸಾಮಾಜಿಕ ಸತ್ಯಗಳನ್ನು ಗಮನಿಸುತ್ತಾನೆ. ಸಾಮಾಜಿಕ ಪರಿಸರದ ಕ್ರಿಯೆಯಲ್ಲಿ ಕವಿಯು ಋಣಾತ್ಮಕವಾದುದನ್ನು ಸ್ವೀಕರಿಸದೆ, ಧನಾತ್ಮಕವಾದುದನ್ನು ಒಪ್ಪದೆ ಒಂದು ದ್ವಂದ್ವ ಮನಸ್ಥಿತಿಯನ್ನು ಅನುಭವಿಸಿ ಕೊನೆಗೊಮ್ಮೆ ಆದರ್ಶಯುತ ಬದುಕಿನ ಸಂಬಂಧಗಳ ಸಂಶೋಧನೆಯಲ್ಲಿ ತೊಡಗುತ್ತಾನೆ. ತನ್ನ ಬದುಕಿನಲ್ಲಿರುವ ಅನುಭವಗಳನ್ನು ಕಾವ್ಯದಲ್ಲಿ ತುಂಬಿಕೊಡುವ ಕವಿಯ ಕಾವ್ಯವು ವ್ಯಕ್ತಿ ಮತ್ತು ಸಮಾಜದ ವಿವಿಧ ಅಂಗಗಳ ಸಂಬಂಧದ ಅರಿವಿನಿಂದ ಹುಟ್ಟಿದ ಅಭಿವ್ಯಕ್ತಿಯಾಗಿರುತ್ತದೆ. "ಪ್ರಾಚೀನ ಕಾಲದ ಯುಗಧರ್ಮ ಈಗ ಬದಲಾಗಿ ಹೋಗಿದೆ. ಆಗಿನ ಸುಭದ್ರವಾದ ಸಾಮಾಜಿಕ ವ್ಯವಸ್ಥೆ, ಧರ್ಮದ ನಿರಂತರವಾದ ಸ್ಫೂರ್ತಿ, ತತ್ವಜಿಜ್ಞಾಸೆ ಎಲ್ಲರಿಗೂ ಪ್ರಿಯವಾಗಿರುವ ರೀತಿ–ನೀತಿಗಳು, ಎಲ್ಲರಿಗೂ ಸಾಮಾನ್ಯವಾಗಿರುವ ಭಾವಪ್ರಪಂಚ ಈಗ ಉಳಿದಿಲ್ಲ. ಅಗಿನಂತೆ ವ್ಯಕ್ತಿ ಈಗ ತನ್ನ ಜನಾಂಗಪ್ರಜ್ಞೆ ಹಾಗೂ ವಂಶಪ್ರಜ್ಞೆಗಳಲ್ಲಿ ಜೀವಿಸುವುದಿಲ್ಲ. ಆಗಿನಂತೆ ಅವಿಚ್ಛಿನ್ನವಾದ ಸಂಸ್ಕೃತಿಯ ಪ್ರವಾಹವೊಂದು ಈಗ ಹರಿದುಬರುವುದಿಲ್ಲ. ಅಂಥ ಸಂಸ್ಕೃತಿಯ ಚಿತ್ರವನ್ನು ಮಹಾಕಾವ್ಯವೊಂದರ ಮೂಲಕ ನಿರೂಪಿಸುವುದು ಆಗ ಸಾಧ್ಯವಿತ್ತು"[1]

ಕವಿ ಕಂಡು ಅನುಭವಿಸಿದ ಸುಂದರ ಸನ್ನಿವೇಶಗಳನ್ನು, ತನ್ನ ಅನುಭವಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಸಿರುವುದರಿಂದ ಕಾವ್ಯವನ್ನು ಜೀವನದ ಪ್ರತಿಬಿಂಬ ಅಥವಾ ಗತಿಬಿಂಬ ಎನ್ನುತ್ತಾರೆ. "ಆದರೆ ಅವನದು, ಜೀವನದ ಪ್ರತಿಕೃತಿಯಲ್ಲಿ, ಆತನು ತನ್ನ ಅನುಭವಗಳನ್ನು ಪ್ರತಿಭೆಯ ಕಾವಿನಲ್ಲಿ ಕರಗಿಸಿ, ವಿದ್ವತ್ತಿನ ಅಡಿಗಲ್ಲ ಮೇಲೆ ಅದರ ಅಂಕುಡೊಂಕುಗಳನ್ನು ಸವರಿ ಕಲ್ಪನೆಯ ಮೆರುಗುಹಾಕಿ ಹೊರಗೆ ತರುತ್ತಾನೆ. ಆಗ ಅದು ಉತ್ತಮ ಕಾವ್ಯವಾಗುತ್ತದೆ"[2]. ಪ್ರಸ್ತುತ ಅಧ್ಯಯನದಲ್ಲಿ ನಾವು ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ ಅಂತರ್ಗತವಾಗಿರುವ ಸಮಕಾಲೀನ ಸಾಮಾಜಿಕ ಚಿತ್ರಣವನ್ನು ಪರಿಶೀಲಿಸಲಾಗುವುದು.

ರತ್ನಾಕರವರ್ಣಿಯು ತನ್ನ ಕಾವ್ಯದಲ್ಲಿ ಚಿತ್ರಿಸಿರುವ ಹಲವು ಸುಂದರ ಸನ್ನಿವೇಶಗಳಿಗೆ ಆ ಕಾಲದಲ್ಲಿ ಅವನು ಕಂಡ ಸುತ್ತಲಿನ ಸಾಮಾಜಿಕ ಜೀವನ ಕಾರಣವಾಗಿದ್ದಿರಬಹುದು. ರತ್ನಾವರ್ಣಿಯು ಸ್ವತಃ ಒಬ್ಬ ರಾಜಕುಮಾರನಾಗಿದ್ದನು. ರಾಜಾಸ್ಥಾನದ ವೈಭೋಗಗಳನ್ನು ಆತ ಕಣ್ಣಾರೆ ಕಂಡವನು ಆತನ ಆಶ್ರಯದಾತನಾಗಿದ್ದ ಬೈರರಸನು ವಿಜಯನಗರ ಸಾಮ್ರಾಜ್ಯದ ಸಾಮಂತರಾಜನಾಗಿದ್ದನು. ಅದರಲ್ಲಿಯೂ ವಿಜಯನಗರ ಸಾಮ್ರಾಜ್ಯವು ಅಸದೃಶ ಸಂಪತ್ತಿನಿಂದ ಕೂಡಿದ್ದುದು. ಮುತ್ತು–ರತ್ನಗಳನ್ನು ಬೀದಿಬೀದಿಗಳಲ್ಲಿ ಮಾರುತ್ತಿದ್ದರೆಂಬಂತಹ ಕಥೆಯನ್ನು ಹೊಂದಿರುವಂತದ್ದು. ರತ್ನಾಕರನು ಈ ಸಮೃದ್ಧಿಯ ಆಗರವನ್ನು ಪ್ರತ್ಯಕ್ಷವಾಗಿ ಕಂಡವನು. "ಅಲ್ಲಿನ ವೈಭವವನ್ನು ರಸಿಕತೆಯನ್ನೂ ಹಲವು ಇತಿಹಾಸಕಾರರು ಮುಕ್ತಕಂಠದಿಂದ ಹೊಗಳಿದ್ದಾರೆ. ಅಲ್ಲಿನ ಭೋಗಸಾಮ್ರಾಜ್ಯದ ವರ್ಣನೆ ಐತಿಹಾಸಿಕವಾದರೂ ರಮ್ಯವಾದ ಕಥೆಗಿಂತಲೂ ಹೆಚ್ಚು ರಮ್ಯವಾಗಿದೆ"[೩]. ಇಂತಹ ಸುವರ್ಣಪರ್ವದಲ್ಲಿ ರತ್ನಾಕರನು ತನ್ನ 'ಭರತೇಶ ವೈಭವ'ವನ್ನು ರಚಿಸಿದ್ದಾನೆ.

"ಎಲ್ಲ ಅಂತಃಪುರಗಳಂತೆ ವಿಜಯನಗರದ ಅಂತಃಪುರವೂ ಸ್ತ್ರೀಸಾಮ್ರಾಜ್ಯವಾಗಿತ್ತು. ರಾಣಿಗೆ ಹಲವರು ಸೇವಕರೂ, ಅಂಗರಕ್ಷಕರೂ ಇರುತ್ತಿದ್ದರು. ರಾಜನು ಅನೇಕ ಸಾಮಂತರಾಜರ ಅಧಿಪತಿಯಾಗಿದ್ದರೆ ಪಟ್ಟದ ರಾಣಿಯು ಎಲ್ಲ ಇತರ ರಾಣಿಯರಿಗೆ ಒಡತಿಯಾಗಿದ್ದಳು. "ರಾಣಿಯೊಬ್ಬಳು ತನ್ನ ಮಹಲಿನಿಂದ ಹೊರಗೆ ಕಾಲಿಟ್ಟಳೆಂದರೆ ಇಪ್ಪತ್ತೈದು ಮೂವತ್ತು ಜನ ವೇತ್ರಧಾರಿಣಿಯರು ಭುಜಗಳ ಮೇಲೆ ಚಾವಟಿಗಳನ್ನು ಹಾಕಿಕೊಂಡು ಹೊರಗೆ ಬರಬೇಕು. ಅವರ ಹಿಂದೆ ಮಂಗಳವಾದ್ಯಗಳನ್ನು ಬಾರಿಸುತ್ತಾ ಹಲವು ಮಂಗಳಾಂಗಿಯರು; ಅವರನ್ನು ಅನುಸರಿಸಿ ಸುಮಾರು ಇಪ್ಪತ್ತು ಜನ ರಜತವೇತ್ರಧಾರಿಣಿಯರಾದ ಸ್ತ್ರೀ ಭಟರು, ಅವರ ಕಾಪಿನಲ್ಲಿ ರತ್ನಖಚಿತವಾದ ಬಂಗಾರದ ಕಳಸಗಳನ್ನು ಹೊತ್ತು ಸುರಸುಂದರಿಯರಾದ ಅರವತ್ತು ಜನ ಚೇಟಿಯರು ಬರುವರು. ಎಲ್ಲಕ್ಕೂ ಹಿಂದೆ ರಾಣಿಯ ಸವಾರಿ. ಇಂತಹ ರಾಣಿಯರು ಐನೂರು, ಆರುನೂರು ಜನ. ಈ ರಾಣಿಯರಲ್ಲದೆ ರಾಜನ ಪ್ರೇಮಕ್ಕೆ, ಕಾಮಸಂತೃಪ್ತಿಗೆ ಮೀಸಲಾದ ಹಲವು ವಿಲಾಸವತಿಯರು. ಒಟ್ಟು ಅರಮನೆಯ ಜನಗಣತಿ ಹನ್ನೆರಡು ಸಹಸ್ರ. ಇದರಲ್ಲಿ ಪುರುಷವ್ಯಕ್ತಿ ರಾಜನೊಬ್ಬನೇ! ಅಸಂಖ್ಯಾತ ತಾರೆಗಳ ಮಧ್ಯೆ ಉಡುರಾಜ"[೪]. ರತ್ನಾಕರನ ಕಾವ್ಯ ಸೃಷ್ಟಿಯಲ್ಲಿ ಕಂಡು ಬರುವ ಭರತೇಶನ ರಾಣಿಯರಂತಹ ಎಲ್ಲ ಬಗೆ ಸುಂದರಿಯರೂ, ಸುಶೀಲರೂ, ವೀರಾಗ್ರಣಿಗಳೂ ವಿಜಯನಗರದ ಅಂತಃಪುರದಲ್ಲಿದ್ದರು. ಇವರು ಸಂಗೀತ ನರ್ತನಗಳಿಂದ ಹಿಡಿದು, ಕವಿಗಳೂ, ನ್ಯಾಯಾಧಿಪತಿಗಳೂ ಆಗಿದ್ದರು.

"ಭರತೇಶನ ರಾಣಿಯರಂತೆ ವಿಜಯನಗರದ ರಾಜ್ಞಿಯರೂ ಸಂಗೀತ ಸಾಹಿತ್ಯಾದಿ ಕಲೆಗಳಲ್ಲಿ ಪರಿಶ್ರಮವುಳ್ಳವರೇ, ಕುಸುಮಾಜಿಯು ಕಾವ್ಯಪ್ರಪಂಚದಲ್ಲಿ "ರಾಜಲಾವಣ್ಯ" ಕಾವ್ಯವನ್ನು ರಚಿಸಿದ್ದರೆ, ರಘುನಾಥರಾಜನ ಮಡದಿ ರಾಮಭದ್ರಾಂಬೆಯೂ ತನ್ನ ಇನಿಯನ ಹೆಸರಿನಲ್ಲಿ "ರಘುನಾಭ್ಯುದಯವನ್ನು" ಬರೆದಳು. ತಂಜಾವೂರಿನಲ್ಲಿ ರಾಜನಾಗಿದ್ದ ಈ ರಘುನಾಥರಾಯನು ತನ್ನ ರಾಜಧಾನಿಯಲ್ಲಿ ಆಸ್ಥಾನದ ವಿದುಷಿಯರಿಗಾಗಿ ಒಂದು ಸಾಹಿತ್ಯ ಸ್ಪರ್ಧೆಯನ್ನು ಏರ್ಪಡಿಸಿದ್ದನಂತೆ! ಚಿತ್ರಬಂಧ, ಗರ್ಭ, ಆಶುಕವಿತೆಗಳಲ್ಲಿ

ನಿಪುಣೆಯರಾದ ಹಲವು ರಮಣೀಮಣಿಯರು ಅಲ್ಲಿ ಭಾಗವಹಿಸಿದ್ದರಂತೆ. ಘಂಟೆಗೆ ನೂರು ಪದ್ಯಗಳನ್ನು ನಿರ್ಮಿಸಬಲ್ಲ ಶತಲೇಖನೀ ವಿದ್ಯಾನಿಪುಣೆಯರೂ, ಅಷ್ಟಭಾಷಾ ಪ್ರವೀಣೆಯರೂ ಅವರಲ್ಲಿ ಇದ್ದರಂತೆ. ರಾಜನ ಔದಾರ್ಯದಿಂದ ಸಾಹಿತ್ಯ ಕಲೆಗಳು ಅತಿಶಯವಾಗಿ ಬೆಳೆದುದೆಂದು ಇತಿಹಾಸ ತಿಳಿಸುತ್ತದೆ. ಗಾನಕುಶಲರನ್ನೂ, ವೀಣೆ, ರಾವಣ ಹಸ್ತಾದಿ ತಂತ್ರೀವಾದ್ಯವಾದಕರನ್ನೂ ಆತನು ಕನಕಾಭಿಷೇಕದಿಂದ ಗೌರವಿಸುತ್ತಿದ್ದನಂತೆ. ನರ್ತನದಲ್ಲಿಯೂ ಆತನಿಗೆ ಅಸಮಾನ್ಯವಾದ ಅಭಿರುಚಿಯಿತ್ತು. ಸ್ತ್ರೀಯರ ನರ್ತನಗಳನ್ನು ಆತನು ಆಗಾಗ ಏರ್ಪಡಿಸಿ ಯೋಗ್ಯರನ್ನು ಗೌರವಿಸುತ್ತಿದ್ದನಂತೆ. ನರ್ತನದ ಒಂದು ರೂಪಕ್ಕೆ 'ರಘುನಾಥ ವಿಲಾಸ' ಎಂದು ಹೆಸರಿಟ್ಟಿದನಂತೆ. ರತ್ನಾಕರನ ಕಾವ್ಯಸೃಷ್ಟಿಯಲ್ಲಿ ಇವರೆಲ್ಲರೂ ಸಚೇತನರಾಗಿ ಮೂಡಿಬಂದಿರುವಂತೆ ಭಾಸವಾಗುತ್ತದೆ"[೫]

ಕಾವ್ಯ ತನ್ನದೇ ಆದಂತಹ ಒಂದು ಪ್ರತ್ಯೇಕ ನೆಲೆಯನ್ನು ಕಂಡುಕೊಳ್ಳುವುದು ಕವಿಯ ವೈಯಕ್ತಿಕ ಪ್ರತಿಭೆಯಿಂದ. ಅದಕ್ಕೆ ಅವನ ದೃಷ್ಟಿಧೋರಣೆಗಳು ಕಾರಣವಾಗುವುದಷ್ಟೇ ಅಲ್ಲದೆ, ಆತನು ಬದುಕಿ ಬಾಳಿದ ಪ್ರಾದೇಶಿಕವಾದ ಸಂಗತಿಗಳೂ, ಸಾಮಾಜಿಕ ಹಿನ್ನೆಲೆಯಲ್ಲಿ ಆತನ ಬದುಕಿನಲ್ಲಿ ಸಂಭವಿಸಿದ ಘಟನೆಗಳೂ ಆತನ ಕಾವ್ಯದಲ್ಲಿ ಛಾಪನ್ನು ಮೂಡಿಸುತ್ತವೆ. ಪುರಾಣ ಕವಿಗಳಿಂದ ಹಿಡಿದು ಆಧುನಿಕ ಕವಿಗಳವರೆಗೆ, ಅವರ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದಾಗ ಈ ಅಂಶದ ಸತ್ಯಾಸತ್ಯತೆಯ ಅರಿವಾಗುತ್ತದೆ.

ಯಾವುದೇ ಕವಿಯು ತನ್ನ ಪರಿಸರದಿಂದ ದೊರೆಯುವ ಅನುಭವಗಳಿಗೆ ಕಣ್ಣುಮುಚ್ಚಿ ಕಾವ್ಯವನ್ನು ರಚಿಸಲಾರ. ಕಾವ್ಯ ಕವಿಯ ಅನುಭವ ಮತ್ತು ಆತನ ಜನ್ಮಾಂತರದ ಸಂಸ್ಕಾರದ ಸಂಗಮವಾಗಿರುತ್ತದೆ. ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಕಾವ್ಯದ ಸ್ವರೂಪ ಭಿನ್ನವಾಗುತ್ತ ಹೋಗುತ್ತದೆ. ಕವಿಯ ಅಪಾರ ಲೋಕಾನುಭವದಿಂದ ಕಾವ್ಯ ಮೂರ್ತರೂಪವನ್ನು ಪಡೆಯುತ್ತದೆ. ಕವಿಯ ರಸಿಕತೆ, ಸರಸಗುಣ, ಮಾನವಪ್ರೇಮ ಇತ್ಯಾದಿಗಳು ಕಾವ್ಯದಲ್ಲಿ ಅನಿರ್ವಚನೀಯವಾದ ರಸವನ್ನು ತುಂಬುತ್ತವೆ. ಈ ದೃಷ್ಟಿಕೋನದಿಂದ ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯವನ್ನು ಅವಲೋಕಿಸಿದರೆ ಅವನಲ್ಲಿರುವ ರಸದೃಷಿಯೇ ತನ್ನ ಅನುಭವಗಳಿಂದ ಮೈತಳೆದು ಒಂದು ಸುಂದರ ಕಾವ್ಯಸೃಷ್ಟಿಗೆ – ಕಾರಣವಾಯಿತೆನ್ನಬಹುದು.

"ರತ್ನಾಕರನ ಕಾವ್ಯದಲ್ಲಿ ಬರುವ ನಾಟ್ಯಾಂಗನೆಯರು ವಿಜಯನಗರದ ವೇಶ್ಯೆಯರೇ. ವೇಶ್ಯೆಯರ ವೈಭವವನ್ನು ವರ್ಣಿಸದೆ ವಿಜಯನಗರದ ಸ್ತ್ರೀ ಚರಿತ್ರೆ ಸಂಪೂರ್ಣವಾಗದು. ಅಬ್ದುಲ್‌ಕಟಾಕ್ ಎಂಬ ಚರಿತ್ರೆಕಾರನ ಹೇಳಿಕೆಯಂತೆ ವೇಶ್ಯೆಯರಿಂದ ಬರುವ ತಲೆಗಂದಾಯ ಹನ್ನೆರಡು ಸಾವಿರ ಪೋಲಿಸಿನವರಿಗೆ ಸಂಬಳ ಕೊಡಲು ಸಾಕಾಗುತ್ತಿತ್ತಂತೆ! ಇದನ್ನು ನೋಡಿದರೆ ವೇಶ್ಯೆಯರ ಸಂಖ್ಯೆ ಅಮಿತವಾಗಿತ್ತೆಂದೂ, ಅವರ ಆದಾಯ ಅಸಾಮಾನ್ಯವಾದುದೆಂದೂ ವ್ಯಕ್ತವಾಗುತ್ತದೆ. ಮುನ್ನೂರು ಗಜ ಉದ್ದವೂ, ಇನ್ನೂರು ಗಜ ಅಗಲವೂ ಇದ್ದ ಒಂದು ದೊಡ್ಡ ರಸ್ತೆಯ ಇಕ್ಕೆಲಗಳಲ್ಲಿಯೂ ಗಗನಚುಂಬಿಗಳಾದ ಸೌಧಗಳಲ್ಲಿ ವೇಶ್ಯೆಯರು ವಾಸಿಸುತ್ತಿದ್ದರು. ಆ ರಸ್ತೆಯ ಎರಡು ಕಡೆಯ ಮಹಾದ್ವಾರಗಳಲ್ಲಿಯೂ ಸಿಂಹ, ಹುಲಿ,

ಚಿರತೆಗಳ ಬೊಂಬೆಗಳು ಸಜೀವವೆಂಬಂತೆ ಸುಂದರವಾಗಿ ಪ್ರಕಾಶಿಸುತ್ತಿದ್ದವು. ರಸ್ತೆಗೆ ಪನ್ನೀರು ಚೆಲ್ಲುತ್ತಿದ್ದರಂತೆ! ಒಂದೊಂದು ವೇಶ್ಯಾವಾಟಿಯ ಮುಂದೆಯೂ ಅಮೃತಶಿಲೆಯಿಂದ ಮಾಡಿದ ಆಸನಗಳು. ಮನೆಯ ಬಾಗಿಲಲ್ಲಿ ಅಲಂಕೃತರಾದವರು. ಒಬ್ಬೊಬ್ಬರ ಬಳಿಯೂ ಅಪ್ಸರೆಯರಂತೆ ಅಲಂಕೃತರಾದ ಸೇವಕಿಯರು! ಬೀದಿಯಲ್ಲಿ ಬಂದವರನ್ನು ಆಹ್ವಾನಿಸಿ ಉಲ್ಲಾಸಗೊಳಿಸುವುದು ಈ ಸೇವಕಿಯರ ಕೆಲಸ. ಹಬ್ಬಹರಿದಿನಗಳಂದು ಈ ವೇಶ್ಯೆಯರು ರಾಜನಿದಿರಿನಲ್ಲಿ ನರ್ತನ ಮಾಡಬೇಕು. ಇದೆಲ್ಲವನ್ನು ರತ್ನಾಕರ ಕವಿ ಕಣ್ಣಾರೆ ಕಂಡು ಮನಸಾರೆ ಮೆಚ್ಚಿದ್ದನೆಂದು ಕಾಣುತ್ತದೆ. ಆದ್ದರಿಂದಲೇ ಓದುಗರ ಹೃದಯವನ್ನು ಸೂರೆಗೊಳ್ಳಬಲ್ಲ ಸುಂದರ ಶೃಂಗಾರ ಚಿತ್ರಗಳು ಆತನ ಕಾವ್ಯಕಲಾ ಚಿತ್ರಶಾಲೆಯಲ್ಲಿ ಕಾಣಿಸಿಕೊಂಡಿವೆ”[1]

ರತ್ನಾಕರನು ಕಾವ್ಯಜಗತ್ತಿನಲ್ಲಿ ಅಜರಾರಮವಾಗಲು ಆತ ತನ್ನ ಕಾವ್ಯದಲ್ಲಿ ತೋರಿಸಿದ ಶೃಂಗಾರಲೋಕವೇ ಕಾರಣವೆನ್ನಬಹುದು. ರತ್ನಾಕರ ತನ್ನ ಕಾವ್ಯದಲ್ಲಿ ಹರಿಸಿದ ಶೃಂಗಾರ ಪ್ರವಾಹ ಮತ್ತು ಅದಕ್ಕೊಂದು ನೈಜತೆಯ ಸ್ಪರ್ಶ ಬರಲು ಆತನಗೆ ಬೈರರಸರ ಮಗಳೊಡನದ್ದ ಪ್ರೇಮವೇ ಕಾರಣವೆನ್ನಬಹುದು. ಆಕೆಯ ಪ್ರೇಮದಲ್ಲಿ ಮಿಂದ ರತ್ನಾಕರವರ್ಣಿ ತನ್ನ ಕಾವ್ಯದಲ್ಲಿ ಶೃಂಗಾರ ಪ್ರವಾಹವನ್ನೇ ಹರಿಸಲು ಕಾರಣವಾಯಿತೆನ್ನಬಹುದು.

“ಕುಸುಮಾಜಿ ಭರತನಿಗೆ ಊಟಮಾಡಿಸುವ ದೃಶ್ಯ ವಿಜಯನಗರದ ಸಾಮ್ರಾಟನ ಭೋಜನ ಸಮಾರಂಭದ ಪ್ರತಿಬಿಂಬವೇ. ರಾಜನು ಊಟಮಾಡುವಾಗ ತನ್ನ ಅಚ್ಚುಮೆಚ್ಚಿನ ರಾಣಿಯೊಬ್ಬಳುಳಿದು ಉಳಿದವರಾರೂ ಅಲ್ಲಿರಕೂಡದು. ಮೂರು ಕಾಲಿನ ಒಂದು ಬಂಗಾರದ ಅಟ್ಟಣಿಗೆ, ಅದರ ಮೇಲೆ ರತ್ನಖಚಿತವಾದ ಬಂಗಾರದ ತಟ್ಟೆ, ಅಡಿಗೆಯ ಪಾತ್ರೆಗಳೆಲ್ಲ ಬಂಗಾರದವೇ; ವ್ಯಂಜನ ವಸ್ತುಗಳಿಗೆ ರತ್ನಖಚಿತವಾದ ಬಂಗಾರದ ಪಾತ್ರೆಗಳೇ ಅಲ್ಲಿ ಎಲ್ಲವೂ ಸ್ವರ್ಣಮಯ! ರಾಣಿಯೇ ಸ್ವತಃ ಕೈಮುಟ್ಟಿ ರಾಜನಿಗೆ ಊಟ ಮಾಡಿಸಬೇಕು; ಆಮೇಲೆ ಆಕೆಯೇ ಅವನ ಕೈ ತೊಳೆದು ಮೇಲಕ್ಕೆಬ್ಬಿಸಿ ಕೈ ಹಿಡಿದು ಶಯನಾಗಾರಕ್ಕೆ ಕರೆದೊಯ್ಯಬೇಕು. ಭರತನು ಕಾವ್ಯಜಗತ್ತಿನಲ್ಲಿ ಅನುಭವಿಸುವ ಎಲ್ಲ ಸುಖಗಳೂ ರಾಜನಿಗೆ ಸಲ್ಲಬೇಕು. ರತ್ನಾಕರನ ಕಾವ್ಯಜಗತ್ತಿನಲ್ಲಿ ಕಾಣಬರುವ ಸುಖಶಯ್ಯೆ ಸಂಗೀತ ಮೊದಲಾದುವೆಲ್ಲ ವಿಜಯನಗರದ ಅಂತಃಪುರದಿಂದ ಮೇಲೆದ್ದು ಬಂದವೇ”[2]

ತುಳುನಾಡಿನ ಸಾಮಾಜಿಕ ಜೀವನದ ಆಯಾಮವನ್ನು ನಿರ್ಮಿಸುವಲ್ಲಿ ಧರ್ಮವು ಪ್ರಮುಖ ಶಕ್ತಿಯಾಗಿ ಕಾರ್ಯ ನಿರ್ವಹಿಸಿದೆ. ತುಳುನಾಡಿನಲ್ಲಿ ಜೈನಧರ್ಮಕ್ಕೆ ಇತರ ಧರ್ಮಗಳಿಗಿಂತ ಹೆಚ್ಚಿನ ಪ್ರೋತ್ಸಾಹಗಳು ಆಳುಪರಿಂದ ಮೊದಲ್ಗೊಂಡು ವಿಜಯನಗರದ ಅರಸರವರೆಗೂ ದೊರೆತಿದೆ ಎನ್ನಬಹುದು. ತುಳುನಾಡಿನ ಜೈನಧರ್ಮವು ಇತರ ಸ್ಥಳೀಯ ಧರ್ಮಗಳೊಡನೆ ರಿವಾಜುಗಳಲ್ಲಿ ತನ್ನದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಇಲ್ಲಿನ ಜೈನಮತೀಯರಲ್ಲಿ ವಿಶಿಷ್ಟವಾಗಿ ಬೆಳೆದುಕೊಂಡು ಬಂದಿರುವ ಒಂದು ಪದ್ಧತಿಯೆಂದರೆ ಮುನಿಭಿಕ್ಷೆಯಾಗಿದೆ. ಇದು ಜೈನ ಶ್ರಾವಕರಿಗೆ ಪವಿತ್ರ ಕಾರ್ಯವಾಗಿದೆ. ಜೈನದಿಗಂಬರ ಮುನಿಗಳು ತಮಗಾಗಿ ತಯಾರಿಸಿದ ಆಹಾರವನ್ನು ಸ್ವೀಕರಿಸುವ ನಿಯಮವಿಲ್ಲದ ಕಾರಣ ಶ್ರಾವಕರ ಮನೆಗಳಿಗೆ ಭಿಕ್ಷೆಗೆ ತೆರಳುತ್ತಾರೆ. ಮುನಿಭಿಕ್ಷೆಯೆನ್ನುವುದು ಒಂದು ಪವಿತ್ರವಾದ

ಕಾರ್ಯವಾದುದರಿಂದ ಎಲ್ಲರೂ ಜೈನಮುನಿಗಳಿಗೆ ಆಹಾರವನ್ನೀಡುವುದರಲ್ಲಿ ಅಪರಿಮಿತ ಉತ್ಸಾಹವನ್ನು ತೋರಿಸುತ್ತಾರೆ.

ತುಳುನಾಡಿನಲ್ಲಿ ಇತ್ತೀಚಿನ ದಿನಗಳಲ್ಲಿ ಭಿಕ್ಷೆಗಾಗಿ ಸಂಚರಿಸುವ ಮುನಿಗಳ ಸಂಖ್ಯೆ ಇಲ್ಲವೇ ಇಲ್ಲ ಎನ್ನುವಷ್ಟು ಕ್ಷೀಣಿಸಿದೆ. ಹಿಂದೆ ಮುನಿಗಳ ಭಿಕ್ಷಾಸಂಚರಣೆ ಸರ್ವೇಸಾಮಾನ್ಯವಾಗಿತ್ತು. ಈಗ ಆ ಚಿತ್ರಣ ಸಂಪೂರ್ಣವಾಗಿ ಬದಲಾಗಿದೆ. "ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಬಾಹುಬಲಿಯ ಮಹಾಮಸ್ತಕಾಭಿಷೇಕದಲ್ಲಿ ಭಾಗವಹಿಸಲು ಬೇರೆ ಬೇರೆ ರಾಜ್ಯಗಳಿಂದ ಮುನಿಸಂಘಗಳು ಆಗಮಿಸುತ್ತವೆ. ೧೯೮೧ರಲ್ಲಿ ಶ್ರವಣಬೆಳಗೊಳದಲ್ಲಿ ಬಾಹುಬಲಿ ಮಸ್ತಕಾಭಿಷೇಕಕ್ಕೆ ೯೧ ಮುನಿಗಳು ಮತ್ತು ಅವರ ಸಂಘಗಳು ಭಾಗವಹಿಸಿದ್ದು ಒಂದು ದಾಖಲೆಯಾಗಿದೆ. ೧೯೮೫ರಲ್ಲಿ ಧರ್ಮಸ್ಥಳದಲ್ಲಿ ಬಾಹುಬಲಿಯ ಪ್ರತಿಷ್ಠಾಪನಾ ಮಸ್ತಕಾಭಿಷೇಕ ನಡೆದಾಗ ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯ ಮುನಿಗಳು ಆಗಮಿಸಿದ್ದರು"[೮]. "ಇವರಲ್ಲಿ ಆಚಾರ್ಯ ವಿಮಲಸಾಗರ, ಆಚಾರ್ಯ ಕುಂದಸಾಗರ, ಏಲಾಚಾರ್ಯ ವಿದ್ಯಾನಂದರು, ಆಚಾರ್ಯ ಅಜಿತಸಾಗರ, ಸುವರ್ಣಭದ್ರ ಮಹಾರಾಜ, ಸಮೇರುಸಾಗರ, ಆರ್ಯಿಕಾ ರಾಜಾಮತಿ ಮಾತಾಜಿ, ಆರ್ಯಿಕಾ ನಿರ್ಮಾಣಮತಿ ಮಾತಾಜಿ ಮೊದಲಾದವರನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ."[೯]. ಕ್ರಿ.ಶ. ೧೦–೧೬ನೇ ಶತಮಾನದಲ್ಲಿ ತುಳುನಾಡಿನಲ್ಲಿ ಮುನಿಭಿಕ್ಷೆಯೆನ್ನುವುದು ಈ ತೆರನಾಗಿತ್ತು. ಇಂತಹ ಸಾಮಾಜಿಕ ಪರಿಸರದಲ್ಲಿ ಜೀವಿಸಿದ್ದ ರತ್ನಾಕರವರ್ಣಿಯು ಒಬ್ಬ ಶ್ರಾವಕನ ಮುನಿಭಿಕ್ಷೆಯನ್ನು ನೀಡುವ ಹಂಬಲವನ್ನು ತನ್ನ ಕಾವ್ಯನಾಯಕನಾದ 'ಭರತೇಶ'ನ ಮೂಲಕ ಹೃದಯಂಗಮವಾಗಿ ವರ್ಣಿಸಿದ್ದಾನೆ.

ಬಲದ ಬೀದಿಯ ನೋಳ್ಪನಡೆದ ಬೀದಿಯ ನೋಳ್ಪನೊಲಿದಿದಿರ್ವೀದಿಯ ನೋಳ್ಪ ॥
ಬಲಗೈಯ ಪೆಗಲಿಕ್ಕಿ ಬಪ್ಪ ಯೋಗೀಂದ್ರರ । ಸುಳುಹುಗಾಣದೆ ಚಿಂತೆ ಮಾಳ್ಪ ॥೩೫॥

ದೂರಕೆ ದಿಟ್ಟಿಯ ಪಸರಿಸಿ ಕೊರಲೆತ್ತಿ । ದಾರಿದಾರಿಯ ತೂಗಿ ನೋಳ್ಪ ॥
ಕೇರಿಗಳೊಳಗೊಬ್ಬರಾದರು ಮುನಿಗಳು । ಬಾರದಿದ್ದುದ ಕಂಡು ॥೩೬॥

ಇಂದೇನು ಪರ್ವೋಪವಾಸವೋ ಮುನಿಗಳಿ । ಗೆಂದಾಗ ತಿಥಿಯನಾರೈವ ॥
ಇಂದಿದು ಪರ್ವವಲ್ಲೇಕೆ ಚಿತ್ತೈಸಿತಿ । ಲ್ಲೆಂದೆದೆಯೊಳು ಮರುಗುವನು ॥೩೭॥

ಆನೆ ಕುದುರೆ ಬಟ್ಟೆಗಿಟ್ಟಣಿಸಿದವ್ರೋ ಕು । ಮಾನವರೆ ನಿಂದಿಸಿದರೊ ॥
ಏನು ಕಾರಣವೆನ್ನ ಮನೆಗಿಂದು ಯೋಗಿಸಂ । ತಾನವೆಯ್ತಂದುದಿಲ್ಲೆಂಬ ॥೩೮॥

ಮುಗಿದುದಲ್ಲಾ ಮುನಿಗಳನೊಬ್ಬ ಜರೆವಾಗ । ಜಗದೊಡೆತನ ನನಗುಂಟೆ ॥
ಬಗೆಯಲಾ ಪಾಟಿಯ ಜನಗಳಿಲ್ಲೇಕೆ ಯೋ । ಗಿಗಳಿತ್ತ ಸುಳಿದುದಿಲ್ಲೆಂಬ ॥೩೯॥

ದಿನಬಂಜೆಯಾಗದೆ ಪರಮಾತ್ಮವ್ರತರಾದ । ಮುನಿಗಳಿಗನ್ನದಾನವನು ॥
ಮನಮುಟ್ಟಿ ಮಾಡುವ ಭಾಗ್ಯವೆಂಬುದನಾವ । ಮನುಜ ಪಡೆಯಬಹುದೆಂಬ ॥೪೦॥[೧೦]

ಕವಿಯು ಈ ಪದ್ಯದಲ್ಲಿ ಮುನಿಭಿಕ್ಷೆಯನ್ನು ನೀಡಲು ಭರತೇಶನು ಹೇಗೆ ಕಾತರದಿಂದ ಪರಿತಪಿಸುತ್ತಿದ್ದಾನೆಂಬುದನ್ನು ವರ್ಣಿಸಿದ್ದಾನೆ. ಆಹಾರದಾನ ಮಾಡದೆ ತಾವು ಆಹಾರವನ್ನು

ಸ್ವೀಕರಿಸುವುದಿಲ್ಲವೆಂಬ ಕಟುನಿಟ್ಟಿನ ಆಚರಣೆಯೂ ತುಳುನಾಡಿನ ಕೆಲವು ಶ್ರಾವಕರಲ್ಲಿತ್ತು. ಕಾಲಕ್ಕನುಗುಣವಾಗಿ ಈಗ ಪರಿಸ್ಥಿತಿ ಬದಲಾಗಿದೆ. ಆಹಾರಭಿಕ್ಷೆಗಾಗಿ ಬರುವ ಮುನಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದೇ ಇದಕ್ಕೆ ಕಾರಣವೆನ್ನಬಹುದಾಗಿದೆ. ಪ್ರಸ್ತುತ ಮೇಲಿನ ಪದ್ಯಭಾಗದಲ್ಲಿ ಒಂದು ದಿನ ಆಹಾರದಾನಮಾಡದೆ ಆ ದಿನವು ವ್ಯರ್ಥವಾಗುವುದಲ್ಲಾ ಎಂದು ಪರಿತಪಿಸುವ ಭರತೇಶನ ಚಿತ್ರಣವನ್ನು ನೋಡಬಹುದಾಗಿದೆ.

ದೇವಚಂದ್ರನ ಹೇಳಿಕೆ ಪ್ರಕಾರ ಕವಿಯು ಸೂರ್ಯವಂಶದ ದೇವರಾಜ ಎಂಬುವವನ ಮಗ. ದೇವರಾಜನು ವಿಜಯನಗರದ ಸಾಮಂತರಾಜನಾಗಿದ್ದನು. ಅಲ್ಲದೆ ಕವಿಯು ಬೈರರಸರ ಆಸ್ಥಾನದಲ್ಲಿ ಶೃಂಗಾರಕವಿಯಾಗಿದ್ದವನು. ಆದುದರಿಂದ ಆತನಿಗೆ ಸ್ವಾಭಾವಿಕವಾಗಿಯೇ ಅಂತಃಪುರದ ಸ್ತ್ರೀಯರ ಸ್ಥಾನಮಾನಗಳ ಪರಿಚಯ ಸಾಕಷ್ಟಿದ್ದಿರಬೇಕೆನ್ನಿಸುತ್ತದೆ. ಇದಕ್ಕೆ ಉದಾಹರಣೆಯನ್ನು ನಾವು ಅವನ ಕಾವ್ಯದಲ್ಲೇ ನೋಡಬಹುದಾಗಿದೆ. ಸಕಲ ವಿದ್ಯಾಪಾರಂಗತರಾದ, ಮಹೋನ್ನತ ವ್ಯಕ್ತಿತ್ವವಿರುವ ಸುಂದರಿಯರೇ ಅವನ ಕಾವ್ಯದಲ್ಲಿರುವುದು. ಬಹುಶಃ ಕನ್ನಡ ಕಾವ್ಯಜಗತ್ತಿನಲ್ಲಿ ಯಾರೂ ಸ್ತ್ರೀಯರ ಬಗ್ಗೆ ಈ ರೀತಿಯ ಉದಾತ್ತ ಧೋರಣೆಯನ್ನು ತಳೆದವರಿಲ್ಲವೆಂದೇ ಹೇಳಬಹುದು. ತುಳುನಾಡಿನ ಆಳ್ವಿಕೆಯ ಕಾಲದಲ್ಲಿ ಕೆಲವು ರಾಣಿಯರು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವಂತೆ ಅವಶ್ಯಕತೆಯಿದ್ದಾಗ ರಾಜ್ಯಭಾರವನ್ನು ಹೊತ್ತು ಅದನ್ನು ಚೆನ್ನಾಗಿ ನಿರ್ವಹಿಸಿದ ನಿದರ್ಶನಗಳಿವೆ. "ಗೇರುಸೊಪ್ಪೆಯ ಭೈರಾದೇವಿ, ಚೆನ್ನಭೈರಾದೇವಿ, ಪುತ್ತಿಗೆಯ ಅಬ್ಬಕ್ಕದೇವಿ, ಬಂಗಾರ ವಿಠಲದೇವಿ, ಮೂಲರ ಸೋಮಲದೇವಿ, ಅಜಿಲರ ಮಧುರಕ್ಕ ದೇವಿ ಮುಂತಾದ ರಾಣಿಯರನ್ನು ಇಲ್ಲಿ ಸ್ಮರಿಸಬಹುದಾಗಿದೆ"[೧೧]. "ತಮ್ಮ ಪತಿಗೆ ಯಾವಾಗಲೂ ಅಖಂಡಿತ ದಾನವನ್ನು ಮಾಡುವಂತೆಯೂ ಸಕಲ ಜೀವಿಗಳಿಗೂ ಅಭಯವನ್ನು ನೀಡಿ ರಕ್ಷಿಸುವಂತೆಯೂ, ರೋಗಪೀಡಿತರಿಗೆ ಸಂಜೀವಿನಿ ಸ್ವರೂಪದ ಔಷಧಗಳನ್ನು ನೀಡುವುದಕ್ಕೂ, ಸದಾಕಾಲ ಶಾಸ್ತ್ರಾದಿದಾನಗಳನ್ನು ನಡೆಸುವುದಕ್ಕೂ ಸ್ಫೂರ್ತಿಯನ್ನು ತುಂಬುತ್ತಿದ್ದರು. ದೇವೇಂದ್ರನು ಹೇಗೆ ವೈಭವದಿಂದ ಪಂಚಕಲ್ಯಾಣ ಪೂಜೆಯನ್ನು ನಡೆಸುತ್ತಾನೋ, ಹಾಗೆ ಜಿನಮಂದಿರಗಳಲ್ಲಿ ಸದಾಕಾಲವೂ ಪಂಚಕಲ್ಯಾಣ ಮಹೋತ್ಸವಗಳು ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಇಂಥ ರಾಣಿಯರಲ್ಲಿ ಓರ್ವಳಾದ ನಾಗಿಲೆಯು ಸ್ವತಃ ಉನ್ನತವಾದ ಮಾನಸ್ತಂಭವೊಂದನ್ನು ಮಾಡಿಸಿ ಅದನ್ನು ಮೂಡಬಿದಿರೆಯ ತ್ರಿಭುವನತಿಲಕ ಚೂಡಾಮಣಿ ಬಸದಿಯ ಎದುರುಗಡೆಯಲ್ಲಿ ಸ್ಥಾಪಿಸಿದಳು. ಅದು ಮನ್ಮಥನನ್ನು ಗೆದ್ದ ಜಿನನ ಗೆಲುವಿನ ಸ್ತಂಭದಂತೆ ಶೋಭಿಸುತ್ತಿತ್ತು ಎನ್ನಲಾಗಿದೆ. ಇಂದಿಗೂ ಕೂಡ ಮೂಡಬಿದಿರೆಯ ಹೊಸ ಬಸದಿಯ ಎದುರುಗಡೆಯಲ್ಲಿ ಆ ಮಾನಸ್ತಂಭವು ನಾಗಿಲೆಯ ಘನಕಾರ್ಯಕ್ಕೆ ಮೂಕಸಾಕ್ಷಿಯಾಗಿ ನಿಂತುಕೊಂಡಿದೆ. ಪಂಡಿತದೇವಿಯೆನ್ನುವವಳು ಮುನೀಶ್ವರರ ಯುಗ್ಮಕ್ಕೆ ಪ್ರತೀ ದಿನ ಆಹಾರ ದಾನವು ನಡೆಯುವಂತೆ ವ್ಯವಸ್ಥೆ ಮಾಡಿದಳೆಂದು ಅದೇ ಶಾಸನದಲ್ಲಿ ವರ್ಣಿಸಿದೆ. ಇಂಥ ಅನೇಕ ಉದಾಹರಣೆಗಳು ಆ ಕಾಲದ ರಾಣಿಯರ ಧಾರ್ಮಿಕ ಜೀವನಶ್ರದ್ಧೆಗೂ ಭಕ್ತಿಗೂ ಮೌಲಿಕವಾದ ಕೊಡುಗೆಗಳಾಗಿವೆ. ತುಳುನಾಡಿನ ಅಭ್ಯುದಯ ಜೈನಧರ್ಮದ ಅಭ್ಯುದಯ ಮತ್ತು ಉನ್ನತಮಟ್ಟದ ಸಾಂಸ್ಕೃತಿಕ ಕೊಡುಗೆಗಳಿಗೆ ಈ ರಾಣಿಯರು ವಹಿಸಿದ ಪಾತ್ರವೂ ಅಷ್ಟೇ ಹಿರಿದಾದುದು ಮತ್ತು ಚಿರಸ್ಮರಣೀಯವಾದುದು"[೧೨]

"ಜೈನ ಪುರಾಣದಲ್ಲಿ ಆದಿದೇವನು ತನ್ನ ಮಕ್ಕಳಾದ ಬ್ರಾಹ್ಮೀ ಮತ್ತು ಸುಂದರಿಯರಿಗೆ ವಿದ್ಯಾಭ್ಯಾಸವನ್ನು ಹೇಳಿಕೊಟ್ಟನೆಂಬ ವಿವರಗಳಿರುವುದರಿಂದ ಸ್ತ್ರೀಯರ ವಿದ್ಯಾಭ್ಯಾಸದ ವಿಷಯದಲ್ಲಿ ಇತರರಿಗಿಂತ ಹೆಚ್ಚು ಉದಾರತೆಯನ್ನು ಜೈನಮತವು ತೋರಿಸಿದೆಯೆನ್ನಬಹುದು. ಇಲ್ಲಿಯ ನೋಂಪೀ ವ್ರತಗಳನ್ನು ಹೆಚ್ಚಾಗಿ ಸ್ತ್ರೀಯರೇ ಮಾಡುವುದರಿಂದ ಅವರು ನೋಂಪಿ ಕಥೆಯನ್ನು ಓದುವುದಕ್ಕಾಗಿ, ಸ್ತೋತ್ರ-ಮಂತ್ರಗಳನ್ನು ಪಠಿಸುವುದಕ್ಕೂ ವಿದ್ಯಾಭ್ಯಾಸವು ತೀರ ಅಗತ್ಯವಾಗಿತ್ತು"[೧೩]

ಇಂತಹ ಹಿನ್ನೆಲೆಯಿರುವ ಸ್ತ್ರೀಯರ ಪ್ರೌಢ ಮನೋಭಾವದ ಬಗ್ಗೆ ರತ್ನಾಕರವರ್ಣಿಗೆ ಅಭಿಮಾನವಿದ್ದಿರಲೇಬೇಕು. ಅಲ್ಲದೆ ತನ್ನ ಕಾವ್ಯದ ಪರ್ವಾಭಿಷೇಕ ಸಂಧಿಯಲ್ಲಿ ಸ್ತ್ರೀಯರ ಪ್ರಚ್ಛನ್ನಬುದ್ಧಿಮತ್ತೆಯನ್ನು ಎತ್ತಿಹಿಡಿದ ರತ್ನಾಕರವರ್ಣಿಯು ಪ್ರಾಕೃತ, ಸಂಸ್ಕೃತ, ಅರ್ಧಮಾಗಧಿ, ಕನ್ನಡ ಭಾಷೆಗಳಲ್ಲಿ ರಾಣಿಯರು ಹೇಗೆ ಪಾರಂಗತರಾಗಿದ್ದರೆನ್ನುವುದನ್ನು ಹೀಗೆ ವರ್ಣಿಸಿದ್ದಾನೆ;

ಪಿರಿದುವಿಕಾಲದ ಬಸದಿಯೊಳೆಲ್ಲರು । ಸರಸರಿಕೆ ಯೊಳೊಲ್ದು ಕುಳಿತು ॥
ಸ್ವರದೋರಿ ಸ್ತುತಿಮಾಡುತ್ತಿದ್ದರು ತುಂಬಿಯ । ನೆರವಿ ಗಲಭೆಮಾಡಿದಂತೆ ॥೫೨॥

ಪ್ರಾಕೃತದಲ್ಲಿ ಸಂಸ್ಕೃತದಲ್ಲಿ ಕರ್ನಾಟ । ವಾಕಿನೊಳೊಲ್ದಾದಿಜಿನನ ॥
ಆಕಾರವಸ್ತುಗುಣಸ್ತುತಿಗೈದರು । ಮಾಕಂದದರಗಿಳಿಯಂತೆ ॥೫೩॥

ಪೈಶಾಚಿಕದಲ್ಲಿ ಮಾಗಧಿಯೊಳಗೊಮ್ಮೆ । ಶೈಶವ ಶೂರಸೇನದೊಳು ॥
ವೈಶಾಖ ಮಾಸದ ಕೋಗಿಲಂತರುಹನ । ವೈಶಲ್ಪಮಿಗೆ ನುತಿಸಿದರು ॥೫೪॥[೧೪]

ಅಲ್ಲದೇ ಅರಗಿಳಿಯಾಲಾಪ ಮತ್ತು ರಾಜಲಾವಣ್ಯ ಸಂಧಿಗಳಲ್ಲಿ ಅಮರಾಜಿ ಸುಮನಾಜಿಯರು ಕಾವ್ಯ ರಚಿಸುವುದನ್ನು ಕವಿ ಹೇಳಿದ್ದಾನೆ. ಅಲ್ಲದೆ ಭರತೇಶನ ಅಂತಃಪುರದ ರಾಣಿಯರೆಲ್ಲ ವೀಣಾವಾದನ, ವೇಣು, ಕಿನ್ನರಿ, ವಾದ್ಯ ಇತರ ಸಂಗೀತಾದಿ ಕಲೆಗಳಲ್ಲಿ ನಿಪುಣರಾಗಿರುವ ಚಿತ್ರಣವನ್ನು ನೀಡಿದ್ದಾನೆ. ರತ್ನಾಕರವರ್ಣಿಯ ಕಾಲದ ಸಾಮಾಜಿಕ ಜೀವನದಲ್ಲಿ ಸ್ತ್ರೀಯರಿಗೆ ಸಂಗೀತ, ನರ್ತನಾದಿ ಕಲೆಗಳನ್ನು ಕಲಿಯುವುದಕ್ಕೆ ಸಾಕಷ್ಟು ಅವಕಾಶವಿದ್ದಿತ್ತು. "ಮೂಡಬಿದಿರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿ, ಗುರುಗಳ ಬಸದಿ, ಕಾರ್ಕಳದ ಚತುರ್ಮುಖ ಬಸದಿ, ನೇಮಿನಾಥ ಬಸದಿಗಳ ಸ್ತಂಭ, ಗೋಡೆಗಳ ಮೇಲೆ ಕೆತ್ತಿರುವ ಉಬ್ಬುಶಿಲ್ಪಗಳನ್ನು ಗಮನಿಸಿದರೆ ಮೇಲಿನ ಮಾತಿನ ಸತ್ಯಾಸತ್ಯತೆಯ ಅರಿವು ನಮಗಾಗುತ್ತದೆ"[೧೫].

ಸ್ತ್ರೀಯರ ಭಾವನೆಗಳ ತಂತುತಂತುಗಳನ್ನು ಬಿಚ್ಚಿಟ್ಟ ರತ್ನಾಕರವರ್ಣಿಯು ಅವುಗಳನ್ನು ಕಾವ್ಯದ ಎಲ್ಲಾ ಭಾಗಗಳಲ್ಲೂ ಗೌರವಿಸಿದ್ದಾನೆ. ಕಾವ್ಯದುದ್ದಕ್ಕೂ ಸ್ತ್ರೀಯರ ಆತ್ಮಗೌರವದೊಡನೆ ಆಕೆಯ ವ್ಯಕ್ತಿತ್ವಕ್ಕೆ ಎಲ್ಲೂ ಚ್ಯುತಿ ತಂದಿಲ್ಲವೆಂದೇ ಹೇಳಬಹುದಾಗಿದೆ. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ" ಎಂಬ ತತ್ವವನ್ನು ಎತ್ತಿಹಿಡಿದವನು ನಮ್ಮ ತುಳುನಾಡಿನ ಕವಿ ರತ್ನಾಕರವರ್ಣಿ. ಎಷ್ಟಾದರೂ ತುಳುನಾಡಿನ

ಕುಟುಂಬ ವ್ಯವಸ್ಥೆಯು ಮಾತೃಮೂಲೀಯತೆಯನ್ನು ಅನುಸರಿಸುತ್ತದೆಯಷ್ಟೆ! ಉತ್ತರದೇಶದಿಂದ ಬಂದ ಜೈನರು ತುಳುನಾಡಿನಲ್ಲಿ ನೆಲೆಸಿದಾಗ ಸ್ಥಳೀಯ ಕುಟುಂಬ ಪದ್ಧತಿಯನ್ನು ಅನುಸರಿಸಿ ಮಾತೃಮೂಲೀಯರಾದರೆನ್ನುವುದು ಗಮನಿಸಬೇಕಾದ ಸಂಗತಿ.

ಕೊನೆ ಟಿಪ್ಪಣಿ

೧. **ಕೀರ್ತಿನಾಥ ಕುರ್ತಕೋಟಿ** : ಯುಗಧರ್ಮ ಮತ್ತು ಸಾಹಿತ್ಯ, ಪು. ೭೮

೨. **ದಿ। ವಿ. ಸೀತಾರಾಮಯ್ಯ (ಸಂ.)** : ರತ್ನಾಕರವರ್ಣಿ, ಪು. ೧೦೬, ಐಬಿಎಚ್ ಪ್ರಕಾಶನ, ಬೆಂಗಳೂರು

೩. **ದಿ। ವಿ. ಸೀತಾರಾಮಯ್ಯ (ಸಂ.)** : ರತ್ನಾಕರವರ್ಣಿ, ಪು. ೧೦೬, ಐಬಿಎಚ್ ಪ್ರಕಾಶನ, ಬೆಂಗಳೂರು

೪. **ಟಿ. ಎಸ್. ಶಾಮರಾವ್** : ಭರತೇಶ ವೈಭವ ಸಂಗ್ರಹ, ಪು. ೭೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೬೬

೫. **ದಿ। ವಿ. ಸೀತಾರಾಮಯ್ಯ (ಸಂ.)** : ರತ್ನಾಕರವರ್ಣಿ, ಪು. ೧೦೭, ಐಬಿಎಚ್ ಪ್ರಕಾಶನ, ಬೆಂಗಳೂರು

೬. **ದಿ। ವಿ. ಸೀತಾರಾಮಯ್ಯ (ಸಂ.)** : ರತ್ನಾಕರವರ್ಣಿ, ಪು. ೧೦೮, ಐಬಿಎಚ್ ಪ್ರಕಾಶನ, ಬೆಂಗಳೂರು

೭. **ದಿ। ವಿ. ಸೀತಾರಾಮಯ್ಯ (ಸಂ.)** : ರತ್ನಾಕರವರ್ಣಿ, ಪು. ೧೦೯, ಐಬಿಎಚ್ ಪ್ರಕಾಶನ, ಬೆಂಗಳೂರು

೮. **ಡಾ। ಚಿನ್ನಪ್ಪ ಗೌಡ ಕೆ. ಮತ್ತು ಶೆಟ್ಟಿ ಎಸ್. ಡಿ. (ಸಂ.)** : ರತ್ನಮಾನಸ, ಪು.೮೨–೮೩, ೧೯೯೨, ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, ದ.ಕ.

೯. **ಡಾ। ಚಿನ್ನಪ್ಪ ಗೌಡ ಕೆ. ಮತ್ತು ಶೆಟ್ಟಿ ಎಸ್. ಡಿ. (ಸಂ.)** : ರತ್ನಮಾನಸ, ಪು.೮೨–೮೩, ೧೯೯೨, ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, ದ.ಕ.

೧೦. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೨, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

೧೧. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೫೧, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೧೨. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೫೧–೧೫೨, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೧೩. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೨೩೮, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೧೪. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೧೫೩, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

೧೫. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೩೮, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

ಅಧ್ಯಾಯ : ನಾಲ್ಕು

ಪ್ರಕೃತಿ ವೈಭವ

ಅಧ್ಯಾಯ : ನಾಲ್ಕು
ಪ್ರಕೃತಿ ವೈಭವ

"ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ।

ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೆ॥

ಅಪಾರವಾದ ಕಾವ್ಯಸಂಸಾರದಲ್ಲಿ ಕವಿಯೇ ಬ್ರಹ್ಮ. ಅವನ ಇಷ್ಟದಂತೆ ಈ ಇಡೀ ವಿಶ್ವವೇ ಪರಿವರ್ತನೆಯನ್ನು ಪಡೆಯುತ್ತದೆ – ಆನಂದ ವರ್ಧನ.

ಜಗತ್ತಿನ ಸಕಲ ಚರಾಚರ ವಸ್ತುಗಳೂ ಕವಿಯ ಮನಸ್ಸೆಂಬ ನಾಟ್ಯಭೂಮಿಕೆಯಲ್ಲಿ ನರ್ತಿಸಿ ಅವನಿಚ್ಛೆಯಂತೆ ಮಣಿಯುತ್ತವೆ. ಇದು ಕಾವ್ಯಜಗತ್ತಿಗೂ, ಕವಿಯು ಇರುವ ವಾಸ್ತವಿಕ ಜಗತ್ತಿಗೂ ಇರುವ ಸಂಬಂಧವನ್ನು ನಮ್ಮೆದುರು ಅನಾವರಣಗೊಳಿಸುತ್ತದೆ. ಕವಿಯ ಇಷ್ಟಾನುಸಾರವಾಗಿ ಈ ಬಾಹ್ಯಜಗತ್ತು ಬದಲಾಗುತ್ತದೆ; ಕವಿ ಸ್ವತಂತ್ರವಾದ ಕಾವ್ಯಜಗತ್ತನ್ನು ಸೃಷ್ಟಿಸುತ್ತಾನೆ.ಈ ಬಾಹ್ಯಪ್ರಪಂಚವೇ ಎಲ್ಲಾ ಕಲಾಸೃಷ್ಟಿಗೆ ನೆಲೆಯಾಗಿದೆ. "ಭಾರತೀಯ ಕಾವ್ಯಮಿಮಾಂಸೆಯದು ಈ ದೃಷ್ಟಿಯಲ್ಲಿ ಒಂದು ವಿಶಿಷ್ಟವಾದ ನಿಲುವು. ಅದನ್ನು ಮೇಲಿನ ಮೀಮಾಂಸಕಾರ ಅರ್ಥವತ್ತಾಗಿ ಹೇಳಿದ್ದಾನೆ. ಈ ಸೃಷ್ಟಿಯ ತಥಾವತ್ತಾದ ಒಂದು ಪ್ರತಿಸೃಷ್ಟಿಯಲ್ಲ ಕಾವ್ಯ. ಅದೇ ಒಂದು ಸ್ವತಂತ್ರ ಜಗತ್ತು, ನೂತನ ಸೃಷ್ಟಿ ಆದರೆ ಅದು ಈ ಜಗತ್ತನ್ನು ಬಿಟ್ಟಿಲ್ಲ"[1]

ಕವಿ ಈ ಲೋಕದಿಂದ ಪಡೆದ ಅನುಭವಗಳು ಕೇವಲ ಪ್ರಾಪಂಚಿಕ ಅನುಭವ ಮಾತ್ರವೇ ಆಗಿ ಉಳಿಯುವುದಿಲ್ಲ. ಇದು ಆತನ ಸುಪ್ತ ಮನಸ್ಸಿನಲ್ಲಿರುವ ವಿಶಿಷ್ಟ ಪ್ರತಿಭೆಯ ಒರೆಗೆ ಸಿಕ್ಕು ಕಾವ್ಯಾನುಭವವಾಗುತ್ತದೆ. ಲೋಕವಸ್ತುವೊಂದು ಕಾವ್ಯವಸ್ತುವಾಗುವ ಪ್ರಕ್ರಿಯೆಯಲ್ಲಿ ಕವಿ ರಸಋಷಿಯಾಗುತ್ತಾನೆ. "ಮನುಷ್ಯನೂ ಪ್ರಕೃತಿಗೂ ಇರುವ ಸಂಬಂಧ ಅನಿವಾರ್ಯವಾದುದು, ಅತ್ಯಂತ ನಿಕಟವಾದುದು. ಅನೇಕ ಶಕ್ತಿಗಳ ಘರ್ಷಣರಂಗವಾದ ಮಾನವ ಜೀವನದಲ್ಲಿ ಪ್ರಕೃತಿಯೂ ಒಂದು ಶಕ್ತಿ. ಮಾನವ ಜೀವನ ಪ್ರಕೃತಿಯ ಒಂದು ಅಂಗವೆಂದರೂ ಸರಿಯೆ. ಈ ಪ್ರಕೃತಿ – ಮಾನವರ ಸಂಬಂಧ ಸಾಮರಸ್ಯಗಳನ್ನು ಅಥವಾ ಸಂಘರ್ಷವನ್ನು ಕವಿ ಚಿತ್ರಿಸುತ್ತಾನೆ. ಅದರಲ್ಲೂ ಮಹಾಕವಿಯಾದವನು ಮನುಷ್ಯ ಪ್ರಕೃತಿಯನ್ನೆಂತೋ ಅಂತೆಯೇ ಪ್ರಕೃತಿಯನ್ನು ಅದ್ಭುತವಾಗಿ ವರ್ಣಿಸುತ್ತಾನೆ. ಮಾನವ ಹೃದಯದ ಆಳ ಎತ್ತರಗಳು, ರಾಗದ್ವೇಷಗಳು, ಹೋರಾಟ ಹೊಯ್ದಾಟಗಳು – ಇವುಗಳು ಮಹಾಕವಿಪ್ರತಿಭೆಯ ಒಂದು ಮುಖದಲ್ಲಿದ್ದರೆ ಅದರ ಮತ್ತೊಂದು ಮುಖ ಪ್ರಕೃತಿಯ ಚಿತ್ರಣದಲ್ಲಿರುತ್ತದೆ."[2]

ಸಾಂಗತ್ಯಲೋಕದ ಸೀಮಾಪುರುಷನೆಂದು ಕರೆಯಲಾಗುವ ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ ತ್ಯಾಗ–ಭೋಗಗಳ ಸಮನ್ವಯವಿದೆ. ಪ್ರಸ್ತುತ ನಾವು ರತ್ನಾಕರವರ್ಣಿಯ ಕಾವ್ಯದಲ್ಲಿ ಬರುವ

ಕೆಲವು ವರ್ಣನೆಗಳಲ್ಲಿ ಇಲ್ಲಿನ ಮಣ್ಣಿನ ಕಂಪನ್ನು ಗುರುತಿಸುತ್ತೇವೆ. ಈತನ ಕಾವ್ಯದಲ್ಲಿ ವರ್ಣಿಸಿರುವ ಪ್ರಾಕೃತಿಕ ವೈಭವ ತುಳುನಾಡಿನ ಅನೇಕ ಪ್ರಾದೇಶಿಕ ಅಂಶಗಳನ್ನು ಒಳಗೊಂಡಿದೆ. ಈತನು ತನ್ನ ಕಾವ್ಯದಲ್ಲಿ ಪ್ರಕೃತಿವರ್ಣನೆಗೆ ವಿಶೇಷ ಆದ್ಯತೆ ನೀಡಿಲ್ಲ. ಬಂದಿರುವ ಸೀಮಿತ ವರ್ಣನೆಗಳು ಮನದುಂಬುವಂತೆ ಇವೆ.

"ಹಿಂದಿನ ಕನ್ನಡ ಸಾಹಿತ್ಯದಲ್ಲಿ ಮೈದೊರಿರುವ ಪ್ರಕೃತಿವರ್ಣನೆಯನ್ನು ಅವಲೋಕಿಸಿದವರಿಗೆ ಎದ್ದು ಕಾಣುವ ಒಂದು ಸಂಗತಿಯೆಂದರೆ, ಅದರ ಸಂಪ್ರದಾಯನಿಷ್ಠೆ ಕವಿಗಳು ಶಾಸ್ತ್ರನಿಯಮಗಳಿಗೆ ಅಧೀನರಾಗಿ ಹದಿನೆಂಟು ವರ್ಣನೆಗಳನ್ನೂ – ಔಚಿತ್ಯವಿರಲಿ, ಇಲ್ಲದಿರಲಿ ತಮ್ಮ ಕೃತಿಗಳಲ್ಲಿ ಎಳೆದು ತರುವ ಪ್ರವೃತ್ತಿಯನ್ನು ಬೆಳೆಸಿಕೊಂಡರು.

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹವೈರಿ ಮಿತ್ರರುದಯಂ ಋತುನಂದನಮಂಬು ಸೀದುಕಾಂ
ತಾರತಿ ಚಿಂತೆ ಮಂತ್ರ ಚರ ಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್॥

–ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವ

ಕಾವ್ಯದ ಆದಿಯಲ್ಲಿ ಸಮುದ್ರವರ್ಣನೆ ಬಂದೇ ತೀರಬೇಕು; ಋತುವರ್ಣನೆ, ಪರ್ವತವರ್ಣನೆ, ಪುರವರ್ಣನೆ ಇತ್ಯಾದಿಗಳಿಗೆಲ್ಲ ಕಾವ್ಯದಲ್ಲಿ ಎಲ್ಲಿಯಾದರೂ ಸ್ಥಳ ಕಲ್ಪಿಸಲೇಬೇಕು ಇಲ್ಲದಿದ್ದರೆ ಶಾಸ್ತ್ರಕ್ಕೆ ಅಪಚಾರ ಹೀಗಾಗಿ ವರ್ಣನೆಗಳೆಲ್ಲ ಒಂದರ ಪಡಿಯಚ್ಚು ಮತ್ತೊಂದು ಎನ್ನುವಂತಾಯಿತು. ಕವಿಗಳು ಶುಷ್ಕ ಅಲಂಕಾರಗಳಿಗೆ ಪ್ರಾಶಸ್ತ್ಯ ಕೊಟ್ಟರು. ಕವಿಸಮಯಗಳನ್ನು ನಿಷ್ಠೆಯಿಂದ ಪಾಲಿಸಿದರು. ಇದರಿಂದ ನಿಜವಾದ ಪ್ರತಿಭೆಗೆ, ರಸಾನುಭವಕ್ಕೆ ವರ್ಣನೆಗಳಲ್ಲಿ ಆಸ್ಪದವಾಗದೆ ಕೃತಕತೆ ತಾನೇ ತಾನಾಯಿತು; ರಸಭಾವಗಳಿಗೆ ನೆಲೆತಪ್ಪಿ ಪಾಂಡಿತ್ಯ, ಶಾಸ್ತ್ರ, ಸಂಪ್ರದಾಯಗಳಿಗೆ ಮಹತ್ವ ಉಂಟಾಯಿತು."[೩] ಈ ಹಿನ್ನೆಲೆಯಲ್ಲಿ ನಾವು ರತ್ನಾಕರವರ್ಣಿಯನ್ನು ನೋಡಿದರೆ ಆತನು ಅಸಾಮಾನ್ಯ ಸ್ವತಂತ್ರಮತಿಯಾಗಿದ್ದಾನೆ. ಅಷ್ಟಾದಶ ವರ್ಣನೆಗಳ ಗೊಡವೆಗೆ ಹೋಗದೆ ಪ್ರಶಾಂತ ಮನೋಭಾವದಿಂದ, ತಿಂಗಳಿನ ಬೆಳಕಿನಂದದಿ ವರ್ಣನೆಗಳು ತಣ್ಣತಣ್ಣನೆ ನಮ್ಮನ್ನು ಸ್ಪರ್ಶಿಸುತ್ತವೆ.

ತುಳುನಾಡು ಕಡಲ ತಡಿಯ ನಾಡು. ಇಂತಹ ನಾಡಿನಲ್ಲಿ ಜನಿಸಿ, ರತ್ನಾಕರವರ್ಣಿಯಂತೆ ಕಡಲನ್ನು ನೈಜವಾಗಿ ವರ್ಣಿಸಿರುವ ಕವಿ ಮತ್ತೊಬ್ಬನಿಲ್ಲ. ಕೇವಲ ಅಷ್ಟಾದಶ ವರ್ಣನೆಗಳಿಗೋಸ್ಕರ ಹಿಂದಿನ ಎಲ್ಲ ಕವಿಗಳು ಕಡಲನ್ನು ವರ್ಣಿಸಿದರು. ಕಡಲಿರುವಲ್ಲೆಲ್ಲ ಕಮಲವನ್ನು ಸೃಷ್ಟಿಸಿದರು. ಆದರೆ ಭೋರ್ಗರೆಯುವ ಸಮುದ್ರದಲ್ಲಿ ಕಮಲವೆಲ್ಲಿಂದ...? ಕಮಲ ಹುಟ್ಟುವುದು ಕೆಸರಲ್ಲಿ ಎಂಬ ಕಿಂಚಿತ್ ಅರಿವು ನಮ್ಮ ಪುರಾಣಕವಿಗಳಿಗಿದ್ದಿದ್ದರೆ...। ಏನೇ ಇರಲಿ ಕಮಲವೂ ಇರಲಿ... ಕಡಲೂ ಇರಲಿ... ನಮ್ಮ ರತ್ನಾಕರವರ್ಣಿಯ ಭರತೇಶ ವೈಭವದ 'ಪೂರ್ವಸಾಗರದರ್ಶನ' ಸಂಧಿಯಲ್ಲಿ ಕಡಲಿನ ಸನ್ನಿವೇಶ ಮತ್ತು ವರ್ಣನೆ ಈ ರೀತಿಯಾಗಿ ಬಂದಿದೆ;

ಬಳಿಕ ಮೂರನೆಯ ಜಾವದೊಳವನೀಶನಾ । ನಳಿನಾಕ್ಷಿಯರು ಸಹವಾಗಿ ॥
ನೆಲೆಮಾಡವೇರಿ ಮೇಲ್ಮನೆಯೊಳು ಕುಳಿತು ಪೆಂ । ಗಳಿಗಂಬುನಿಧಿಯ ತೋರಿದನು ॥೯೨॥

ಕಡಲ ಮುನ್ನರಿಯದ ಪೆಂಗಳಚ್ಚರಿವಟ್ಟು । ನಿಡುಬೆರಳಿಟ್ಟು ನಾಸಿಕಕೆ॥
ಮುಡಿಯೊಲೆದೊಲೆದು ನೋಡಿದರದರೊಂದು ಬಲ್ಗಡೆಗೆ ಬಗೆಯೊಳು ಮೆಚ್ಚಿ॥೯೩॥

ದಿಟ್ಟಿಗೆ ಮಿಗೆ ಹಾಯ್ದು ತೋರ್ಪ ಸಮುದ್ರದ । ಕಟ್ಟಳಲಿಗೆ ಚೋದ್ಯವಟ್ಟು॥
ಅಟ್ಟಹಾಸದ ಮಾಡುತಬ್ಬರೊಬ್ಬರ ಮೈಯ । ತಟ್ಟುತ ತೋರಿ ನುಡಿದರು ॥೯೪॥

ಅಟ್ಟುವ ತೆರೆಯ ಮುಂದೋಡುವ ತೆರೆಯ ಪೆ । ರ್ಬೆಟ್ಟದಂತೇಳ್ವ ತೆರೆಗಳ ॥
ತೊಟ್ಟನೆ ಬಯಲಹ ತೆರೆಗಳನವರು ಕ । ಣ್ಣಿಟ್ಟು ನೋಡಿದರರ್ತಿವಡುತ ॥೯೫॥

ಎಡೆಗುತ್ತಿಗಳನಲ್ಲಿಗಲ್ಲಿ ನಿಂದದ್ರಿಯ । ನಿಡುಗಲ್ಲುಗಳನದರೊಳಗೆ ॥
ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ । ಹಡಗುಗಳಿರದ ನೋಡಿದರು॥೯೬॥

ತುಂತುರು ತೆತೆ ನೊರೆ ಸುಳಿ ಘುಳುಘುಳುರುವ । ತೂಂತಿಟ್ಟು ಹೊಳೆವ ಪಾರಿಧಿಯ॥
ಕಾಂತೆಯರೆಲ್ಲರೀಕ್ಷಿಸುತಿರೆ ಭೂಪಾಲ । ನಿಂತೆಂದು ನುಡಿದನವರೊಳು॥೯೭॥

ಇಂದು ಮೊದಲುಗೊಂಡು ನಿಚ್ಚಲು ನೀವು ಪೆಂ । ಪೊಂದಿದಬ್ಧಿಯ ನೋಡಬಹುದು ॥
ಇಂದಿಗೆ ಸಾಕೆಂದು ಕರೆದುಕೊಂಡರಸಿಯ । ರೊಂದಾಗೆ ಮಾಡದಿಂದಿಳಿದ ॥೯೮॥

ರಾಗದಿಂದಾ ದಿನ ಮತ್ತೆ ಕಾಲೋಚಿತ । ಭೋಗದೊಳಾ ರಾಯನಿರ್ದ॥
ಸಾಗರತಟದೊಳು ಪಡೆಯಿದ್ದುದಿದು ಪೂರ್ವ । ಸಾಗರದರ್ಶನ ಸಂಧಿ ॥೯೯॥[8]

ಇಷ್ಟೊಂದು ಸಹಜಸುಂದರವಾಗಿ ಕಡಲನ್ನು ಕವಿಯು ವರ್ಣಿಸಿರಬೇಕಾದರೆ ಅವನಿಗೆ ಕಡಲಿನ ಪರಿಚಯ ಸಾಕಷ್ಟಿರಬೇಕನ್ನಿಸುತ್ತದೆ. ಅಟ್ಟುವ ತೆರೆಯ ಮುಂದೋಡುವ ತೆರೆಯ ಪೆರ್ಬೆಟ್ಟದಂತೇಳ್ವ ತೆರೆಗಳ... ಇಷ್ಟೊಂದು ಅದ್ಭುತವಾಗಿ ಕಡಲಿನಲೆಗಳನ್ನು ವರ್ಣಿಸಿರುವ ಕವಿ ಇನ್ನೊಬ್ಬನಿಲ್ಲ. ಮೇಲಿನ ಪದ್ಯಗಳಲ್ಲಿ ಅಲ್ಲದೆ ಇತರ ಅನೇಕ ಪದ್ಯಗಳಲ್ಲಿ ಕಡಲು ಮತ್ತು ಹಡಗಿನ ಉಲ್ಲೇಖ ಬರುತ್ತದೆ;

'ಮುನಿಭುಕ್ತಿಸಂಧಿ'ಯಲ್ಲಿ,

ಹಡಗು ದ್ವೀಪಕ್ಕೆ ಹೋಗುತ್ತಿರಲಲ್ಲಿ ವಸ್ತುವ । ಗಡಣಿಸಿ ಕಳುಹುವನಂತೆ॥
ಬಿಡದೆ ಮುಕ್ತಿಗೆ ಹೋಹ ಮುನಿಯ ಕೈಗನ್ನವ । ನಿಡಬೇಡವೆ ಎಂದು ನೆನೆವ ॥೪೧॥

'ಸಮವಸರಣಸಂಧಿ'ಯಲ್ಲಿ,

ಪೊಡವಿಯಾಗಸತುಂಬಿ ತನ್ನ ನಿರ್ಮಲಕಾಂತಿ । ಮಡುಗಟ್ಟಲಾ ಸಮುದ್ರದೊಳು ॥
ನಡೆಯದೆ ನಿಂದೊಂದು ನವರತ್ನ ರಚನೆಯ । ಹಡಗಿನಂತಿಹುದನುಜಾತಾ ॥೨೭॥

ನಡೆವಾಗ ನಡೆವುದಂಬರದೊಳು ಪ್ರಭೆಯೆಂಬ । ಕಡಲೊಳು ಹಡಗಿನಂದದೊಳು ॥
ನಡೆಯದಿರೆಂದರೆ ನಿಲ್ವುದಾ ಸ್ವಾಮಿ ಪೇ । ಳ್ದೆಡೆಯೊಳು ಹಡಂಗಿನಂದದೊಳು ॥೨೮॥

'ತತ್ವಾರ್ಥಸಂಧಿ'ಯಲ್ಲಿ,

ಛಿದ್ರವ ಮುಚ್ಚಿದ ಹಡಗಿನೊಡಲಿಗೆ ಸ । ಮುದ್ರದ ನೀರ್ಪೊಗದಂತೆ ॥
ಉದ್ರೇಕದ ಯೋಗಗಳನು ಗುಪ್ತಿಗಳಿಂದ । ಮುದ್ರಿಸಿದರೆ ಕರ್ಮಬಹುದೆ ॥೬೫॥[೫]

ಸಮುದ್ರವನ್ನು, ಹಡಗನ್ನೂ ಅನೇಕ ಪದ್ಯಗಳಲ್ಲಿ ರೂಪಕಗಳಾಗಿಯೂ, ಉಪಮೆಗಳಾಗಿಯೂ ಕವಿಯು ಬಳಸಿಕೊಂಡಿದ್ದಾನೆ. ಇದಕ್ಕೆ ಕಾರಣವಿಲ್ಲದಿಲ್ಲ. ಕ್ರಿ.ಶ. ೧೬ನೇ ಶತಮಾನದಲ್ಲಿ ಮೂಡಬಿದಿರೆಯು ಒಂದು ಪ್ರಮುಖ ವಾಣಿಜ್ಯ ನಗರವಾಗಿದ್ದಿತು. ಇಂತಹ ನಗರದಲ್ಲಿ ಬಾಳಿಬದುಕಿದ ಕವಿಯು ತನ್ನ ಕಾವ್ಯದಲ್ಲಿ ಸಂದರ್ಭೋಚಿತವಾಗಿ ಸಮುದ್ರವನ್ನೂ ಹಡಗಿನ ಚಿತ್ರಣವನ್ನೂ ಕೊಟ್ಟಿದ್ದು ಅತಿಶಯೋಕ್ತಿಯಲ್ಲವೆನಿಸುತ್ತದೆ.

ಪ್ರೊ. ಎಸ್. ಪಿ. ಅಜಿತಪ್ರಸಾದ್ ಅವರು ತಮ್ಮ 'ಮೂಡಬಿದಿರೆಯ ವೈಶಿಷ್ಟ್ಯ' ಎಂಬ ಪುಸ್ತಕದಲ್ಲಿ ರತ್ನಾಕರವರ್ಣಿಯು ಬಾಳಿದ ಕಾಲಮಾನದ ಅಂದರೆ ೧೬ನೇ ಶತಮಾನದ ಮೂಡಬಿದಿರೆಯ ಆರ್ಥಿಕ ಸ್ಥಿತಿಗಳನ್ನು ಹೀಗೆ ಹೇಳಿದ್ದಾರೆ. "ಪ್ರಾಚೀನ ಕಾಲದಿಂದಲೂ ಮೂಡಬಿದಿರೆ ತುಳುನಾಡಿನ ಸಂಪದ್ಭರಿತ ನಗರಗಳಲ್ಲಿ ಒಂದಾಗಿತ್ತು. ವ್ಯಾಪಾರ ಮತ್ತು ಕೃಷಿ ಇದರ ಆದಾಯದ ಮೂಲವಾಗಿತ್ತು. ಮೂಡಬಿದಿರೆಯ ಸೆಟ್ಟಿಗಾರರು ಸಾಹಸಿಗಳು. ಇವರ ವಹಿವಾಟು ದೇಶ–ವೀದೇಶಗಳಲ್ಲಿ ಹರಡಿದ್ದಿತು. ಕ್ರಿ.ಶ. ೧೪ನೆ ಶತಮಾನದಿಂದ ೧೬ನೇ ಶತಮಾನದವರೆಗೂ ಮೂಡುಬಿದಿರೆ ಒಂದು ಪ್ರಮುಖ ವಾಣಿಜ್ಯೋದ್ಯಮ ಕೇಂದ್ರವಾಗಿತ್ತು. ದೇಶ–ವಿದೇಶದ ಸರಕುಗಳಿಗೆ ಒಂದು ಮುಕ್ತ ಮಾರುಕಟ್ಟೆಯೂ ಆಗಿತ್ತು. ನವರತ್ನಗಳ ವ್ಯಾಪಾರಗಳಿಂದ ಇಲ್ಲಿಯ ವಣಿಕರು ಅಪಾರವಾದ ಸಂಪತ್ತನ್ನು ಗಳಿಸಿದ್ದರು. ಚೀನಾ ದೇಶದೊಂದಿಗೆ ಸಹಾ ವ್ಯಾಪಾರ ಸಂಪರ್ಕ ಹೊಂದಿದವರಾಗಿದ್ದು. ಆ ದೇಶದ ರೇಷ್ಮೆ ಮುಂತಾದ ವಸ್ತ್ರಗಳಿಗೆ ಇಲ್ಲಿ ಭಾರೀ ಬೇಡಿಕೆ ಇತ್ತು, ಎಂಬ ಆಂಶವನ್ನು ಇಲ್ಲಿಯ ಕ್ರಿ.ಶ. ೧೪೩೦ರ ಶಾಸನವೊಂದು ಚಿತ್ರಿಸುತ್ತದೆ. 'ತ್ರಿಭುವನ ತಿಲಕ ಚೂಡಾಮಣಿ' ಬಸದಿಯ ಹೊರವಲಯದಲ್ಲಿ ಶಿಲೆಯಲ್ಲಿ ಕೆತ್ತಲಾಗಿರುವ ಡ್ರ್ಯಾಗನ್ ಚಿತ್ರವು ಆ ಕಾಲದಲ್ಲಿ ಮೂಡುಬಿದಿರೆಯು ಚೀನಾ ದೇಶದೊಂದಿಗೆ ಹೊಂದಿದ್ದ ಸಂಬಂಧಕ್ಕೆ ಸಾಕ್ಷಿಯಾಗಿದೆ. ವ್ಯಾಪಾರದಂತೆ ಕೃಷಿಯೂ ಮೂಡುಬಿದಿರೆಯ ಆರ್ಥಿಕತೆಯ ಅಡಿಪಾಯ ಆಗಿದ್ದಿತು. ಭತ್ತ, ಕಬ್ಬು, ಮುಂತಾದ ಬೆಳೆಗಳ ಹೊಲಗಳಿಂದ ಹೂ ತೋಟಗಳಿಂದ, ಸುವ್ಯವಸ್ಥಿತವಾದ ರಸ್ತೆಗಳಿಂದ, ಹಲವಾರು ಕೆರೆಗಳಿಂದ ಮೂಡುಬಿದಿರೆಯ ರಮ್ಯವಾದ ಪಟ್ಟಣವಾಗಿತ್ತೆಂದು ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಇವೆಲ್ಲದರ ಜೊತೆಯಲ್ಲಿ ಮೂಡುಬಿದಿರೆ ಪ್ರಾಚೀನ ಕಾಲದಲ್ಲಿ ಪ್ರಮುಖ ವಿನಿಮಯ ಕೇಂದ್ರವೂ ಆಗಿತ್ತು. ಬಾರಕೂರು, ಮಂಗಳೂರುಗಳಲ್ಲಿ ಮುದ್ರಿಸಿದ ನಾಣ್ಯಗಳು ಇಲ್ಲಿ ವಿನಿಮಯ ಆಗುತ್ತಿದ್ದವು. 'ಬಾರಕೂರ ಗದ್ಯಾಣ' 'ಮಂಗಳೂರು ಗದ್ಯಾಣ' ಎಂಬ ಪ್ರಯೋಗಗಳು ಶಾಸನದಲ್ಲಿ ಇದೆ"[೬]

ವಾಣಿಜ್ಯ ನಗರಿಗಳಾದ ಮಂಗಳೂರು, ಮೂಡುಬಿದಿರೆಗಳು ಸಮುದ್ರಮಾರ್ಗಮೂಲಕವಾಗಿ ಇತರ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದವು. ಇದನ್ನು ಪ್ರತ್ಯಕ್ಷವಾಗಿ ಕಂಡ ಕವಿಗೆ ಕಡಲು ರತ್ನದಾಭರಣದಂತೆ ಕಂಗೊಳಿಸುತ್ತದೆ.

ರತ್ನಾಕರವರ್ಣಿಯ ಕಾವ್ಯ ಶರೀರ ತಾನು ಹುಟ್ಟಿ ಬೆಳೆದ ನಾಡಿನ ಇನ್ನೂ ಅನೇಕ ಸಂಗತಿಗಳನ್ನೂ ಬಳಸಿಕೊಂಡಿದೆ. 'ದಿವ್ಯ ಧ್ವನಿ ಸಂಧಿ'ಯಲ್ಲಿ ಬರುವ ಈ ಒಂದು ಪದ್ಯ ಹೀಗಿದೆ;

ಹೊಳೆಯೊಂದರುಕವ ವನಕೆ ತಿದ್ದಿದರಲ್ಲಿ । ಬೆಳೆದ ಮಾವಂಬಟೆ ತೆಂಗು ॥
ಹಲಸು ಮುಂತಾದುವ ಹೊದ್ದಿ ಹಲವು ಪರಿಯೊಳು ಪರಿಣಮಿಸುವಂದದೊಳು ॥೫೭॥[೭]

ತುಳುನಾಡಿನಲ್ಲಿ ಮಾವು, ಅಂಬಟೆ, ತೆಂಗು ಇಲ್ಲದ ಮನೆಗಳೇ ಇಲ್ಲವೆನ್ನಬಹುದು. ಇದನ್ನು ವರ್ಣಿಸಲು ರತ್ನಾಕರವರ್ಣಿಗೆ ಮಾತ್ರ ಸಾಧ್ಯ. ಕಾವ್ಯ ಮನುಷ್ಯನ ಭಾಷೆಯ ಅತ್ಯಂತ ಪರಿಪೂರ್ಣವಾದ ರೂಪ ಎಂಬ ಮಾತನ್ನು ಇಲ್ಲಿ ಹೇಳಬಹುದಾಗಿದೆ.

ಅಲ್ಲದೆ ಕವಿಯು 'ಕಟಕ ವಿನೋದ' ಸಂಧಿಯಲ್ಲಿ ಸುರಗಿ, ಕೇದಗೆ, ಸಂಪಗೆ, ಜಾಜಿ, ಮಲ್ಲಿಯೆಂದು 'ಭರತೇಶ'ನ ಮೇಲೆ ಅವನ ರಾಣಿಯರಿಂದ ಇಲ್ಲಿಯ ಹೂಗಳ ಮಳೆಯನ್ನೇ ಸುರಿಸಿದ್ದಾನೆನ್ನಬಹುದು. ಅಲ್ಲದೆ ಕಾವ್ಯದಲ್ಲಲ್ಲಿ ಬರುವ ಉಪಮೆಗಳಲ್ಲಿ ಕರೆನಾಡಿನ ಸಹಜ ಸೌಂದರ್ಯವೇ ಆಗಿದೆ.

ಕೊನೆ ಟಿಪ್ಪಣಿ

೧. **ಡಾ॥ ಎಚ್. ತಿಪ್ಪೇರುದ್ರಸ್ವಾಮಿ** : ತೌಲನಿಕ ಕಾವ್ಯಮೀಮಾಂಸೆ, ಪು.೭೮, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು – ೪

೨. **ಜಿ. ಎಸ್. ಭಟ್ಟ (ಸಂ.)** : ಕುಮಾರವ್ಯಾಸ ಒಂದು ಅಧ್ಯಯನ, ಪು. ೭೯, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೩. **ಜಿ. ಎಸ್. ಭಟ್ಟ (ಸಂ.)** : ಕುಮಾರವ್ಯಾಸ ಒಂದು ಅಧ್ಯಯನ, ಪು. ೮೦, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೪. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೩೩–೨೩೪, ಅತಿಮಬ್ಬೆ ಪ್ರಕಾಶನ, ೨೧೩, ಸುಬ್ಬಯ್ಯ ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

೫. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೩, ೬೨೧, ೬೫೨, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮು ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

೬. **ಪ್ರೊ. ಎಸ್. ಪಿ. ಅಜಿತ ಪ್ರಸಾದ್** : ಮೂಡುಬಿದಿರೆಯ ವೈಶಿಷ್ಟ್ಯ. ಪು. ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೬೩೮, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿ ರೋಡ್, ಬಸವನಗುಡಿ, ಬೆಂಗಳೂರು – ೪

ಅಧ್ಯಾಯ : ಐದು

ದೈವ ದೇವರು – ನಂಬಿಕೆಗಳು

ಅಧ್ಯಾಯ : ಐದು
ದೈವ ದೇವರು – ನಂಬಿಕೆಗಳು

ತುಳುನಾಡಿನ ಪ್ರಾದೇಶಿಕ ಸಂಸ್ಕೃತಿಯ ಇನ್ನೊಂದು ಮುಖವನ್ನು ಅಲ್ಲಿನ ಭೂತಾರಾಧನೆಯೊಡನೆ ಅಧ್ಯಯನ ನಡೆಸುವುದು ಹೆಚ್ಚು ಪ್ರಸ್ತುತವೆನಿಸುತ್ತದೆ. ಇಲ್ಲಿನ ಜೈನಮತೀಯರು ಆಚರಿಸಿಕೊಂಡು ಬಂದ ಪ್ರಾದೇಶಿಕ ಆಚರಣೆಗಳಲ್ಲಿ ಭೂತಾರಾಧನೆ ಬಹಳ ಮುಖ್ಯವಾದ ಆರಾಧನೆಯಾಗಿದೆ. "ಒಂದು ಪ್ರದೇಶದಲ್ಲಿ ರೂಢಿಮೂಲವಾಗಿದ್ದ ಜನಪದೀಯ ಆಚರಣೆಗಳು ಶಿಷ್ಟ ಸಂಸ್ಕೃತಿಯಲ್ಲಿ ಸೇರ್ಪಡೆಗೊಳ್ಳುವುದು ಸ್ವಾಭಾವಿಕವಾದ ಪ್ರಕ್ರಿಯೆಯಾಗಿದೆ. ಅದಕ್ಕೆ ಆಯಾ ಕಾಲದ ಪರಿಸರ, ಸಂದರ್ಭಗಳ ಒತ್ತಡವೂ ಬಹುಮಟ್ಟಿಗೆ ಕಾರಣವಾಗುತ್ತದೆ. ಯಾವುದೇ ಹೊರಗಿನ ಆಚರಣೆಗಳನ್ನು ಸ್ವೀಕರಿಸುವಾಗಲೂ ಶಿಷ್ಟ ಸಂಸ್ಕೃತಿಯು ಅದನ್ನು ಯಥಾವತ್ತಾಗಿ ಇಡಿಯಾಗಿ ಎಂದೂ ಸ್ವೀಕರಿಸಲಾರದು. ತನ್ನ ಮೂಲಧರ್ಮದ ಆಶಯಗಳಿಗೆ ಭಂಗಬಾರದ ರೀತಿಯಲ್ಲಿ ಕೆಲವು ಬದಲಾವಣೆಗಳೊಡನೆ ಇದನ್ನು ಸ್ವೀಕರಿಸಬೇಕಾಗುತ್ತದೆ. ಆ ಬಳಿಕ ತನ್ನ ಧಾರ್ಮಿಕತೆಯ ಛಾಪನ್ನು ಒತ್ತುತ್ತದೆ"[೧]

ಕಳಸ – ಕಾರ್ಕಳ ರಾಜ್ಯದ ಜೈನರಾಜರ ರಾಜಧಾನಿ ಕಾರ್ಕಳವಾಗಿತ್ತು. ಶ್ರವಣಬೆಳಗೊಳದಲ್ಲಿ ಬಾಹುಬಲಿಯ ದಿವ್ಯಮೂರ್ತಿಯ ನಿರ್ಮಾಣದಂತೆಯೇ ಕಾರ್ಕಳ ಹಾಗೂ ವೇಣೂರಿನಲ್ಲಿ ಈ ಮೂರ್ತಿಯನ್ನು ಸ್ಥಾಪಿಸಿದ್ದು ಈ ರಾಜಮನೆತನಗಳೇ. ಇವರು ಜೈನಧರ್ಮ ಪ್ರಚಾರಕ್ಕೆ ಹಾಗೂ ಜೈನ ಬಸದಿಗಳ ನಿರ್ಮಾಣಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. "ಕ್ರಿ.ಶ. ೧೧ನೆಯ ಶತಮಾನದ ತರುವಾಯ ಇಡೀ ಕರ್ನಾಟಕದಲ್ಲಿ ರಾಜಧರ್ಮವಾಗಿ ವೈಭವವಾಗಿ ಮೆರೆದ ಜೈನಧರ್ಮವು ಹಠಾತ್ತಾಗಿ ಕುಸಿದುಬಿತ್ತು. ತನ್ನ ಜನಪ್ರಿಯತೆಯನ್ನು ಮರಳಿ ಗಳಿಸಿಕೊಳ್ಳಲಾರದಷ್ಟು ತೀರ ದುರ್ಬಲವಾದ ಸ್ಥಿತಿಗೆ ಬಂದು ತಲುಪಿತ್ತು. ಕೈ ತಪ್ಪಿದ ರಾಜಾಶ್ರಯ, ರಾಜಕೀಯ ಅಸ್ಥಿರತೆಗಳು ಒಂದೆಡೆಯಾದರೆ, ಇನ್ನೊಂದೆಡೆ ವೀರಶೈವ ಧರ್ಮದ ಕ್ರಾಂತಿ ಅದರಲ್ಲೂ ವೀರಶೈವ ಶರಣರು ಜೈನಧರ್ಮದ ಮೇಲೆ ನಡೆಸಿದ ಪ್ರಹಾರ, ಹಾವಳಿಗಳು, ಬಲಾತ್ಕಾರದಿಂದ ಜೈನ ಬಸದಿಗಳನ್ನು ಒಡೆದು, ಜಿನನನ್ನು ಕಿತ್ತು ತಲೆಯೊಡೆದು ಮಾಡಿದ ಲೂಟಿಗಳು, ಸಾಮೂಹಿಕ ಮತಾಂತರಗಳು"[೨] ಜೈನಧರ್ಮದ ಉಳಿವಿಗೆ ಕೊಡಲಿಯನ್ನು ಬೀಸಿದ್ದವು. "ತುಳುನಾಡಿನ ಒಳಗಡೆಗೆ ಜೈನಧರ್ಮಕ್ಕೆ ಇಂತಹ ಆತಂಕದ ಸ್ಥಿತಿಯು ಇಲ್ಲದಾಗಿದ್ದರೂ, ಪರೋಕ್ಷವಾಗಿಯಾದರೂ ಒಂದು ರೀತಿಯ ಭೀತಿಗೆ ಅದು ಗುರಿಯಾಗಿರಬೇಕು. ಈ ಹಿನ್ನೆಲೆಯಲ್ಲಿ ತುಳುನಾಡಿನ ಜೈನ ತುಂಡರಸರಾದ ಚೌಟ, ಬಂಗ, ಮೂಲ, ಅಜಿಲ, ತೋಳಹರ, ಸಾವಂತ, ಬೈರರಸರು ಮತ್ತು ಮಾಗಣೆ, ಗ್ರಾಮ, ಬೀಡುಗಳ ಮುಖ್ಯಸ್ಥರಾದ ಹೆಗ್ಗಡೆ, ಬಲ್ಲಾಳರು ಜೈನೇತರ ಧಾರ್ಮಿಕ ಶ್ರದ್ಧೆಯನ್ನು ವ್ಯಾವಹಾರಿಕವಾಗಿ ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಏಕೆಂದರೆ ಧಾರ್ಮಿಕ ನೆಲೆಯಲ್ಲಿ ಸಂಘರ್ಷಕ್ಕೆ ಇಳಿದು ಜನವಿರೋಧಿಯಾಗುವುದು ಜೈನಧರ್ಮಕ್ಕೆ ಬೇಕಿರಲಿಲ್ಲ. ಹೀಗಾಗಿ ಶೈವ ಪಂಥದ ಶಿವ, ವೈಷ್ಣವ ಪಂಥದ ವಿಷ್ಣು ಶಕ್ತಿಪಂಥದ ದುರ್ಗಿ ಮೊದಲಾದ ದೇವದೇವತೆಗಳ ಆರಾಧನೆಯನ್ನು ಸ್ವೀಕರಿಸುವುದರ ಜೊತೆಗೆ ಜಾನಪದ ಮೂಲದ ಭೂತಾರಾಧನೆ, ನಾಗಾರಾಧನೆಗಳನ್ನು ಒಪ್ಪಿಕೊಂಡಿತು"[೩]

ಇಂತಹ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸರದಲ್ಲಿ ಉದಿಸಿದ ಕವಿ ರತ್ನಾಕರವರ್ಣಿ. ಇಂತಹ ಹಿನ್ನೆಲೆಯಲ್ಲಿ ತನ್ನ ಕಾವ್ಯದಲ್ಲಿ ತಳೆದ ಧಾರ್ಮಿಕ ನಿಲುವು ಹೆಚ್ಚು ಮಾರ್ಮಿಕವಾದುದಾಗಿದೆ. ಸಾಹಿತ್ಯ ಜನಮಾನಸದಲ್ಲಿ ಸಮರಸದ ಬಾಳ್ವೆಗೆ ದಾರಿದೀಪವಾಗಬೇಕೆ ಹೊರತು ಆಂತರಿಕ ಕಲಹ ಹುಟ್ಟುಹಾಕಬಾರದೆಂದು ರತ್ನಾಕರವರ್ಣಿಯ ದೃಷ್ಟಿಯಾಗಿತ್ತು. ಆತನ ಈ ಮನೋಭಾವನೆಗೆ ಪುಷ್ಟಿ ನೀಡುವುದು 'ಭರತೇಶ ವೈಭವ'ದ 'ದೃಷ್ಟಿನಿವಾರಣಾ ಸಂಧಿ'ಯಲ್ಲಿ ಬಂದ ಕುಲದೈವಗಳ ಪ್ರಸಂಗ. ಈ ದೈವಗಳಿಗೂ, ತುಳುನಾಡಿನಲ್ಲಿ ಜೈನರು ಆರಾಧಿಸಿಕೊಂಡು ಬರುತ್ತಿರುವ ದೈವಗಳಿಗೂ ಹಲವಾರು ಸಾಮ್ಯಗಳಿವೆ.

ಘಟನೆಯ ಹಿನ್ನೆಲೆಯನ್ನು ನೋಡೋಣ; ಭರತೇಶನ ದಿಗ್ವಿಜಯದ ಸಂದರ್ಭದಲ್ಲಿ ಆತನ ಸೈನ್ಯವು ಮ್ಲೇಚ್ಛ ಖಂಡದಲ್ಲಿ ಅಲ್ಲಿ ಬೀಡು ಬಿಡುತ್ತದೆ. ಆ ರಾಜ್ಯಕ್ಕೆ ಚಿಲಾತ ಮತ್ತು ಅವರ್ತರೆಂಬುವವರು ರಾಜರಾಗಿರುತ್ತಾರೆ. ಅವರು ಚಕ್ರಿಗೆ ಶರಣಾಗದೆ ತಮ್ಮ ಸೈನ್ಯದೊಂದಿಗೆ ಬಂದು ಕಾದಾಡಿ ಸೋತು ಹಿಮ್ಮೆಟ್ಟಿದವರು ಸುಮ್ಮನಾಗದೆ ತಮ್ಮ ಕುಲದೈವಗಳಾದ ಕಾಲಮುಖ, ಮೇಘಮುಖರನ್ನು ಅರ್ಚಿಸುತ್ತಾರೆ. ಆಗ ಅವುಗಳು ಪ್ರತ್ಯಕ್ಷವಾಗಿ "ನಮ್ಮನ್ನೇಕೆ ಜಪಿಸಿದಿರಿ" ಎಂದು ಕೇಳಿದಾಗ ಕಾರಣವನ್ನು ಅರಸರು ಹೇಳುತ್ತಾರೆ. "ಏಳಿ, ಇವನನ್ನು ಹಿಂದಕ್ಕೋಡಿಸಿ ನಿಮಗೆ ಸುಖವನ್ನುಂಟು ಮಾಡುವೆವು. ಏಳೆಂಟು ದಿನ ಸೈರಿಸಿ, ಕಾದಿ ಜಯಿಸಲು ನಮಗೆ ತಿಳಿಯದು. ಭೇದವಿಲ್ಲದೆ ಮಳೆ ಸುರಿಸಿ, ಹಿಂಸೆ ಕೊಟ್ಟು ಕಳುಹಿಸುವೆವು" ಎಂದು ದೈವಗಳು ಅಭಯವಿತ್ತವು.

ದೈವಗಳು ಮಾಯವಾದೊಡನೆ ಆನೆಗಳ ಹಿಂಡಿನಂತೆ ಮುಗಿಲು ಆಕಾಶವನ್ನು ತುಂಬಿತು. ಕಾಳರಾಹು ಚಲಿಸುವಂತೆ ಅವು ಚಲಿಸಿದವು. ಕಾಳ ರಾಕ್ಷಸರು ಕಾಳಗಕ್ಕೆಂದು ಪಾಳೆಯಬಿಟ್ಟರೋ ಎಂಬಂತೆ ಕಾಳಮೇಘಗಳ ಸಮೂಹವು ಕವಿದು ಕಡೆಗಾಲದ ಭಯವನ್ನು ಸೂಚಿಸಿತು. ನೀಲಗಿರಿಗಳೇ ಚಲಿಸುವಂತೆ, ತಮಾಲಲತೆಗಳು ಹುಟ್ಟುವಂತೆ, ಅಂಧಕಾರದ ದಾಳಿಯೋ ಎಂಬಂತೆ ಮೇಘಜಾಲ ಒಟ್ಟುಗೂಡಿತು. ಸೂರ್ಯಚಂದ್ರರಿಗೂ ಮುಸುಕು ಹಾಕುವಂತೆ ಕಾರ್ಮುಗಿಲು ಸುತ್ತಲೂ ಹಬ್ಬಿತು. ಹಗಲು ಕತ್ತಲೆ ಕವಿದಂತಾಯಿತು.

ಕಾವ್ಯಭಾಗದಲ್ಲಿ ಇಂತಿದೆ;

"ಸರ್ವಬಲದ ನೋಡಿ ಸಂತವಿಟ್ಟಾ ಮಧ್ಯ । ದುರ್ವಿಯೊಳರಸನಿಪ್ಪಾಗ ॥
ಪೂರ್ವದೊಳಾರು ಕಂಡರಿಯದೊಂದು ವಿ । ಗುರ್ವಣೆಯಾದುದೇನೆಂಬೆ ॥೩೭॥

ಆ ವಸುವತಿಗೆ ಚಿಲಾತರಾಜನು ಬಳಿ । ಕಾವರ್ತರಾಜನೆಂದೆಂಬ ॥
ಭೂವರರಿಬ್ಬರಗ್ಗಳರವರೆಸಗಿದ । ರಾ ವೇಳೆಯೊಳಗೊಂದು ಭಯವಾ ॥೩೮॥

ಎಂದುಯಿಲ್ಲದ ಚಕ್ರಿ ಬಂದನಿವನಿಗಾವು । ವಂದಿಸುವೆವೆ ಘಡಾಯೆಂದು ।
ಮಂದಿ ಸಹಿತ ಕಾದಿ ತೆರಳಿಸಲರಿದು ಮ ।ತ್ತೊಂದು ತಂತ್ರವ ಕಂಡರವರು ॥೩೯॥

ಕಾಲಮುಖರು ಮೇಘಮುಖರೆಂಬ ತಮ್ಮ ವಿ । ಕಲಾವಿ ಕುಲಾಧಿದೈವಗಳಾ ॥
ಆಲಸ್ಯವಿಲ್ಲದರ್ಚಿಸಿ ಭಜಿದರವು । ಮೇಲೆ ಮೈದೋರಿದುವೊಡನೆ ॥೧೦॥

ನಮ್ಮ ನೀವೇನು ಕಾರಣ ಜಪಿಸಿದಿರಿಯೆಂ । ದುಮ್ಮಿ ದೈವಗಳು ಕೇಳಿದುವು ॥
ನಿಮ್ಮ ಭಕ್ತರು ನಾವು ಪರರಿಗೆರಗುವುದು । ಸಮ್ಮತಾಂಗವೆಯೆಂದರವರು ॥೪॥

ಕಾಲಮುಖರ ಮೇಘಮುಖರ ಭಕ್ತರು ಹೋಗಿ । ಕಾಲವಶದಿ ನರಪತಿಯ ॥
ಕಾಲಿಗೆರಗಿದರೆಂಬುದು ಸಾಕೆ ನಿಮಗೆಂದು । ಕಾಲಿಗೆ ಬಿದ್ದರಾ ನೃಪರು ॥೪೨॥

ಏಳಿರೈ ಇವನ ಹಿಂದಕೆ ತೆರಳಿಸಿ ನಿಮ । ಗಾ ಲೋಲಸುಖವ ಮಾಡುವೆವು ॥
ಏಳೆಂಟು ದಿನಮಟ್ಟ ಸೈರಿಸಿ ನಲವಿಂದ । ಕೇಳುತೆದ್ದರು ಹರುಷದೊಳು ॥೪೩॥

ಕಾದಿ ಜಯಿಸತಿಮಗರಿದು ಪಾಯ್ದಳ ಬಂದ । ಹಾದಿಹೊಳ್ತಿರುಗಿ ಹೋಹಂತೆ ॥
ಬೇಧವಿಲ್ಲದೆ ಮಳೆಗರೆದು ಬೇಸರಿಪೆವೆಂ । ದಾ ದೈವ ಕಳುಹಿದುವವರ ॥೪೪॥

ಒಡ್ಡಿತಾಗಳೆ ಮುಗಿಲಾಕಾಶ ತುಂಬಿ ಮಾ । ರೊಡ್ಡಿದಾನೆಯ ಹಿಂಡಿನಂತೆ ॥
ಅಡ್ಡಪಿಂಡಾಗಿ ಸುಳಿದುವು ಕಾಲರಾಹುವಿ । ನೊಡ್ಡು ಸಂಚಲಿಸುವಂದದೊಳು ॥೪೫॥

ಕಾಳರಾಕ್ಷಸರು ಕಾಳಗಕೆಂದು ಮೊದಲೊಡ್ಡಿ । ಪಾಳೆಯಬಿಟ್ಟರೆಂಬಂತೆ ॥
ಕಾಳಮೇಘಗಳೊಡ್ಡು ಕವಿದು ತೋರಿತು ಕಡೆ । ಗಾಲದ ಭಯವ ಸೂಚಿಸುತ ॥೪೬॥

ನೀಳಗಿರಿಗಳು ನೆಗೆದು ಚರಿಸುವುವೊ ತ । ಮಾಳಲತೆಗಳು ಹಬ್ಬಿದುವೊ ॥
ಭೀಳಾಂಧಕಾರದ ದಾಳಿಯೊಯೆನೆ ಮೇಘ । ಜಾಳ ಮೋಹರಿಸಿತೇಳ್ಗೆಯೊಳು ॥೪೭॥

ಮೊಗಸಿತು ಚಂದ್ರಸೂರ್ಯರಿಗೆ ಮುಸುಕು ಕಾರ । ಮುಗಿಲು ಸುತ್ತಲು ಪಸರಿಸಿತು ॥
ಹಗಲು ಕತ್ತಲೆ ಕವಿದಂತಾಯ್ತು ದುಷ್ಟ । ದೈವಗಳ ವಿಗುರ್ವಣೆಯಿಂದ ॥೪೮॥

ಮುಂಚಿ ಕಾರ್ಮುಗಿಲೊಡ್ಡು ಬಹುದೆಂದು ದೈವಗ । ಳಂಚಿನೊಳ್ನಿಂದು ಸೂಚನೆಗೆ ॥
ಕುಂಚವ ಬೀಸುತಿದ್ದುವೊಯೆನೆ ಚೆಲುವಾಗಿ । ಮಿಂಚು ಮಿಂಚುದುವಲ್ಲಿಗಲ್ಲಿ ॥೪೯॥

ಪಂಚವರ್ಣದ ಸುರಚಾಪಕೆ ಹೊಳೆವೆಳೆ । ಮಿಂಚಿನ ಹೆದೆಯ ಸಂಗೊಳಿಸಿ ॥
ಹೊಂಚಿ ದೈವಗಳು ಮಿಡಿದು ನೋಡಿದಂತೆ ಪ । ಳಂಚಿ ಮೊಳಗಿತಾಗ ಮೊಳಗು ॥೫೦॥

ಪಡಿಯನೊಡೆದು ದನಿದೋರಿ ಷಟ್ಖಂಡವ । ನಡುಗಿಸಿದರಸನ ಪಡೆಯ ॥
ನಡುಗಿಸಲಾರ್ಭಟಿಸಿದುವೋ ದೈವಗಳೆನೆ । ಸಿಡಿಲು ಚೀರ್ಚಿಟಿಸಿತಲ್ಲಲ್ಲಿ ॥೫೧॥

ತಾಳಲರಿದು ದೈವಕೃತವೃಷ್ಟಿ ಬುರುತಿದೆ । ಯೇಳಿ ನೀವೆಂದು ಪಾಯ್ದಳಕೆ ॥
ಹೇಳಲೊದಗಿ ಮುಂದೆ ಬಂದ ದೂತನೊಯೆನೆ । ಗಾಳಿ ಬಿರ್ರೆಂದು ಬೀಸಿದುದು ॥೫೨॥

ಕೊಡದ ಸಾಲಂದದ ಮುಗಿಲ ಕಾಮನಬಿಲ್ಲ । ಬಡಿಗೆಯಿಂದ ಬಡಿಯೆ ದೈವಗಳು ॥
ಒಡೆದಂತೆ ಗುಡುಗಾದುದೊಳಗಿದ್ದ ನೀರು ತೊ । ಟ್ಟಿಡುವಂತೆ ಕರೆದುದು ವೃಷ್ಟಿ ॥೫೩॥

ಮುಗಿಲೆಂಬ ಮದಗಜಗಳ ಮದಧಾರೆಯೊ । ಮಿಗೆ ಮೇಘವೆಂಬ ರಾಹುಗಳು ॥
ಉಗುಳುವ ವಿಷವೊಯೆಂಬಂತಾಗ ಕಷ್ಟ । ವೃಷ್ಟಿಗಳ ಸೂಸಿದವು ದೈವಗಳು ॥೫೪॥

ಎಲ್ಲಿಂದ ಬಂದುವೀ ಕಂಪುಗೆಟ್ಟಹ ಮೊಗ್ಗೆ । ಮಲ್ಲಿಗೆಯೆಳೆಯ ಮುತ್ತೆಂದು ॥
ಎಲ್ಲರಚ್ಚರಿವಟ್ಟು ನೋಡುವಂತೊಡನಾಲಿ । ಕಲ್ಲು ಝುಲ್ಲೆಂದು ಚೆಲ್ಲಿದುವು ॥೫೫॥

ಏನೆಂಬೆ ಪಡೆ ಬೆಚ್ಚುವಂತಾಲಿವರಲ ಮ । ತ್ತಾನೆಯ ತೋರದೊಳ್ಕರೆಯೆ ॥
ಆನೆಕಲ್ಲೆಂದಿದುಮುಟ್ಟಲು ನುಡಿವರು । ಮಾನವರಾಲಿಕಲ್ಲುಗಳ ॥೫೬॥

ತಾರಕೋರ್ವಿಯ ಕಲ್ಪತರುಗಳಿಂದಿಳಿತಹ । ಬೇರುಗಳೆನೆ ನಭವೆಂಬ ॥
ಧಾರೆವಟ್ಟಲೊಳಿಳಿತಹ ಜಲವೆನೆ ಜಲ । ಧಾರೆಗಳ್ಧರಣಿಗಿಳಿದುವು ॥೫೭॥

ಅಗಣಿತದೈವಗಳೊಂದು ಹಬ್ಬದ ಮಾಡ । ಲಗಲದೊಳ್ನೆರೆದೊತ್ತಲಾಗಿ ॥
ಗಗನವೆಂದೆಂಬ ಸೇವಗೆಯೊರಳಿಂದ ಸೇ । ವೆಗಯಿಳಿವೊಳು ಮಳೆಯಾಯ್ತು ॥೫೮॥

ಕರೆದುದು ವೃಷ್ಟಿಯೇನೆಂಬೆನಂಬರವೆ ಬಾ । ಯ್ದೆರೆದುಗುಳಿದುದೊಯೆಂಬಂತೆ ॥
ಕಿರುಧಾರೆಯಲ್ಲಿ ತೆಂಗಿನಮರಗಳ ತೋರ । ದುರುವ ಧಾರೆಯೊಳೆಡೆವಿಡದೆ ॥೫೯॥

ಧಾರಿಣಿಯೊಳಗುಳ್ಳ ಪೂಜೆಯನಾ ನೃಪರಾಗ । ದೂರತೆ ಗೂಳೆಯದೆಗೆಸೆ ॥
ಆ ರಾಜ್ಯದನಿತ ಬಿಟ್ಟರಸನ ಸೇನೆಗೆ । ಭೋರೆಂದು ಕರೆದುವು ಮಳೆಯಾ ॥೬೦॥

ನೆಲನೆಲ್ಲ ಜವುಗಾಯ್ತು ಮೊದಲು ಮತ್ತುರೆ ತೇದು । ತೊಳೆದುಹೋದುವು ಬಡಬೆಟ್ಟ ॥
ಬಲುಬೆಟ್ಟ ಕಸಿದುಕುಸಿದು ಹಿಗ್ಗಿದವು ಮರ । ಮೆಳೆಗಳ ಸುದ್ದಿಯಿನ್ನೇನು ॥೬೧॥

ಕೆರೆಬಾವಿ ಹಳ್ಳಕೊಳ್ಳಗಳು ಬೆಂಚೆಗಳು ಹೆ । ದ್ದೊರೆ ಹೊಳೆ ತಗ್ಗು ತಿಟ್ಟೆಲ್ಲ ॥
ಮರೆಸಿಯೇಕಾರ್ಣವವಾಯ್ತು ದೈವಗಳುಬ್ಬಿ । ಕರೆವುತ್ತಿದ್ದವು ಮತ್ತು ಮಳೆಯ ॥೬೨॥[೬]

ಎಂತಹ ರಮ್ಯಾದ್ಭುತ ಕಥನ ಕಾವ್ಯವಿದು! ಕಾವ್ಯದೃಷ್ಟಿಯಲ್ಲಿ... ಸೃಷ್ಟಿಯಲ್ಲಿ! ರತ್ನಾಕರನಿಗೆ ರತ್ನಾಕರನೇ ಸಾಟಿ. ಸರಸ್ವತಿಯ ಮಾನಸ ಪುತ್ರನಾತ. ದೈವಗಳು ಭಯಂಕರ ಆಲಿಕಲ್ಲು ವೃಷ್ಟಿಗರೆದುದು ಕಾವ್ಯದಲ್ಲಲ್ಲ; ಸಹೃದಯನ ಎದೆಯ ಮೇಲೆ ಎಂಬಂತಹ ಭಾವವುದಿಸುತ್ತದೆ. ಕಾವ್ಯದಲ್ಲಿ ಬಂದಿರುವ ದೈವಗಳ ಪರಿಕಲ್ಪನೆ ಕವಿಯ ಕಲ್ಪನೆಯಲ್ಲ; ರತ್ನಾಕರವರ್ಣಿಗೆ ತುಳುನಾಡಿನ ದೈವಗಳ, ಅವುಗಳ ಕಟಾಕ್ಷದ ಸಂಪೂರ್ಣ ಅರಿವು ಸಾಕಷ್ಟಿದ್ದಿರಬೇಕೆನ್ನಿಸುತ್ತದೆ. ಅವನು ಬಾಳಿ ಬದುಕಿದ ಪರಿಸರದಲ್ಲಿ ಈ ರೀತಿಯ ಆರಾಧನೆ ಇತ್ತೆನ್ನುವುದಕ್ಕೆ ಹಲವಾರು ಸಾಕ್ಷಿಗಳು ದೊರೆಯುತ್ತದೆ. "ಕ್ರಿ.ಶ. ೧೪ನೆಯ ಶತಮಾನದ ಅನಂತರ ಅಂದರೆ, ವಿಜಯನಗರ ಸಾಮ್ರಾಟರ ಆಳ್ವಿಕೆಗೆ ತುಳುನಾಡು ಒಳಪಟ್ಟ ಮೇಲೆ ಭೂತಾರಾಧನೆಯು

ಸಾಂಸ್ಕೃತಿಕ ರೂಪವನ್ನು ಪಡೆದುಕೊಂಡಿರುವುದನ್ನು ಕಾಣುತ್ತೇವೆ. ಭೂತಾರಾಧನೆಯನ್ನು ಉಲ್ಲೇಖಿಸುವ ಉಪಲಬ್ಧ ಶಾಸನಗಳು ಈ ಕೆಳಗಿನಂತಿವೆ;

೧. ಕ್ರಿ.ಶ. ೧೨೭೯ರ ಕಾಂತೇಶ್ವರ ಶಾಸನ[೫] 'ದೈವಕ್ಕೆ ತಪ್ಪಿದವರು...' ಎಂಬ ಉಲ್ಲೇಖ.

೨. ಕ್ರಿ.ಶ. ೧೪೩೨ರ ಸುಳ್ಯ ಎಡಮಂಗಲ ಶಾಸನ[೬]'...ಸಿರಾಡಿದೈವಕೆ...' ಎಂಬ ಉಲ್ಲೇಖ

೩. ಕ್ರಿ.ಶ. ೧೪೯೯ರ ಕಾಪು ಶಾಸನ[೭] '...ನಂದಳಿಕೆಯ ದೈವಕೆ ತಪ್ಪಿದವ್ರು...' ಎಂಬ ಉಲ್ಲೇಖ

೪. ಕ್ರಿ.ಶ. ೧೫೪೩ರ ಉದ್ಯಾವರ ಶಾಸನ[೮] '...ನಂದಳಿಕೆಯ ದೈವ...' ಎಂಬ ಉಲ್ಲೇಖ.

೫. ಕ್ರಿ.ಶ. ೧೫೪೬ರ ಬಸರೂರು ಶಾಸನ[೯] '...ಬೊಬ್ಬರ್ಯ ದೈವ...' ಎಂಬ ಉಲ್ಲೇಖ.

೬. ಕ್ರಿ.ಶ. ೧೬೧೪ರ ಮೂಡುಬಿದಿರೆ ತಾಮ್ರ ಶಾಸನ[೧೦] '...ಧೂಮದತ್ತಿ...' ಎಂಬ ಉಲ್ಲೇಖ.

ಭೂತಾರಾಧನೆಯನ್ನು ಕುರಿತು ಇದಕ್ಕಿಂತ ಪ್ರಾಚೀನವಾದ ದಾಖಲೆಗಳು ನಮಗೆ ಇದುವರೆಗೆ ದೊರೆತಿಲ್ಲ. ಈ ಆರೂ ಶಾಸನಗಳು ಜೈನ ತುಂಡರಸರ ಕಾಲದಲ್ಲಿ ಹೊರಡಿಸಿದ ಅಜ್ಞೆಗಳಾಗಿವೆ. ಅದರಲ್ಲೂ ಕ್ರಿ.ಶ. ೧೪೯೯ರ ಕಾಪು ಶಾಸನದಲ್ಲಿ ಜೈನ ಹೆಗ್ಗಡೆಗಳಾದ ಕುಂದ ಹೆಗ್ಗಡೆ, ಮದ್ದ ಹೆಗ್ಗಡೆಯರು ತಮ್ಮೊಳಗೆ ಒಪ್ಪಂದವೊಂದನ್ನು ಮಾಡಿಕೊಂಡು, ಈ ಒಪ್ಪಂದವನ್ನು ಮುರಿದರೆ ನಂದಳಿಕೆಯ ದೈವಕೆ ತಪ್ಪಿದವರೆಂದೂ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಅಂದರೆ ಜೈನರು ಭೂತಾರಾಧನೆಯನ್ನು ಬಹಿರಂಗವಾಗಿ ಒಪ್ಪಿಕೊಂಡು ಅದನ್ನು ಸಾಮೂಹಿಕ ನ್ಯಾಯಕ್ಕಾಗಿ ಬಳಸಿಕೊಂಡಿರುವ ಅಂಶವನ್ನು ಇಲ್ಲಿ ಕಾಣುತ್ತೇವೆ...."[೧೧]

"ಭೂತಗಳ ಹುಟ್ಟು, ಆಗಮನ, ಪ್ರಸರಣಗಳನ್ನು ರೋಚಕವಾಗಿ ಅಭಿವ್ಯಕ್ತಪಡಿಸುವ ತುಳು ಪಾಡ್ದನದ ಕಥೆಗಳನ್ನು ವಿಶ್ಲೇಷಿಸಿದರೆ ಇವು ಒಂದಲ್ಲೊಂದು ರೀತಿಯಲ್ಲಿ ಸ್ಥಳೀಯ ಅರಸರೊಡನೆಯೂ ಬೀಡು, ಗುತ್ತು, ಮಾಗಣೆಗಳ ಮುಖ್ಯಸ್ಥರೊಡನೆಯೂ ಸಂಬಂಧ ಪಡೆದುಕೊಂಡಿರುವುದನ್ನು ಕಾಣುತ್ತೇವೆ. ಈ ಪಾಡ್ದನಗಳ ರಚನೆಯು ಆಯಾ ಅರಸರ ಕಾಲದಲ್ಲಿ ನಡೆದಿರಬೇಕೆಂದು ಅದರಲ್ಲಿ ಬರುವ ಘಟನೆಗಳ ಆಧಾರದ ಮೇಲೆ ಸಂಶೋಧಕರು ಗುರುತಿಸಿದ್ದಾರೆ"[೧೨] ತಮ್ಮ ಅರಮನೆ, ಬೀಡಿನ ಪ್ರತಿಷ್ಠೆ, ಗೌರವಗಳ ಸಂಕೇತವಾಗಿ ಅವರು ಭೂತಾರಾಧನೆಯನ್ನು ಬಳಸಿಕೊಂಡಿರುವುದನ್ನು ಇಲ್ಲಿ ಕಾಣುತ್ತೇವೆ. ಇದರ ಜೊತೆಗೆ, ಸೀಮೆಯ ಆಡಳಿತ ನೋಡಿಕೊಳ್ಳುವಲ್ಲಿ ಅರಸನಿಗೆ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವ ಸೀಮೆಭೂತವೂ, ಕೆಳಗಿನ ಘಟಕಗಳಾದ ಮಾಗಣೆ, ಗ್ರಾಮ, ಗುತ್ತು, ಕುಟುಂಬ ಮಟ್ಟದಲ್ಲಿ ಆಡಳಿತವನ್ನು ನೋಡಿಕೊಳ್ಳುವ ಮುಖ್ಯಸ್ಥನಿಗೆ ಸಮಾನಾಂತರವಾಗಿ ಮಾಗಣೆಭೂತ, ಗ್ರಾಮಭೂತ, ಗುತ್ತಿನ ಭೂತ, ಕುಟುಂಬದ ಭೂತಗಳೂ ಕಂಡುಬರುತ್ತವೆ."[೧೩] ಯಾವುದೇ ಘಟಕದ ಮುಖ್ಯಸ್ಥರು ಮರಣ ಹೊಂದಿ ಅವನ ಉತ್ತರಾಧಿಕಾರಿಯು ಅಧಿಕಾರಕ್ಕೆ ಬರುವಾಗ, ಅವನ ಪಟ್ಟಾಭಿಷೇಕದ ಭಾಗವಾಗಿ ಅವನು ಭೂತದ ಪ್ರತಿನಿಧಿಯಾಗಿಯೂ ವಿಧ್ಯುಕ್ತವಾಗಿ ನಿಯುಕ್ತಗೊಳ್ಳುತ್ತಾನೆ. ಅಂದರೆ ವಂಶಪಾರಂಪರ್ಯವಾಗಿ ಬಂದ ರಾಜಕೀಯ ಅಧಿಕಾರ, ಆಸ್ತಿಯ ಒಡೆತನದ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ಅರಸ ಮತ್ತು ಆಯಾ ಭೂತಗಳು ಸಮಾನವಾಗಿ ಕಾರ್ಯವನ್ನು ನಿರ್ವಹಿಸುತ್ತ ಬಂದಿರುವುದನ್ನು ಕಾಣುತ್ತೇವೆ.

ಭೂತಾರಾಧನೆಯು ದ್ರಾವಿಡ ಮತ್ತು ದ್ರಾವಿಡ ಪೂರ್ವಕಾಲದಲ್ಲಿ ಪ್ರಚಲಿತವಿದ್ದ ಪ್ರಾಚೀನ ಆರಾಧನಾ ಪದ್ಧತಿಯಾಗಿದೆ. ಕ್ರಿ.ಪೂ. ೨–೩ನೆಯ ಶತಮಾನದ ಸುಮಾರಿಗೆ ಭದ್ರಬಾಹು ಭಟ್ಟಾರಕರ ಮೂಲಕ ಶ್ರವಣಬೆಳಗೊಳಕ್ಕೆ ಆಗಮಿಸಿ, ಅಲ್ಲಿಂದ ತುಳುನಾಡಿಗೆ ಜೈನಧರ್ಮವು ಕಾಲಿರಿಸಿದಾಗ ಜೈನಾಚಾರ್ಯರ ಪ್ರಚಾರ, ಸಂಘಟನೆಯಿಂದ ಅನೇಕ ಜನರು ಜೈನಧರ್ಮವನ್ನು ಸ್ವೀಕರಿಸಿದ್ದರು. ಇಂಥವರು ಜೈನಾಚರಣೆಯನ್ನು ಪಾಲಿಸುತ್ತ ಬಂದಿದ್ದರೂ ಪ್ರಾಯಶಃ ಅವರಲ್ಲಿ ಮೂಲಭೂತವಾಗಿ ರಕ್ತಗತವಾಗಿ ಬಂದ ಭೂತಾರಾಧನೆ, ನಾಗಾರಾಧನೆಯ ನಂಬಿಕೆಗಳು ಸ್ವಲ್ಪಮಟ್ಟಿಗಾದರೂ ಜೀವಂತವಾಗಿದ್ದಿರಬಹುದು. ಮುಂದೆ ಸಂದರ್ಭವೊದಗಿ ಬಂದಾಗ ಇವೆರೆಡನ್ನೂ ಜೈನಧರ್ಮವು ಉದಾರವಾಗಿ ಸ್ವೀಕರಿಸಿತು."[೧೪]

ತುಳುನಾಡಿನುದ್ದಕ್ಕೂ ನಾವು ಭೂತರಾಧನೆಯನ್ನು ಕಾಣುತ್ತೇವೆ. ಈ ಆರಾಧನೆಯು ಯಾವುದೇ ನಿರ್ದಿಷ್ಟ ಮನೆತನಕ್ಕೆ ಅಥವಾ ಜಾತಿಗೆ ಸೇರಿದುದಲ್ಲ. ಭೂತಾರಾಧನೆಯು ಒಂದು ಸಾರ್ವತ್ರಿಕ ಆರಾಧನೆಯಾಗಿದೆ. ತುಳುನಾಡಿನಲ್ಲಿರುವ ಭೂತಗಳು ಅತಿಮಾನುಷ ಶಕ್ತಿಗಳಾಗಿವೆ. ವರ್ಷಕ್ಕೊಮ್ಮೆ ನಡೆಸುವ ಭೂತದ ಕೋಲ ನೇಮಗಳು ತುಳುನಾಡಿನ ಜನರನ್ನು ಸಾಂಸ್ಕೃತಿಕವಾಗಿ ಒಟ್ಟು ಮಾಡುವ ಪ್ರಾದೇಶಿಕ ಆಚರಣೆಗಳಾಗಿವೆ. ದೈವದ ನೇಮ ಕೋಲದ ಸಂದರ್ಭಗಳಲ್ಲಿ ಜನರು ತಮ್ಮ ಕಷ್ಟಗಳನ್ನು ದೈವದ ಹತ್ತಿರ ನಿವೇದಿಸಿ ಸೂಕ್ತ ಪರಿಹಾರಗಳನ್ನು ಪಡೆಯುತ್ತಾರೆ. ದೈವಗಳು "...ಕಾಲಕಾಲಕ್ಕೆ ಮಳೆಯನ್ನು ಸುರಿಸಿ ಜನರ ದುಡಿಮೆಗೆ ಪ್ರತಿಫಲವನ್ನು ನೀಡುತ್ತವೆ. ಮೇವನ್ನು ಒದಗಿಸಿದ ಪ್ರಾಣಿಸಂಪತ್ತನ್ನು ಹೆಚ್ಚಿಸುತ್ತದೆ. ಜನರ ಆರೋಗ್ಯವನ್ನು ಕಾಪಾಡುತ್ತವೆ. ತನ್ನ ಭಕ್ತರನ್ನು ಹೆತ್ತವರಂತೆ ಸಲಹುತ್ತವೆ. ನ್ಯಾಯವನ್ನು ಎತ್ತಿ ಹಿಡಿದು ಸತ್ಯವನ್ನು ಬೆಳಗುತ್ತವೆ"[೧೫] ಎಂಬ ನಂಬಿಕೆಗಳು ಜನತೆಯಲ್ಲಿವೆ.

ರತ್ನಾಕರವರ್ಣಿಯ 'ಭರತೇಶ ವೈಭವ'ದಲ್ಲಿ ಬರುವ ಕಾಲಮುಖ, ಮೇಘಮುಖ ದೈವಗಳ ಪ್ರಸಂಗವನ್ನು ಈ ಹಿನ್ನೆಲೆಯಲ್ಲಿ ನೋಡಿದರೆ ಹೆಚ್ಚು ಅರ್ಥಪೂರ್ಣವಾದೀತು. ಏಕೆಂದರೆ ಚಿಲಾತ ಅವರ್ತ ರಾಜರು ತಮಗೆ ಸಂಕಷ್ಟ ಬಂದಾಗ ದೈವಗಳ ಮೊರೆ ಹೋಗುತ್ತಾರೆ. ದೈವಗಳು ಅಭಯವನ್ನಿತ್ತು ಅವರಿಗೆ ಸಹಾಯವನ್ನು ಮಾಡುತ್ತವೆ. ರತ್ನಾಕರವರ್ಣಿಯ ಮನೋಭಿತ್ತಿಯಲ್ಲಿ ಮೂಡಿರುವ ಈ ದೈವಗಳ ಚಿತ್ರಣವನ್ನು ಆತನ ಕಾಲದ ಅರಸರ ಆಡಳಿತಾವಧಿಯಲ್ಲಿ ನಡೆದ ಘಟನೆಗಳ ಮೂಲಕ ನೋಡೋಣ;

ಅಂದಿನ ಜೈನ ಅರಸರಾದ ಚೌಟ, ಅಜಿಲ, ಭೈರರಸರು, ಮಾಗಣೆ, ಬೀಡುಗಳ ಮುಖ್ಯಸ್ಥರು ಭೂತಗಳನ್ನು ಹೇಗೆ ಒಪ್ಪಿಕೊಂಡರೆನ್ನುವುದಕ್ಕೆ ಭೂತಗಳ ಪಾಡ್ದನಗಳಲ್ಲಿ ಬರುವ ಕೆಲವು ಘಟನೆಗಳು ಸ್ವಾರಸ್ಯವಾಗಿ ನಿರೂಪಿಸುತ್ತವೆ. ಜುಮಾದಿ ಭೂತದ ಪಾಡ್ದನದಲ್ಲಿ ಚೌಟರಸನ ಅರಮನೆಯ ಮುಂದೆ ಮಾವಿನ ಮರದ ಗೆಲ್ಲೊಂದು ಮುರಿದು ಬೀಳುತ್ತದೆ. ಕೋಣಗಳು ಕಾಯಿಲೆ ಬೀಳುತ್ತವೆ. ಜ್ಯೋತಿಷಿಗಳಲ್ಲಿ ವಿಚಾರಿಸಿದಾಗ ಅದು ಜುಮಾದಿ ಭೂತದ ಉಪದ್ರವವೆಂದು ಗೊತ್ತಾಗುತ್ತದೆ. ಅದಕ್ಕೆ ಚೌಟರಸನು ನಂಬಿ ಜುಮಾದಿ ಭೂತಕ್ಕೆ ಸ್ಥಾನವನ್ನು ಕಟ್ಟಿಸುತ್ತಾನೆ. ಕೋಣಗಳ ಕಾಯಿಲೆ ವಾಸಿಯಾಗುತ್ತದೆ."[೧೬] "ಧೂಮಾವತಿ ಭೂತದ ಪಾಡ್ದನದಲ್ಲಿ, ಧೂಮಾವತಿ ಭೂತವು ವೇಣೂರಿಗೆ ಇಳಿದು ಬಂದು ಅಲ್ಲಿ

ಗೊಮ್ಮಟಮೂರ್ತಿಯನ್ನು ನೋಡುತ್ತದೆ. ಜೈನರಿಗೆ ತನ್ನ ಮಹಿಮೆಯನ್ನು ತೋರಿಸಬೇಕೆಂದು ನಿರ್ಧರಿಸಿ, ಗೊಮ್ಮಟನಿಗೆ ಅಭಿಷೇಕ ಮಾಡುವ ಪೂಜೆಯ ಇಂದ್ರನಿಗೆ ಆ ಭೂತವು ಹೊಡೆದು ಆತನಿಗೆ ಮೂರ್ಛೆ ಬರುವಂತೆ ಮಾಡುತ್ತದೆ. ನೆರೆದ ಜನರೆಲ್ಲ ಗಾಬರಿಯಾದಾಗ ಅವರ ಮುಖ್ಯಸ್ಥನು 'ಪ್ರಶ್ನೆ' ನೋಡಲು ಹೇಳುತ್ತಾನೆ. ಆಗು ಡೋಲು ಹೊಡೆಯುವ ಮೊಯಿಲಿಗೆ ಆವೇಶ ಬಂದು, ನಾನು ಜುಮಾದಿಯೆಂಬ ಹೆಸರಿನ ಭೂತ. ನಿಮ್ಮ ರಾಜ್ಯವನ್ನು ನೋಡಬೇಕು ಎಂದು ಬಂದು ಗೊಮ್ಮಟನನ್ನು ನೋಡಿದೆ. ನಿಮ್ಮ ಕಡೆಯ ಮನುಷ್ಯನನ್ನು ಬೀಳಿಸಿದೆ. ನಿಮ್ಮ ದೇವರ ಉತ್ತರ ಭಾಗದಲ್ಲಿ ನನಗೆ ಒಂದು ನೆಲೆಯಾಗಬೇಕು ಎನ್ನುತ್ತದೆ. ಆಗ ಅಲ್ಲಿದ್ದ ಜೈನರು ನಾವು ಇಷ್ಟರವರೆಗೆ ನಮ್ಮ ಬಸದಿಯ ಹತ್ತಿರ ಬೇರೆ ಭೂತಗಳನ್ನು ನಂಬಿದವರಲ್ಲಿ ಇನ್ನು ಹೊಸದಾಗಿ ಹೇಗೆ ನಂಬುವುದು? ನಮ್ಮ ಗುರುಗಳು ಬಂದರೆ ಬಹಳ ಸಿಟ್ಟುಗೊಂಡರು. ಇದಕ್ಕೆ ಏನು ಮಾಡುವುದು? ಎಂದು ಪ್ರಶ್ನಿಸುತ್ತಾರೆ. ಆಗ ಭೂತವು ಸಿಟ್ಟಾಗಿ ಇನ್ನೊಬ್ಬ ಜೈನನನ್ನು ಹೊಡೆದು ಕೆಡಹುತ್ತದೆ. ಆತನಿಗೆ ಕೈಕಾಲು ಆಡಿಸಲಾಗಲಿಲ್ಲ. ಬಾಯಲ್ಲಿ ಮಾತನಾಡಲು ಆಗಲಿಲ್ಲ. ಅವನು ಹೊರಳಾಡಿ ಎದೆಗೆ ಹೊಡೆಯಲು ತೊಡಗಿದನು. ಆಗ ಜೈನರು ನಾವು ಈ ಭೂತಕ್ಕೆ ಎದುರುತ್ತರ ಕೊಟ್ಟದ್ದು ಸರಿಯಲ್ಲವೆಂದು ನಿರ್ಧರಿಸಿ ಭೂತಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಆಗ ಸಂಕಟಕ್ಕೆ ಗುರಿಯಾದ ಜೈನರು ಮುಕ್ತರಾದರು. ಅನಂತರ ಭೂತಕ್ಕೆ ಸ್ಥಾನವನ್ನು ಕಟ್ಟಿಸಿ, ಕೋಲ ಬಲಿಯನ್ನು ಕೊಟ್ಟು ಸಂತೋಷಪಡಿಸುತ್ತಾರೆ"[೧೭] "ಕಲ್ಕುಡ – ಕಲ್ಲುರ್ಟಿ ಪಾಡ್ದನದಲ್ಲಿ, ಕಾರ್ಕಳದ ಅರಸನು ತಮ್ಮನ್ನು ಶಿಕ್ಷೆಗೆ ಗುರಿಪಡಿಸಿದ್ದರಿಂದ ಅಣ್ಣತಂಗಿಯರು ಭೂತಗಳಾಗಿ ಹುಟ್ಟುತ್ತಾರೆ. ಅರಸನ ಅರಮನೆಯನ್ನು ಹೊಕ್ಕು, ಅರಸರ ಹಾಸಿಗೆಗೆ ಬೆಂಕಿ ಹಚ್ಚುತ್ತಾರೆ. ನಗರದ ಅಂಗಡಿ, ಮನೆಗಳನ್ನು ಸುಡುತ್ತಾರೆ. ಮನೆ – ಮನೆಗೆ ಕಲ್ಲನ್ನು ತೂರುತ್ತಾರೆ. ಕೊನೆಗೆ ಈ ಭೂತಗಳ ಉಪದ್ರವವನ್ನು ತಡೆಯಲಾರದೆ ಅರಸನು ಅವುಗಳಿಗೆ ಸ್ಥಾನವನ್ನು ಕಟ್ಟಿಸಿ, ಆಹಾರ ಕೊಟ್ಟು ಪೂಜೆ ಮಾಡುತ್ತಾನೆ."[೧೮] "ಪಂಜುರ್ಲಿ ಪಾಡ್ದನದಲ್ಲಿ, ಕನ್ನಡದ ಅರಸನೊಬ್ಬನು ತನ್ನ ರಾಜ್ಯದ ಮೇಲೆ ದಾಳಿ ಮಾಡಿದಾಗ, ಬೈರರಸನು ತನ್ನ ನಂಬಿಗಸ್ಥ ಭಟನಾದ ಕುಪ್ಪೆಕೋಟಿ ಬೈದ್ಯನ ಜೊತೆಗೆ ಧರ್ಮಸ್ಥಳಕ್ಕೆ (ಕುಡುಪನಾಡು) ಹೋಗಿ ಪಂಜುರ್ಲಿ ಭೂತವನ್ನು ಆರಾಧಿಸುತ್ತಾನೆ. ಇದರಿಂದ ತಾನು ಕಳೆದುಕೊಂಡ ರಾಜ್ಯವನ್ನು ಮತ್ತೆ ಪಡೆದನೆಂದು ಅದರಲ್ಲಿ ಹೇಳಲಾಗಿದೆ"[೧೯] "ಮರ್ಧಾಳ ಬೀಡಿನ ಕೋಣಗಳು ಪಂಜುರ್ಲಿಯ ಉಪದ್ರವದಿಂದ ಕಾಯಿಲೆ ಬೀಳುತ್ತದೆ. ಬೀಡಿನ ಬಲ್ಲಾಳನು ಬಲ್ಮೆಯಲ್ಲಿ ವಿಚಾರಿಸಿದಾಗ ಸತ್ಯ ಸಂಗತಿ ತಿಳಿಯುತ್ತದೆ. ಪಂಜುರ್ಲಿಗೆ ಗುಡಿ ಕಟ್ಟಿಸಿ ಉತ್ಸವ ನಡೆಸುತ್ತಾನೆ. ಇದರಿಂದ ಅವನ ಕೋಣಗಳು ಗುಣ ಹೊಂದುತ್ತವೆ"[೨೦] "ಇದೇ ರೀತಿ ಮೂಜಿಲ್ನಾಯ ಭೂತದ ಪಾಡ್ದನದಲ್ಲಿ, ಅರುವ ಪಾಂಡ್ಯಪ್ಪ ಒಡೆಯರ ಪಟ್ಟದ ಆನೆಯು ಕಾಣೆಯಾದಾಗ ಅದು ಭೂತದ ಉಪದ್ರವದಿಂದ ಎಂದು ತಿಳಿದು ಅದಕ್ಕೆ ಸ್ಥಾನವನ್ನು ಕಟ್ಟಿಸಿ ಉತ್ಸವ ನಡೆಸುವುದು"[೨೧] "ಮಾರವಾಂಡಿ ಭೂತವು ವೇಣೂರಿನಲ್ಲಿ ಕಂಬಳದ ಕೋಣಗಳನ್ನು, ಮನುಷ್ಯರನ್ನು ಮಾಯಮಾಡಿ ಕಲ್ಲು ಮಾಡುವುದು' ಅರಮನೆಯಲ್ಲಿ ಕಳುವಾದ ಬೆಳ್ಳಿಯ ಬಟ್ಟಲು ಬಂಗಾರದ ಜಡೆಗಳನ್ನು ಪತ್ತೆಮಾಡಿ ಕೊಡುವುದು"[೨೨] "ಈ ವಿವರಗಳಿಂದ ಜೈನರು ತುಳುನಾಡಿನ ದೈವಗಳ ಮೇಲೆ ನಂಬಿಕೆಗಳನ್ನು ಬೆಳೆಸಿಕೊಳ್ಳಲು ಆರಂಭಿಸಿದರು.

ತುಳುನಾಡಿನ ಪ್ರಮುಖ ಜೈನಮಠ, ಅರಮನೆ ಮತ್ತು ಕೆಲವು ಮಾಗಣೆ, ಬೀಡು, ಗುತ್ತುಗಳಲ್ಲಿ ಸ್ಥಾನ ಪಡೆದಿರುವ ಕೆಲವು ದೈವಗಳ ವಿವರಗಳು ಹೀಗಿವೆ ;

೧. ಜೈನಮಠಗಳು

೧. ಮೂಡುಬಿದಿರೆ – ಜೈನಮಠ : ಕಲ್ಲುರ್ಟಿ, ಪಂಜುರ್ಲಿ

೨. ಕಾರ್ಕಳ – ಜೈನಮಠ : ಕಲ್ಕುಡ – ಕಲ್ಲುರ್ಟಿ

೩. ವರಂಗ – ಜೈನಮಠ : ಕೊಡಮಣಿತ್ತಾಯ, ಪಂಜುರ್ಲಿ, ಬೈದರ್ಕಳು

೨. ಅರಮನೆಗಳು

೧. ಮೂಡುಬಿದಿರೆಯ ಚೌಟರು : ಜುಮಾದಿ, ಪಂಜುರ್ಲಿ

೨. ಬಂಗವಾಡಿಯ ಬಂಗರು : ಮುರ್ತುಕಾಯೆ, ಪಂಜುರ್ಲಿ

೩. ಬೈಲಂಗಡಿಯ ಮೂಲರು : ಪಂಜುರ್ಲಿ, ರಕ್ತೇಶ್ವರಿ

೪. ಮೂಲ್ಕಿಯ ಸಾವಂತರು : ಜುಮಾದಿ

೫. ಸುರಾಲಿನ ತೋಳಹರು : ಬೊಬ್ಬರ್ಯ

೬. ಅಳದಂಗಡಿಯ ಅಜಿಲರು : ಜುಮಾದಿ

೭. ಪಣಪಿಲು ಕೊನ್ನರು : ಪಂಜುರ್ಲಿ, ಕೊಡಮಣಿತ್ತಾಯ

೮. ಹೊಸಂಗಡಿ ಬಿನ್ನಾಣಿ : ಪಂಜುರ್ಲಿ, ಕೊಡಮಣಿತ್ತಾಯ

೩. ಕೆಲವು ಮಾಗಣೆ, ಬೀಡು, ಗುತ್ತು

೧. ಮಂದಬೆಟ್ಟು ಮಾಗಣೆ [ಕಾರ್ಕಳ] : ಕೊಡಮಣಿತ್ತಾಯ, ಧರ್ಮರಸು, ರಾಜಂತೈವ, ಪಂಜುರ್ಲಿ....ಮೊದಲಾದುವು

೨. ಬಂಗ್ವಾಡಿ ಮಾಗಣೆ [ಬೆಳ್ತಂಗಡಿ] : ಪಿಲಿಚಾಮುಂಡಿ, ಕಲ್ಲುರ್ಟಿ....ಮೊದಲಾದುವು

೩. ಬೆಳಾಲು ಮಾಗಣೆ [ಬೆಳ್ತಂಗಡಿ] : ಜುಮಾದಿ, ಕೊಡಮಣಿತ್ತಾಯ

೪. ಉಳಿಯ ಬೀಡು [ಬೆಳ್ತಂಗಡಿ] : ಉಳ್ಳಾಲ್ತಿ, ಪಿಲಿಚಾಮುಂಡಿ

೫. ಕಳಿಯ ಬೀಡು [ಬೆಳ್ತಂಗಡಿ] : ಪಂಜುಲಿ, ಕೊಡಮಣಿತ್ತಾಯ

೬. ಧರ್ಮಸ್ಥಳ ಬೀಡು [ಬೆಳ್ತಂಗಡಿ] : ಪಂಜುರ್ಲಿ, ಕಾಳರಾಹು, ಕಾಳಕರ್ಾಯಿ, ಕನ್ಯಾಕುಮಾರಿ

೭. ಪಡುಬಿದಿರೆ ಬೀಡು [ಉಡುಪಿ] : ಧೂಮಾವತಿ, ಧರ್ಮಜಾರಂದಾಯ, ಖಡ್ಗೇಶ್ವರಿ

೮. ಏರ್ಮಾಳು ಬೀಡು [ಉಡುಪಿ] : ಜುಮಾದಿ, ಪಂಜುರ್ಲಿ, ಧೂಮಾವತಿ, ಐವೆರಭೂತ – ಮೊದಲಾದ ೧೮ ಭೂತಗಳು.

೯. ಅರ್ಕುಳ ಬೀಡು [ಮಂಗಳೂರು] : ಮಕರಂದಾಯ, ಉಳ್ಳಾಲ್ತಿ..... ಮೊದಲಾದುವು.

೧೦. ಇರ್ವತ್ತೂರು ಬೀಡು [ಕಾರ್ಕಳ] : ಕೊಡಮಣಿತ್ತಾಯ, ರಕ್ತೇಶ್ವರಿ, ಪಂಜುರ್ಲಿ, ಕಲ್ಕುಡ, ಸಿರಿ, ಬೈದರ್ಕಳು... ಮೊದಲಾದುವು.

೧೧. ನಡುಗುತ್ತು [ಬೆಳ್ತಂಗಡಿ] : ಕೊಡಮಣಿತ್ತಾಯ, ಮೂಜುನ್ನಾಯ, ದೈವಂಕಲು, ಧೂಮಾವತಿ, ಕಲ್ಕುಡ – ಕಲ್ಲುರ್ಟಿ ಮೊದಲಾದುವು."–೨೩

ಹೀಗೆ ತುಳುನಾಡಿನುದ್ದಕ್ಕೂ ಜೈನರು ಭೂತಾರಾಧನೆ, ದೈವಾರಾಧನೆಗಳ ಆಚರಣೆಗಳನ್ನು ಹೊಂದಿದ್ದಾರೆ. ಈ ಹಿನ್ನಲೆಯನ್ನು ನೋಡಿದರೆ ರತ್ನಾಕರವರ್ಣಿಯ ಕಾವ್ಯದಲ್ಲಿರುವ ದೈವಗಳ ಪರಿಕಲ್ಪನೆ ನಿಜವೆನ್ನಿಸುತ್ತದೆ. ಭೂತಗಳ ಆರಾಧನೆ, ಅವುಗಳ ಕಟಾಕ್ಷದ ಅರಿವು ರತ್ನಾಕರವರ್ಣಿಗೆ ಇದ್ದಿರಬೇಕನ್ನಿಸುತ್ತದೆ. ಕಾವ್ಯದಲ್ಲಿ ದೈವಗಳ ಕಾರಣಿಕ ಪ್ರಸಂಗ ಅಷ್ಟು ರೋಚಕವಾಗಿ ಮೂಡಿಬರಲು ಕವಿ ತುಳುನಾಡಿನ ದೈವಗಳಿಂದ ಅಷ್ಟು ಪ್ರಭಾವಿತನಾಗಿರಬಹುದು ಎಂಬ ಊಹೆಗಳನ್ನು ಮಾಡಲು ಸಾಧ್ಯತೆಗಳಿವೆ.

ಕೊನೆ ಟಿಪ್ಪಣಿ

೧. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೮೬, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೨. **ಡಾ। ಚಿದಾನಂದ ಮೂರ್ತಿ** : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೦೨–೧೦೭, ಪೂರ್ವೋಕ್ತ.

೩. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೮೭, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೪. **ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.)**: ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೩೨೦–೩೨೧, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮು ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೫. S.I.I. VOL. VII. No. 234

೬. ARSIE, 1930 - 31, No. 349-350

೭. S. I. I. VOL. VII No. 273

೮. S. I. I. VOL. VII No. 295

೯. **ಡಾ॥ ಚಿನ್ನಪ್ಪ ಗೌಡ ಕೆ.** : ಭೂತಾರಾಧನೆ ಜಾನಪದೀಯ ಅಧ್ಯಯನ, ಪು. ೧೯, ೧೯೯೦, ಮದಿಪು ಪ್ರಕಾಶನ, ಮಂಗಳಗಂಗೋತ್ರಿ, ಮಂಗಳೂರು

೧೦. **ಜೈನಮಠ ತಾ. ಶಾ. ೪೦**

೧೧. **ಡಾ॥ ಎಸ್.ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೮೮, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೧೨. **ಡಾ॥ ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೨೬೬–೨೩೪, ೧೯೮೫, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೧೮

೧೩. **ಡಾ॥ ಚಿನ್ನಪ್ಪ ಗೌಡ ಕೆ.** : ಭೂತಾರಾಧನೆ ಜಾನಪದೀಯ ಅಧ್ಯಯನ, ಪು. ೨೨, ಪೂರ್ವೋಕ್ತ.

೧೪. **ಡಾ॥ ಎಸ್.ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೮೮, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೧೫. **ಡಾ॥ ಚಿನ್ನಪ್ಪ ಗೌಡ ಕೆ.** : ಭೂತಾರಾಧನೆ ಜಾನಪದೀಯ ಅಧ್ಯಯನ, ಪು. ೧೦, ಪೂರ್ವೋಕ್ತ.

೧೬. **ಡಾ॥ ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೧೨೦, ಪೂರ್ವೋಕ್ತ.

೧೭. **ಡಾ॥ ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೧೧೪, ಪೂರ್ವೋಕ್ತ.

೧೮. **ಡಾ॥ ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೭೬–೮೮, ಪೂರ್ವೋಕ್ತ.

೧೯. **ಡಾ। ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೪೮, ಪೂರ್ವೋಕ್ತ.

೨೦. **ಡಾ। ಎಸ್.ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೮೯, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

೨೧. **ಡಾ। ಚಿನ್ನಪ್ಪ ಗೌಡ ಕೆ.** : ಭೂತಾರಾಧನೆ ಜಾನಪದೀಯ ಅಧ್ಯಯನ, ಪು. ೧೮೬, ಪೂರ್ವೋಕ್ತ.

೨೨. **ಡಾ। ವಿವೇಕ ರೈ ಬಿ. ಎ.** : ತುಳು ಜನಪದ ಸಾಹಿತ್ಯ, ಪು. ೧೩೧, ಪೂರ್ವೋಕ್ತ.

೨೩. **ಡಾ। ಎಸ್.ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೯೧–೧೯೨, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ – ೫೭೬೧೦೨

ಅಧ್ಯಾಯ : ಆರು

ಪ್ರಾದೇಶಿಕ ಜೈನ ಸಂಪ್ರದಾಯಗಳು

ಅಧ್ಯಾಯ : ಆರು
ಪ್ರಾದೇಶಿಕ ಜೈನ ಸಂಪ್ರದಾಯಗಳು

ಮಾನವ ಜೀವನವನ್ನು ರೂಪಿಸುವಲ್ಲಿ, ನಾಗರೀಕತೆಯ ಬೆಳವಣಿಗೆಯಲ್ಲಿ, ಸಾಂಸ್ಕೃತಿಕ ಉತ್ಕ್ರಾಂತಿಯಲ್ಲಿ ಸಂಪ್ರದಾಯಾಚರಣೆಗಳಿಗೆ ವಿಶೇಷ ಮಹತ್ವವಿದೆ. ಸಂಪ್ರದಾಯಗಳಿಗೂ ಮನುಷ್ಯನ ಬದುಕಿಗೂ ಅವಿನಾಭಾವ ಸಂಬಂಧವಿದೆ. ಸಂಪ್ರದಾಯಗಳು "ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದಕ್ಕೊಯ್ಯುವ ಶಕ್ತಿಪುಂಜಗಳಾಗಿವೆ. ಅದರ ನಡೆವಳಿ ಹಾಗೂ ವ್ಯವಹಾರಗಳು ಸಂಪ್ರದಾಯಬದ್ಧವಾಗಿಯೇ ಜರಗುತ್ತವೆ. ಜಗತ್ತಿನ ಸಕಲ ರಾಷ್ಟ್ರಗಳ ಕಾನೂನು ರಚನೆಗೆ ಸಂಪ್ರದಾಯಗಳೇ ಆಧಾರ. ಇಂಗ್ಲೆಂಡಿನಂತಹ ಕೆಲವು ರಾಷ್ಟ್ರಗಳಲ್ಲಂತೂ ಸಂಪ್ರದಾಯಗಳೇ ಕಾನೂನಾಗಿ ಪರಿಣಮಿಸುತ್ತದೆ. ಆದ್ದರಿಂದ ನಾಗರಿಕ ಪ್ರಪಂಚದ ಸರ್ವ ವ್ಯವಸ್ಥೆಗಳಿಗೆ ಅದೇ ಮೂಲಮಾತೃಕೆಗಳೆಂದು ಗಣನೆಗೊಂಡಿದೆ"[೧] ಧರ್ಮದಿಂದ ಧರ್ಮಕ್ಕೆ ಭಿನ್ನವಾದ ಸಂಪ್ರದಾಯಗಳು ಸಾರ್ವತ್ರಿಕವಾಗಿರುವಂತಹ ಉದಾಹರಣೆಗಳೂ ಇವೆ. ಇದು ಆಂತರಿಕ ಕೊಳುಕೊಡುಗೆಯಿಂದ ಆಗಿರಬಹುದೆಂದು ನಾವು ಭಾವಿಸಬಹುದಾಗಿದೆ.

ಮಾನವನ ಆಂತರಿಕ ವಿಕಾಸದ ನಿರಂತರ ಚಿತ್ರಣವನ್ನು ಸಾಹಿತ್ಯ ನೀಡುತ್ತದೆ. ವೈದಿಕ ಸಾಹಿತ್ಯವಾಗಲೀ, ಜೈನ ಧರ್ಮ ಪರಂಪರೆಯಾಗಲೀ ಅಥವಾ ಬೌದ್ಧಧರ್ಮ ಪರಂಪರೆಯಾಗಲೀ ಇವೆಲ್ಲ ತಮ್ಮ ಧರ್ಮದ ಧಾರ್ಮಿಕ ಸಂಗತಿಗಳನ್ನೂ ತಮ್ಮ ಸಾಹಿತ್ಯದಲ್ಲಿ ಮೈಗೂಡಿಸಿಕೊಂಡು ಬಂದುದು ಗಮನಿಸತಕ್ಕ ವಿಷಯವಾಗಿದೆ. "ಮಹಾಕವಿ ತನ್ನ ಕಾಲದ ಪರಿಸರವನ್ನು ಒಪ್ಪಿಕೊಂಡು ಬೆರೆಯುವುದು ಮಾತ್ರವಲ್ಲದೆ ಅದನ್ನು ಪರಿವರ್ತಿಸುವ ಸಾಹಸದಲ್ಲಿಯೂ ತೊಡಗುತ್ತವೆ. ಕಲಾತ್ಮಕವಾದ ಸೂಕ್ತ ವಿಧಾನಗಳಿಂದ ತನ್ನ ಕಾಲದ ಸೂಕ್ತ ಸಮಷ್ಟಿಚೇತನಗಳಿಂದ ಅಭಿಜ್ಞಾನಪೂರ್ವಕವಾದ ಜೀವನ ವಿಧಾನವನ್ನು ಸಾಂಕೇತಿಕವಾಗಿ ರೂಪಿಸಲು ಹೆಣಗುತ್ತಾನೆ. ಆ ಸಂಕೇತಗಳ ಹಿಂದೆ ಆ ಕಾಲದ ಬಹುಜನರ ಜೀವನಶ್ರದ್ಧೆಗಳೂ, ಆಶೋತ್ತರಗಳೂ, ಆಚಾರಗಳೂ, ಆಗುಹೋಗುಗಳೂ ಮೂಡಿ ನಿಲ್ಲುತ್ತದೆ. ಅವುಗಳಿಗೆ ಮಹಾಕವಿ ಒಂದರ್ಥದಲ್ಲಿ ಮುಖವಾಣಿಯಾಗುತ್ತಾನೆ"[೨]

ತುಳುನಾಡಿನಲ್ಲಿ ಜೈನರು ದೀರ್ಘ ಅವಧಿಯ ಚರಿತ್ರೆಗಳನ್ನು ಹೊಂದಿದ್ದಾರೆ. ಚೌಟರು, ಅಜಿಲರು, ಬಂಗರು, ಬೈರರಸರು ಮುಂತಾದ ಅರಸು ಮನೆತನಗಳು ತುಳುನಾಡಿನ ಚರಿತ್ರೆಯ ಪುಟಗಳಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದುಕೊಂಡಿವೆ. ಇದರ ಕುರುಹಾಗಿ ತುಳುನಾಡಿನುದ್ದಕ್ಕೂ ಗುತ್ತುಮನೆಗಳು, ಬೀಡುಗಳು, ಬಸದಿಗಳು ಹಾಗೂ ಅರಮನೆಗಳಿವೆ. ರತ್ನಾಕರವರ್ಣಿ ತುಳುನಾಡಿನ ಮೂಡುಬಿದಿರೆಯಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಸೂರ್ಯವಂಶಕ್ಕೆ ಸೇರಿದ ದೇವರಾಜನ ಪುತ್ರ. ಈತನು ಕಾರ್ಕಳದಲ್ಲಿ ಸುಮಾರು ೩೦೦ ವರ್ಷಗಳಿಗಿಂತಲೂ ಹೆಚ್ಚಾಗಿ ಆಳ್ವಿಕೆಯನ್ನು ನಡೆಸಿದ ಬೈರವರಸರ ಆಸ್ಥಾನದಲ್ಲಿ ಶೃಂಗಾರಕವಿಯಾಗಿದ್ದನು. ಈತನ ಜನ್ಮದಾತರೂ, ಆಶ್ರಯದಾತರೂ ವಿಜಯನಗರದ ಸಾಮಂತ ರಾಜರಾಗಿದ್ದರು.

ಪ್ರಕೃತ ಅಧ್ಯಯನವು ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಅಡಕವಾಗಿರುವ ತುಳುನಾಡಿನ ಜೈನ ಸಂಸ್ಕೃತಿಯ ಅನೇಕ ಸಂಪ್ರದಾಯಗಳ, ಹಬ್ಬಗಳ, ಬಗ್ಗೆ ಬೆಳಕನ್ನು ಚೆಲ್ಲುವಂತದ್ದಾಗಿದೆ.

ಅ. ನವರಾತ್ರಿ ಉತ್ಸವ

ಆ. ಜೈನಮತೀಯರ ವಿವಾಹ ವಿಧಿಗಳು

ಇ. ಅಕ್ಷತೆ, ಶೋಭನ ಪ್ರಸ್ತ, ಕಳಸ-ಕನ್ನಡಿ

ಈ. ಜಾತಕರ್ಮ, ನಾಮಕರಣ

ಅ. ನವರಾತ್ರಿ ಉತ್ಸವ

ರತ್ನಾಕರ ಕವಿ ತನ್ನ ಕಾವ್ಯವಾದ 'ಭರತೇಶ ವೈಭವ'ದಲ್ಲಿ ಮಹಾನವಮಿಯ ಹಬ್ಬವನ್ನು ಅಮರವನ್ನಾಗಿಸಿದ್ದಾನೆ. 'ನವರಾತ್ರಿ ಸಂಧಿ' ಎಂಬ ಪ್ರತ್ಯೇಕವಾದ ಸಂಧಿಯೇ ಕಾವ್ಯದಲ್ಲಿದೆ.

ಆದಿತೀರ್ಥಂಕರನ ಮೊದಲ ಮಗನಾದ ಭರತೇಶನು ರಾಜ್ಯವಾಳುತ್ತಿದ್ದಾಗ ಒಂದು ದಿನ ಬುದ್ಧಿಸಾಗರ ಮಂತ್ರಿಯು ರಾಜನೆಡೆಗೆ ಬಂದು 'ಶಸ್ತ್ರಾಗಾರದಲ್ಲಿ ಚಕ್ರರತ್ನವು ಉದಯಿಸಿದೆಯೆಂದೂ, ಇನ್ನು ದಿಗ್ವಿಜಯವನ್ನು ಕೈಗೊಳ್ಳಬೇಕೆಂದು ವಿನಂತಿಸಿ, ನವರಾತ್ರಿಯ ಜಿನಮಹಿಮೆಯನ್ನು ಮಾಡಿ, ದಶಮಿಯ ದಿವಸದಲ್ಲಿ ಹೊರಡಬೇಕೆಂದು' ಭಿನ್ನವಿಸುತ್ತಾನೆ.

ನವರಾತ್ರಿ ಉತ್ಸವದ ಸಂಭ್ರಮೋಲ್ಲಾಸಗಳು ಕಾವ್ಯದಲ್ಲಿ ಹೀಗೆ ವರ್ಣಿತವಾಗಿದೆ;

ಕಲಿಕುಂಡ ವಜ್ರಪಂಜರ ಯಜ್ಞ ಗಣಧರ । ವಲಯ ಮೃತ್ಯುಂಜಯ ಯಜ್ಞ ॥
ಬಲಸಿದ್ಧಿ ಭಯಸಿದ್ಧಿ ಸರ್ವ ರಕ್ಷೆಗಳೆಂಬ । ಹಲವು ಯಜ್ಞಗಳು ನಡೆದುವು ॥೨೨॥

ಕಾರಿರುಳನು ತನ್ನ ರತ್ನ ಕಿರೀಟ ಕ । ಣ್ಣಾರೆ ಹಗಲು ಮಾಡುವಂತೆ ॥
ವಾರಿಣವೈರಿ ಪೀಠವನೇರಿ ಕಡೆಯ ಹ । ಜಾರದೊಳೋಲಗವಾದ ॥೨೯॥

ಇರ್ದರು ರಾಜಾಧಿರಾಜರು ಸಚಿವರು । ನಿರ್ದೋಷಕವಿಗಮಕಿಗಳು ॥
ಬರ್ದಿನ ಕೆಳೆಯರು ವಾರನಾರಿಯರಾಗ । ಸಾರ್ದು ರಾಜೇಂದ್ರನ ಸುತ್ತ ॥೩೦॥

ದಿಟ್ಟ ಸಲ್ವಷ್ಟಕೆ ಮುಂದೆ ಭರಾಭರಿ । ಗೊಟ್ಟಿರ್ದುದುರೆ ಪರಿವಾರಾ ॥
ತೆಟ್ಟೆತೆಟ್ಟೆಯೊಳು ನಿಂದಿರ್ದುದು ಬಹುಪ್ರಜೆ । ಚಕ್ರಧರನ ॥೩೧॥

ಕಾಕಿಣಿರತ್ನವ ದೀಪಮಾಲೆಯ ಕಂಭ । ದಾಕೆಯೊಳೆತ್ತಿ ನಿಲ್ಲಿಸಲು ॥
ಕಾಕಾಯ್ತು ಕತ್ತಲೆ ಸುತ್ತಗಾವುದಕೆ ದೀವಾಕರ ಪ್ರಭೆ ತೋರಿತಾಗ ॥೩೨॥

ನಗರಿ ಪನ್ನೆರಡುಗಾವುದವದು ಸಾಲದೀ । ವಿಗೆ ಪಂಜಿನಿಂದ ಡಾಳಿಸಿತು ॥
ನಗರಿದೊಡೆಯನ ಗೃಹದ ಮುಂದೆ ಗಾವುದ । ಹಗಲಾಯ್ತು ಕಾಕಿಣಿಯಿಂದ ॥೩೩॥

ಬೊಂಬೆಗಳಾಟಗಳಲ್ಲಲ್ಲಿ ಪಾತ್ರನಿ । ತಂಬಿನಿಜನಗಳಲ್ಲಲ್ಲಿ ॥
ಡೊಂಬರ ಗಳೆಯ ಸಂಗತಿಗರು ಕೋಡಿಗ । ರಿಂಬುಗೊಂಡಿರ್ದರಲ್ಲಲ್ಲಿ ॥೩೪॥

ಇಂದ್ರಜಾಲಿಗರು ಗೋವಿಂದಮತಿಗಳು ಮ । ಹೇಂದ್ರ ಜಾಲಿಗರು ವಿಸ್ಮಯರು ॥
ಖೇಂದ್ರನಾಟಕರಿದ್ದರನುವಾಗಿ ಭರತ ರಾ । ಜೇಂದ್ರಗಾಟವ ತೋರ್ಪೆವೆಂದು ॥೩೫॥

ಭಾವಿಸಿ ಭಾಸ್ಕರ ನಡೆದತ್ತ ಮುಗಿದಿರ್ದ । ತಾವರೆ ಮಿಡಿದಲರ್ವಂತೆ ॥
ಆವ ಕಡೆಗೆ ರಾಯ ಮೊಗವಿತ್ತನತ್ತ ನಾ । ನಾವಿದ್ಯೆಗಳ ತೋರುತಿಹರು ॥೩೬॥

ಸೂತ್ರವ ಮಿಡಿದರೆ ಬೊಂಬೆಗಳೆಲ್ಲ ತ । ನ್ಮಾತ್ರದಿ ಕುಣಿವಂತೆ ನೃಪನ ॥
ನೇತ್ರಗಳೊಲೆದತ್ತ ತವತವಗಾಗಳೆ । ಪಾತ್ರದ ಪೆಂಗಳಾಡುವರು ॥೩೭॥

ಪಟ್ಟಣದೊಳು ಕೇರಿಕೇರಿಗಳೊಳು ರಕ್ಷೆ । ಗಟ್ಟಿದ ತೇಜಿಗಳ್ನೆರೆದು ॥
ಬೆಟ್ಟ ಬಿರಿವ ವಾದ್ಯವೆಸೆಯೆ ಹಜಾರಕೆ । ಮುಟ್ಟಲೆಯ್ತುರುತಿರ್ದುವಾಗ ॥೪೭॥

ಮುಂದೆ ಪುಷ್ಪಕದಲ್ಲಿ ಗೋಮುಖಯಕ್ಷನು । ಸಂದಣಿವೆತ್ತ ಪತಾಕೆ ॥
ಹಿಂದೆ ತೇಜಿಗಳು ಸಾಲಾಗಿ ಕಡಲ ತೆರೆ । ಯಂದದಿ ಕುಣಿದು ನಡೆದುವು ॥೪೮॥

ಆಡುವ ನೃತ್ಯವಲ್ಲಲ್ಲಿಗಾರತಿ ಕೂಡೆ । ಕೂಡೆ ಪುಷ್ಪಾಂಜಲಿಯೆಸೆಯೆ ॥
ಪಾಡಿಂದ ನಡೆಸಿ ಪುಷ್ಪಕವನು ನೃಪನೊಳು । ನೋಡಲೆಯ್ದಿದನು ಸನ್ನಿಧಿಗೆ ॥೪೯॥

ನಿಂದುದು ಪುಷ್ಪಕ ನೃಪನಿದಿರೊಳು ಕೂಡೆ । ನಿಂದುವು ತೇಜಿಗಳ್ಬಳಸಿ ॥
ನಿಂದಲ್ಲಿ ನಿಲ್ಲದೆ ಕುಣಿವುತಿದ್ದವು ಮಝು । ಚಂದಚಂದದ ವಾದ್ಯಗತಿಗೆ ॥೫೦॥

ರನ್ನದ ಗಗ್ಗರ ಬಣ್ಣಬಗೆಯ ಜೋಲಿ । ಹೊನ್ನ ಹೂವೆಸೆವ ಬಾಸಿಗದಿ ॥
ಮನ್ನೆಯರೊಡೆಯನ ತೇಜಿಯಿದ್ದುವು ಬೀರ । ಕನ್ನೆಯ ಮದುವೆಯಹಂತೆ ॥೫೧॥

ನವರಾತ್ರೆ ಜಿನಮಹಿಮೆಯ ಮಾಡಿ ದಶಮಿಯ । ದಿವಸದೊಳ್ ಪಯಣದಪ್ಪುದಕೆ ॥
ಹವಣಿಸಿ ಜೋಕೆ ಮಾಡುವೆನೆಂದು ಮಂತ್ರಿ ಬಿ । ನ್ನವಿಸಿ ಬೀಳ್ಕೊಂಡು ನಡೆದನು ॥೧೫॥

ಕಟ್ಟಿದುವಾಗಳೆ ಗುಡಿ ತೋರಣಂಗಳು । ಪಟ್ಟಣದೊಳಗಲ್ಲಿಗಲ್ಲಿ ॥
ಬೆಟ್ಟದಂದದ ತೇರು ಸಿಂಗರಿಸಿದುವಹೊ । ಹುಟ್ಟಿತು ದಂಡಿನ ಸುದ್ದಿ ॥೧೬॥

ಆಕಾಶಕೆದ್ದ ಪತಾಕೆಗಳಿರೆ ನೋಡಿ । ಸಾಕೇತಪುರವೆಂಬರದನು ॥
ಶ್ರೀ ಕೌಶಲಾಯೋಧ್ಯಾಪುರವೆಂಬ ಜಿನರಾಗ । ರಾ ಕೀರ್ತಿಪುರ ಶೋಭೆಯಾಯ್ತು ॥೧೭॥

ಮುಗಿಲ ಮುಟ್ಟುವ ಧ್ವಜವೆತ್ತಿತಯೋಧ್ಯಾ । ನಗರ ಮಧ್ಯದ ಬಸದಿಯೊಳು ॥
ಅಗಣಿತಜಿನಗೃಹವಿದ್ದುವಲ್ಲಲ್ಲಿ ಕೇ ।ರಿಗಳೊಳು ಸಿಂಗರವಾಗಿ ॥೨೦॥

ಹೋಮಗಳಲ್ಲಲ್ಲಿ ಪೂಜೆಗಳಲ್ಲಲ್ಲಿ । ಸ್ತೋಮಾಭಿಷೇಕವಲ್ಲಲ್ಲಿ
ಶ್ರೀ ಮುನಿಭುಕ್ತಿಯಲ್ಲಲ್ಲಿ ಮೆರೆಯೆ ಪುಣ್ಯ । ಧಾಮವಾಗಿರ್ದುದಾ ನಗರ ॥೨೧॥[೩]

ಕೂಡಲೇ ಪಟ್ಟಣವು ಸಿಂಗಾರವಾಯಿತು. ಆ ಸಮಯದಲ್ಲಿ ಅನೇಕ ಯಜ್ಞಗಳು ನಡೆದುವು. ನವರಾತ್ರಿ ಹಬ್ಬವು ಜೈನಧರ್ಮದ ಹಿನ್ನೆಲೆಯಲ್ಲಿ ನಡೆಯುವ ವೈಭವೋಪೇತ ಹಬ್ಬವಾಗಿತ್ತು. "ಹದಿನೈದು ಹದಿನಾರನೆಯ ಶತಮಾನದಲ್ಲಿ ಜೈನರಾಜ ಮನೆತನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಭದ್ರವಾಗಿದ್ದವು. ಮೂಡುಬಿದಿರೆ ಜೈನ ಧರ್ಮದ ಕೇಂದ್ರ; ಜಿನಾಲಯಗಳ ನೆಲೆವನೆ; ತ್ರಿಭುವನ ತಿಲಕ ಚೂಡಾಮಣಿಯಾದ ಸಾಸಿರ ಕಂಬದ ಬಸದಿಯಿರುವ ಅತಿಶಯ ಕ್ಷೇತ್ರ"[೪]. ಇಂತಹ ಹಿನ್ನೆಲೆಯಿರುವ ರತ್ನಾಕರವರ್ಣಿ ತನ್ನ ಕಾವ್ಯದಲ್ಲಿ ನವರಾತ್ರಿ ಉತ್ಸವವನ್ನು ಜೀವಂತವಾಗಿರಿಸಿದ್ದಾನೆ.

ಒಂದು ಕಾವ್ಯದಲ್ಲಿ ಸಮಷ್ಟಿ ಪ್ರಜ್ಞೆಯೊಂದಿಗೆ ಅಭಿವ್ಯಕ್ತಗೊಳ್ಳುವ ವ್ಯಷ್ಟಿ ಪ್ರಜ್ಞೆ, ಕವಿಯು ಬೆಳೆದ ಭೌಗೋಳಿಕ ಪರಿಸರ, ಸಂಪ್ರದಾಯಗಳು, ಆಸಕ್ತಿ ಅಭೀಪ್ಸೆಗಳು ಆಯಾ ಪ್ರದೇಶದ ಜಾನಪದ ಮತ್ತು ಭಾಷೆಗಳು ತಲೆತಲಾಂತರದಿಂದ ಬಂದ ಸಂಸ್ಕೃತಿಯು ಅಭಿವ್ಯಕ್ತಿಗೊಳ್ಳುತ್ತದೆ. ಹೀಗೆ ತನ್ನ 'ಭರತೇಶ ವೈಭವ' ಮಹಾಕಾವ್ಯದಲ್ಲಿ ಜಿನಾರಾಧನೆಯು ಯಾವ ರೀತಿ ನಡೆಯುತ್ತಿತ್ತು ಎಂಬುದರ ಬಗ್ಗೆ ನಮಗೆ ಸಕಲ ವರ್ಣನೆಗಳು ಕಣ್ಣೆದುರು ಚಿತ್ರಗಳಾಗಿ ಮೂಡುವಂತೆ ಮಾಡಿದ್ದಾನೆ. "ಅಶ್ವೀಜ ಮಾಸದ ಶುಕ್ಲ ಪಾಡ್ಯದಿಂದ ದಶಮಿ ತಿಥಿಯವರೆಗೆ ಆಚರಿಸುವ ವೃಷಭದೇವನ ಮಗನಾದ ಭರತ ಚಕ್ರವರ್ತಿಯ ದಿಗ್ವಿಜಯ ಯಾತ್ರೆಯನ್ನು ಸ್ಮರಿಸಲಾಗುತ್ತಿದೆ. ಈ ದಿನಗಳಲ್ಲಿ ತುಳುನಾಡಿನಲ್ಲಿರುವ ಎಲ್ಲಾ ಬಸದಿಗಳಲ್ಲೂ ವಿಶೇಷ ರೀತಿಯಲ್ಲಿ ಪೂಜೆ ಉತ್ಸವಗಳು ಜರಗುತ್ತವೆ. ಜೊತೆಗೆ ತಮ್ಮ ಕುಲದೇವತೆಗಳಾದ ಬ್ರಹ್ಮಯಕ್ಷ, ಜ್ವಾಲಾಮಾಲಿನೀ, ಪದ್ಮಾವತೀ, ಕೂಷ್ಮಾಂಡಿನೀ ದೇವಿ ಮೊದಲಾದ ಯಕ್ಷಯಕ್ಷಿಯರ ಪೂಜೆಯನ್ನು ನಡೆಸುತ್ತಾರೆ. ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿ ಕೊಡುತ್ತಾರೆಂಬ ನಂಬಿಕೆಯಿಂದ ಜೈನಗ್ರಹಸ್ಥರು ವಿಶೇಷವಾಗಿ ಈ ಯಕ್ಷಿಯರನ್ನು ಪೂಜಿಸುತ್ತಾರೆ. ಜೈನ ಸ್ತ್ರೀಯರು ಅರ್ಚನೆ, ನೋಂಪಿ ವ್ರತಗಳನ್ನು ನಡೆಸಿ ಬಾಗಿನವನ್ನು ನೀಡುತ್ತಾರೆ. ಮೂಡುಬಿದಿರೆಯ ಲೆಪ್ಪದ ಬಸದಿಯ ಜ್ವಾಲಾಮಾಲಿನೀ, ನಲ್ಲೂರಿನ ಕೂಷ್ಮಾಂಡಿನಿ, ವರಂಗದಲ್ಲಿಯ ಪದ್ಮಾವತೀ ಯಕ್ಷಿ, ನೆಲ್ಲಿಕಾರಿನ ಬ್ರಹ್ಮದೇವ ಇವರುಗಳನ್ನು ಇಲ್ಲಿಯ ಜೈನಮತೀಯರು ಹರಕೆ ಒಪ್ಪಿಸಿ, ಪೂಜೆ ನಡೆಸುವ ಪದ್ಧತಿಯಿದೆ"[೫]

ನಿತ್ಯಪ್ರಭಾವನೆ ನಿತ್ಯರಥೋತ್ಸವ । ನಿತ್ಯಾಭಿಷೇಕಪೂಜೆಗಳು ॥
ನಿತ್ಯಚತುಸ್ಸಂಗತೃಪ್ತಿಗಳೆಸೆದುವ । ಮಾತ್ಯನ ಪ್ರೇರಣೆಯಿಂದ ॥೨೩॥

ಜಿನಪೂಜಾಪೂರ್ವಕವಾಗಿ ಕೂಡೊಂಬತ್ತು । ದಿನ ನಡೆದುದು ಚಕ್ರಪೂಜೆ ॥
ಅನುಚರರೆಲ್ಲರು ತಂತಮ್ಮ ಖಡ್ಗವ । ನನುರಾಗ ಮಿಗೆ ಪೂಜಿಸಿದರು ॥೨೪॥

ಯಕ್ಷಗೋಮುಖಗೆ ಚಕ್ರೇಶ್ವರಿಯಕ್ಷಿಣೆ । ಗಕ್ಷುಣ್ಣ ಪೂಜೆಯ ಮಾಡಿ ॥
ರಕ್ಷೆಗಟ್ಟಿತು ತೇಜಿಗಾಶ್ವಿಜದೊಳು ಶುಕ್ಲ । ಪಕ್ಷದ ಪಾಡ್ಯದಿನದೊಳು ॥೨೫॥

ಯಕ್ಷದೇವತೆಯೆಂಬರೇಕೆ ತೇಜಿಯನವು । ಯಕ್ಷರಕ್ಷಿತವದರಿಂದ ॥
ಯಕ್ಷಯಕ್ಷಿಣಿಯರ ಪೂಜಾಪೂರ್ವಕವಾಗಿ । ರಕ್ಷೆಗಟ್ಟಿಸಿದನಾ ಮಂತ್ರಿ ॥೨೬॥

ಆನೆಗಳನು ರಥಗಳನು ಸಿಂಗರಗೈಸಿ । ಪೀನವೈಭವಗಾಣಿಸಿದನು ॥
ಈ ನರಲೋಕಕಚ್ಚರಿಯೆನೆ ಮಂತ್ರಿ ಮ ।ಹಾನವಮಿಯ ನಡೆಸಿದನು ॥೨೭॥

ನಗರ ಮಧ್ಯದ ಜಿನವಾಸಕಾ ರಾಜೇಂದ್ರ । ಹಗಲೆಯ್ದಿ ಪೂಜೆಯ ನೋಡಿ ॥
ಮಗುಳ್ದರಮನೆಗೆಯ್ದಿ ಮತ್ತೆ ರಾತ್ರಿಯೊಳೋ । ಲಗವದನೇನ ಬಣ್ಣಿಪೆನು ॥೨೮॥[೬]

ದಕ್ಷಿಣಕನ್ನಡ ಹಾಗೂ ಆಸುಪಾಸಿನ ಇತರ ಜಿಲ್ಲೆಗಳಲ್ಲಿ ನವರಾತ್ರಿಯಂದು ಆಯುಧ ಪೂಜೆ ಒಂದು ಪ್ರಮುಖ ಆಚರಣೆಯಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಕುಲಕಸುಬು ಅಥವಾ ವೃತ್ತಿಗೆ ಸಂಬಂಧಪಟ್ಟಂತಹ ಸಲಕರಣೆಗಳಿಗೆ ಪೂಜೆಗೈಯುತ್ತಾರೆ.

ಉದಾ :– ಮರಕೆಲಸದ ಆಚಾರಿಯು ತನ್ನ ವೃತ್ತಿ ಸಲಕರಣೆಗಳಾದ ಉಳಿ, ಸುತ್ತಿಗೆ, ಗರಗಸಗಳಿಗೆ ಪೂಜೆಗೈದರೆ, ದರ್ಜಿಯು ತಾನು ಹೊಲಿಯುವ ಯಂತ್ರವನ್ನು ಪೂಜಿಸುತ್ತಾನೆ.

"ನವಮಿಯಂದು ಜಿನಶಾಸನದ (ಧರ್ಮ) ಸಂರಕ್ಷಣೆಯನ್ನು ಮಾಡುತ್ತಿರುವ ಯಕ್ಷ ಯಕ್ಷಿ ದೇವತೆಗಳ ಆಯುಧಗಳನ್ನು ಪೂಜಿಸುತ್ತಾರೆ. ಈ ದಿವಸ ಬಸದಿಗಳಲ್ಲಿರುವ ಯಕ್ಷ ಯಕ್ಷಿಯರಿಗೆ ಷೋಡಶೋಪಚಾರ ಪೂಜೆಗಳು ನಡೆಯುತ್ತದೆ"[೭]

ಆ. ವಿವಾಹದ ವಿಧಿಗಳು

ವಿವಾಹವು ಇಂದು ನಿನ್ನೆಯದಲ್ಲ; ಅದಕ್ಕೆ ದೀರ್ಘವಾದ ಇತಿಹಾಸವೊಂದಿದೆ. ಕಾಲಾನುಕ್ರಮದಲ್ಲಿ ವಿವಾಹ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿದೆ. ವಿವಾಹದ ವಿಧಿವಿಧಾನಗಳು, ರೀತಿ – ನೀತಿಗಳು ಹಾಗೂ ಪ್ರಕಾರಗಳು ಧರ್ಮದಿಂದ ಧರ್ಮಕ್ಕೆ ಭಿನ್ನವಾಗುತ್ತದೆ. "ಸಪ್ತಪರಮಸ್ಥಾನಗಳು ಲಭ್ಯವಾಗಲೆಂದು ಇದನ್ನು ಜೈನಮತೀಯರು ಆಚರಿಸುತ್ತಾರೆ. ಸತಿ–ಪತಿಯರಾಗಿ ಸಂಸಾರ ಹೂಡಿ, ಧರ್ಮಸಮ್ಮತವಾಗಿ ಸಂತಾನಾಭಿವೃದ್ಧಿಗಾಗಿಯೂ ಸಮಾಜದ ಅಭಿವೃದ್ಧಿಗಾಗಿಯೂ ಸ್ತ್ರೀ – ಪುರುಷರು ಕೈಗೊಳ್ಳುವ ಒಂದು ರೀತಿಯ ದೀಕ್ಷೆಯೇ ವಿವಾಹ; ತುಳುನಾಡಿನ ಜೈನಮತೀಯರಲ್ಲಿ ಸಗೋತ್ರ ವಿವಾಹ ನಿಷೇಧವಾಗಿದೆ. ತಾಯಿ, ತಂಗಿ, ಮಗಳು, ಅತ್ತೆ, ತಂದೆಯ ಮಗಳು ಈ ಐದೂ ವಿಧವಾದ ಸಂಬಂಧವುಳ್ಳ ಕನ್ಯೆಯನ್ನು ಮದುವೆಯಾಗುವಂತಿಲ್ಲ. ಬೇರೆ ಗೋತ್ರದಲ್ಲಿ ಹುಟ್ಟಿದ ಶುಭ ಲಕ್ಷಣಗಳಿಂದ ಕೂಡಿರುವ ರೋಗವಿಲ್ಲದವಳೂ ರೂಪ, ಗುಣ, ಚಾರಿತ್ರ್ಯಗಳಿಂದ ಶೋಭಿಸುವ ಸೋದರ ಅತ್ತೆಯ, ಸೋದರ ಮಾವನ ಮಗಳನ್ನಾಗಲೀ ಅಥವಾ ತನಗೆ ಸಮ್ಮತವಾದ ಕುಲೀನೆಯದ ಕನ್ಯೆಯನ್ನಾಗಲೀ ಮದುವೆಯಾಗಬಹುದು. ವಧುವಿನ ತಂದೆಯ ಒಪ್ಪಿಗೆಯನ್ನು ಪಡೆದು, ಅಗ್ನಿಸಾಕ್ಷಿಯಾಗಿ ಧಾರಾಪೂರ್ವಕ ವಧುವನ್ನು ಸ್ವೀಕರಿಸುವ ಪದ್ಧತಿಯು ಪ್ರಚಲಿತವಿದೆ"[೮]

ರತ್ನಾಕರವರ್ಣಿಯು ಭರತೇಶನ ವಿವಾಹದ ಸಂದರ್ಭದಲ್ಲಿ ವರ್ಣಿಸಿರುವ ವಿವಾಹವಿಧಿಗಳು ತುಳುನಾಡಿನ ಜೈನಮತೀಯರ ವಿವಾಹ ವಿಧಿಗಳೇ ಆಗಿದೆಯೆನ್ನಬಹುದು. ಭರತೇಶನ ದಿಗ್ವಿಜಯ ಸಂದರ್ಭದಲ್ಲಿ ಅರಸರು ಶರಣಾಗತರಾಗಿ ಕಪ್ಪಕಾಣಿಕೆಗಳ ಜೊತೆಗೆ ತಮ್ಮ ಪುತ್ರಿಯರನ್ನು ಸಾಲು

ಸಾಲಾಗಿ ಭರತೇಶನಿಗೆ ಧಾರೆಯೆರೆದು ಕೊಡುತ್ತಾರೆ. ಹೀಗೆ 'ದಶಮಿಪ್ರಸ್ಥಾನ' ಸಂಧಿಯಲ್ಲಿ ಕುಸುಮಾಜಿಯ ತಂಗಿ ಮಕರಂದಾಜಿಯನ್ನು ಭರತೇಶನು ವಿವಾಹವಾಗುತ್ತಾನೆ. ಗಜಾನಕರಾಜನು ತನ್ನ ಮಗಳಾದ ಮಕರಂದಾಜಿಯನ್ನು ಧಾರೆಯೆರೆಯುವ ಸಂದರ್ಭವನ್ನು ಕವಿ ಹೀಗೆ ವರ್ಣಿಸಿದ್ದಾನೆ;

ಮುಟ್ಟಲಾದುದು ಲಗ್ನವೆನೆಯ್ತಂದು । ಮೆಟ್ಟಕ್ಕಿಗಳ ಮೆಟ್ಟಿ ನಿಂದು ॥
ನಿಟ್ಟಿಸಿ ಮಾವನೊತ್ತಿನೊಳಿದ್ದು ಮೈದುನ । ಗಟ್ಟಹಾಸದೊಳಿಂತು ನುಡಿದಾ ॥೮೫॥

ನಿಕಟದ ತೆರೆ ಜಾರೆ ವಾದ್ಯ ಘೂರ್ಣಿಸೆ ಗಜಾ । ನಕರಾಜನು ಧಾರೆಯೆರೆಯೆ ॥
ಮಕರಂದಾಜಿಯನಾ ರಾಯ ಹೋಮಸಾ । ಕ್ಷಿಕದಲ್ಲಿ ಹಸ್ತವಿಡಿದನು ॥೮೯॥[೯]

ಖೇಚರ ಮಂತ್ರಿಯು ಮುನ್ನೂರು ಜನ ಕನ್ಯೆಯರನ್ನು ಭರತೇಶನಿಗೆ ಧಾರೆಯೆರೆಯುವ ಸಂದರ್ಭದಲ್ಲಿರುವ ಪದ್ಯ;

ತಟ್ಟೈಸಿ ತೆಂಕಬಡಗಲೊಂದೆ ತೆರೆಯಿದ್ದು । ದಿಟ್ಟಿದ್ದ ರಾಚೆ ಮುನ್ನೂರು ॥
ತೊಟ್ಟೀಚೆ ಮುನ್ನೂರುಪಡಲಿಗೆ ಇದ್ದುವು । ಮೆಟ್ಟಕ್ಕಿ ತುಂಬಿ ಸಾಲಾಗಿ ॥೬೭॥

ಧಾರೆಗೆ ಸಮಯವಾಯ್ತೆಂದರಷ್ಟರೊಳಗೆ ಸಂ । ಚಾರಕಾಂತೆಯರು ಪೇಳಿದರು ॥
ಆ ರಮಣಿಯರನಲ್ಲಿಯೆ ನಿಲಿಸಿದನೆದ್ದ । ನೋರಂತೆ ಮದುವೆಯ ಗೃಹಕೆ ॥೮೧॥

ತೊಟ್ಟು ಮಿಕ್ಕಿನ ತೊಡಿಗೆಯನೆಳೆಮುತ್ತಿನ । ಮೆಟ್ಟಕ್ಕಿಯೊಳು ಬಂದು ನಿಂದ ॥
ತೆರೆ ತೆಂಕಬಡಗಲಾಗಿದ್ದುದಾಗಿದಿರೊಳು । ತರುಣಿಯರಾಚೆ ಸಾಲಾಗಿ ॥೮೫॥

ಮಂಗಲಧವಳಶೋಭನಗಳ ಸತಿಯರು । ಭೃಂಗಾಳಿಯಂತೆ ಪಾಡುತಿರೆ ॥
ಮಂಗಲಾಷ್ಟಕೆ ಪೂರ್ಣವಾಗೆ ಮಧ್ಯದ ತೆರೆ । ಪಿಂಗಿತು ಜಯಜಯವೆನಲು ॥೯೧॥[೧೦]

ಹಾಗೆಯೇ ಮಂಗಲಯಾನ, ಉಂಗುರುಡಿಗೆ ಹಾಗೂ ಸ್ತ್ರೀರತ್ನ ಸಂಭೋಗ ಸಂಧಿಯಲ್ಲಿ ನಮಿರಾಜನು ತನ್ನ ತಂಗಿಯನ್ನು ಭರತೇಶನಿಗೆ ಧಾರೆಯೆರೆದು ಕೊಡುವ ಸಂದರ್ಭದಲ್ಲಿ;

ತಾಳಿಬಂದಿಯ ಮುನ್ನ ಕಟ್ಟಿಸಿ ಮದುವೆಗೆ । ಲೀಲೆಯೊಳ್ಬಹ ಕಾರ್ಯವುಂಟೆ ॥
ಭಂಡಾರವತಿಯೆಂಬ ಪೆರ್ಗಡತಿಗೆ ಪೆಣ್ಣ । ತಂದ ನಂಬಗೆದಂತರೆಸೆಯೆ ॥
ತೊಂಡಿಲುಂಗುರ ತಾಳಿಬಂದಿ ಭೂಷಣದ ಕ । ರಂಡಗೆಗೊಟ್ಟು ಕಳುಹಿದಾ ॥೨೬॥

ಹೇಳಲಳವೆ ಚಕ್ರಿಯಾ ಮಹಿಮೆಯ ಮರ್ಝು । ಬಾಲೆ ಮುನ್ನವೆ ಚೆನ್ನೆಯಬಹುದು ॥
ತಾಳಿಬಂದಿಯ ಕಟ್ಟನೊಡಲೊಂದು ಹೊಸಕಾಂತಿ ಡಾಳಿಸಿತು ಚಿತ್ರವೆನಿಸಿ ॥೮೫॥

ಮುತ್ತಿನ ಮೆಟ್ಟಕ್ಕಿಯೊಳು ಕನ್ನೆ ನಿಂದಳು । ಮುತ್ತಿನ ತೆರೆಯ ಮರೆಯೊಳು ॥
ಮತ್ತಕಾಶಿನಿಯರು ಹಾಡತಿರ್ದರು ಸ್ವರವೆತ್ತಿ ಶೋಭನಧವಳಗಳಾ ॥೧೩॥

ಮೆಟ್ಟಕ್ಕಿಯೊಳು ನಿಂದು ನಲ್ಲನೆದೆಗೆ ಜುಮ್ಮ । ದಟ್ಟಿಸಿ ಬರಿಸಿದಳೆನಲು ॥
ತೊಟ್ಟನೆ ಭರತೇಶ ಬರುತಿರ್ದನಿದೆ ಲಗ್ನ । ಮುಟ್ಟಲಾಯ್ತೆನೆ ಕೇಳುತೊಡನೆ ॥೧೮॥

ತೆರೆಯ ಮರೆಯೊಳಿರ್ದ ನಲ್ಲಳ ನೋಡುವಾ । ತುರದೊಳುದ್ದವನೇರುವಂತೆ ॥
ಬರುತ ಮೆಟ್ಟಕ್ಕಿಯ ಮೆಟ್ಟಿನಿಂದನು ಶುಭ । ಕರ ಜಯಜಯವೆಂಬ ರವದಿ ॥೧೯॥

ಪರಮ ಮಂತ್ರವನೋದಿ ಮತ್ತಿನಕ್ಷತೆಗಳ । ಹರಸಿ ದಂಪತಿಗಳಿಗಿಡುತ ॥
ತಿರುಗಿ ಮತ್ತಾಯತ ವೇಯಂಬರದಕೆ ಚೆ । ಚ್ಚರದೊಳಾಯತ ವೆಂಬರೊಸೆದು ॥೨೦॥

ಸುಲಲಿತ ಮಂಗಲಾಷ್ಟಕ ಪೂರ್ಣವಾಗಿ ಮಂ । ಗಲದ ಕಾಳಿಕೆಯ ರಾಗದೊಳು ॥
ಪಳಮಂಜರಿಯೊಳು ಪಾಡಿದೊಡೆ ಮಧ್ಯದ ತೆರೆ । ತೊಲಗಿತು ಜಯಜಯವೆನಲು ॥೨೨॥

ತೋಳ ಮೊದಲು ತಳತಳಿಸಲೆರಡುದುಂಡು । ದೋಳಿತ್ತಿ ಕೊರಳಿಗಾ ನೀರೆ ॥
ಮಾಲೆಯನಿಡುವಾಗ ತ್ರಿಜಗದ ಭಾಗ್ಯ ಬಂ । ದೋಲೈಸಿದಂತಾಯ್ತು ನೃಪಗೆ ॥೨೬॥

ನಲ್ಲಳ ಕೈವಿಡಿದಲ್ಲಿಂದ ನಡೆದೊತ್ತಿ । ನಲ್ಲಿ ಧೂಮವ ಕಳೆದುರಿದ ॥
ಉಲ್ಲಾಸ ಹೋಮ ಕುಂಡವ ಬಲವಂದನು । ಮೆಲ್ಲನೋಜೆಯೊಳು ಗಾಡಿಯೊಳು ॥೩೫॥[೧೧]

'ಭರತೇಶ ವೈಭವ'ದ ಪದ್ಯಪದ್ಯಗಳಲ್ಲಿ ಉಲ್ಲೇಖವಾಗಿರುವ ವಿವಾಹ ವಿಧಿಗಳು ತುಳುನಾಡಿನ ಜೈನಮತೀಯರ ವಿವಾಹ ವಿಧಿಗಳಾಗಿವೆ. ಕಾಲಾನಂತರದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಈ ವಿಧಿಗಳು ಇಂದಿಗೂ ಆಚರಣೆಯಲ್ಲಿದೆ. ಡಾ। ಎಸ್. ಡಿ. ಶೆಟ್ಟರು ತಮ್ಮ 'ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಜೈನಮತೀಯರ ವಿವಾಹ ವಿಧಿಗಳನ್ನು ಈ ರೀತಿ ವಿವರಿಸಿದ್ದಾರೆ.

"ನಿಶ್ಚಿತಾರ್ಥವನ್ನು ವಧು-ವರರ ಮನೆಯವರು ನಡೆಸಿದ ಬಳಿಕ ಚಪ್ಪರ ಮುಹೂರ್ತದಿಂದ ಮೊದಲ್ಗೊಂಡು ಅಂಕುರಾರ್ಪಣ, ತೋರಣಮುಹೂರ್ತ, ತಾಳಿಬಂದಿ, ಧಾರೆ, ನಾಗಬಲಿ ಶಾಸ್ತ್ರ ಇತ್ಯಾದಿಗಳು ನಡೆಯುತ್ತವೆ. ಈ ವಿಧಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೂ ಇವೆ. ಚಪ್ಪರದಿಂದಲಂಕೃತವಾದ ವಿವಾಹ ವೇದಿಕೆಯಲ್ಲಿ ಪುರೋಹಿತನು ಪುಣ್ಯಾಹವಾಚನ, ಷಟ್ ಕುಮಾರ ಪೂಜೆ, ದರ್ಭಸ್ಥಾಪನೆಗಳನ್ನು ಮಾಡುತ್ತಾನೆ. ಮುಹೂರ್ತ ಕಂಬವನ್ನಿಡುವ ಮೂರು ಜಗಲಿಗಳಿಂದ ಕೂಡಿದ ಪೀಠದ ಮೇಲೆ ಪಾತಿಯಲ್ಲಿ ಹಾಲು, ತುಪ್ಪ, ಪಂಚರತ್ನಗಳನ್ನು ಹಾಕಿಸಿ ಸ್ಥಾಪಿಸುತ್ತಾರೆ. ಆ ಬಳಿಕ ಮದುವೆಗೆ ಯಾವ ವಿಘ್ನವೂ ಬಾರದೇ ಇರಲೆಂದು ವಧು ವರರಿಗೂ ಅವರ ತಂದೆ ತಾಯಿಯರಿಗೂ ಕಂಕಣವನ್ನು ಕಟ್ಟುತ್ತಾರೆ. ಮೊದಲ ದಿನ ವಧುವರರ ಮನೆಗಳಲ್ಲಿ ನವಗ್ರಹ ಶಾಂತಿಹೋಮ, ಅಂಕುರಾರ್ಪಣ ವಿಧಿಯನ್ನು ನಡೆಸುತ್ತಾರೆ. ಆರತಿ ಬೆಳಗಿ ನೆಂಟರಿಷ್ಟರು ಸೇರಿ ಎಲ್ಲರನ್ನೂ ಸತ್ಕರಿಸುತ್ತಾರೆ. ಇದಕ್ಕೆ ಗ್ರಹಯಜ್ಞ ವಿಧಾನವೆನ್ನುತ್ತಾರೆ. ಅನಂತರ ವರನನ್ನು ವೈಭವದಿಂದ ವಧುವಿನ ಮನೆಗೆ ಕರೆತರುತ್ತಾರೆ. ವರನ ದಿಬ್ಬಣವು ವಧುವಿನ ಮನೆಗೆ ಬಂದಾಗ ವರರನ್ನು ವಸ್ತ್ರಾಭರಣ, ಫಲ, ತಾಂಬೂಲಗಳನ್ನು

ನೀಡಿ ಸತ್ಕಾರದೊಡನೆ ಎದುರುಗೊಳ್ಳುತ್ತಾರೆ. ವಧುವಿನ ಸಹೋದರನು, ವರನ ಕಾಲಿಗೆ ನೀರು ಹಾಕಿ ಮೂರು ಸಲ ತೊಳೆಯುತ್ತಾನೆ. ಕಂಚಿನ ಪಾತ್ರೆಯಲ್ಲಿ ಮೊಸರನ್ನು ಮಧುಪರ್ಕವೆಂದು ಮಂತ್ರ ಸಹಿತವಾಗಿ ವರನಿಗೆ ಕುಡಿಯಲು ನೀಡುತ್ತಾರೆ. ಆ ಬಳಿಕ ವರನ ಕಡೆಯವರು ವಧುವಿಗಾಗಿ ತಂದ ಪುಷ್ಪಮಾಲೆ, ಸೀರೆ, ಆಭರಣಗಳನ್ನು ವಧುವಿಗೆ ಕೊಟ್ಟು ಸತ್ಕರಿಸುತ್ತಾರೆ. ವಧುವರರನ್ನು ಪ್ರತ್ಯೇಕವಾಗಿ ಸುಮಂಗಲಿಯರು ಅರಸಿನ ಎಣ್ಣೆಯನ್ನು ಹಚ್ಚಿ ಪವಿತ್ರ ಜಲದಿಂದ ಸ್ನಾನ ಮಾಡಿಸುತ್ತಾರೆ. ಈ ಎಲ್ಲ ವಿಧಿಗಳು ನಡೆದ ಬಳಿಕ ವರನು ವಿವಾಹ ವೇದಿಕೆಯಲ್ಲಿ ತೆರೆಯ ಪಶ್ಚಿಮದಲ್ಲಿ ಅಕ್ಕಿಯ ರಾಶಿಯ ಮೇಲೆ ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ. ಪೂರ್ವದಿಕ್ಕಿನ ಅಕ್ಕಿಯ ಮೆಲೆ ವಧುವು ಪಶ್ಚಿಮಾಭಿಮುಖಳಾಗಿ ನಿಲ್ಲುತ್ತಾಳೆ. ಮಂಗಲಾಷ್ಟಕ ಆಶೀರ್ವಚನಗಳು ಮುಗಿದು ಶುಭ ಮುಹೂರ್ತದಲ್ಲಿ ತೆರೆಯನ್ನು ಸರಿಸಿದಾಗ ವಧುವರರು ಪರಸ್ಪರ ಮುಖಾವಲೋಕನ ಮಾಡಿಕೊಳ್ಳುತ್ತಾರೆ. ಬೆಲ್ಲ ಜೀರಿಗೆಯನ್ನು ಪರಸ್ಪರರೂ ವಿನಿಮಯ ಮಾಡಿಕೊಂಡ ಬಳಿಕ ಪುಷ್ಪಮಾಲೆಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅನಂತರ ವರನ ಕೈ ಬೊಗಸೆಯಲ್ಲಿ ವಧುವಿನ ಕೈ ಬೊಗಸೆಯನ್ನು ಇಡಿಸಿ ಅದರಲ್ಲಿ ವೀಳ್ಯದೆಲೆ, ಅಕ್ಕಿ, ತೆಂಗಿನಕಾಯಿ, ಚಿನ್ನವನ್ನಿಟ್ಟು ಮಂತ್ರಪೂರ್ವಕವಾಗಿ ತೀರ್ಥಪ್ರಸಾದ ಜಲವನ್ನು ವಧುವಿನ ತಂದೆ ತಾಯಿಯರು ಗಿಂಡಿಯಿಂದ ಧಾರೆಧಾರೆಯಾಗಿ ಎರೆದು ಮಗಳನ್ನು ಒಪ್ಪಿಸುತ್ತಾರೆ. ಅನಂತರ ಕುಲವನಿತೆಯರು ದಂಪತಿಗಳಿಗೆ ಅಕ್ಷತೆಯನ್ನು ಹಾಕಿ ಆಶೀರ್ವದಿಸುತ್ತಾರೆ. ಮುಂದೆ ಪುರೋಹಿತರು ಶಾಂತಿ ಹೋಮ ವಿಧಿಯನ್ನು ಆರಂಭಿಸುತ್ತಾರೆ. ಪೂರ್ಣಾಹುತಿಗೆ ಮೊದಲು ವಧುವರರು ಹಸೆಯ ಮೇಲಿಂದ ಎದ್ದು ಅಗ್ನಿಗೆ ಉತ್ತರಾಭಿಮುಖವಾಗಿ ನಿಂತು ಲಾಜಾಹುತಿಯನ್ನು ಕೊಡುತ್ತಾರೆ. ವಧುವರರ ಕೈಯಿಂದ ಅಷ್ಟವಿದಾರ್ಚನೆಯನ್ನು ಮಾಡಿಸಿದ ಬಳಿಕ, ಹೋಮಾಗ್ನಿಗೆ ಮಾಡಿಸಿ, ಪೂರ್ಣಾರ್ಘ್ಯವನ್ನು ಹೋಮಕ್ಕೆ ನೀಡಿ ಮೂರು ಪ್ರದಕ್ಷಿಣೆಯನ್ನು ಮಾಡಿ ಶಾಂತಿಧಾರೆಯನ್ನು ಪುಷ್ಪಾಂಜಲಿಯನ್ನೂ ಎರಚುತ್ತಾರೆ.

ಅನಂತರ ಅಗ್ನಿಯ ಉತ್ತರ ದಿಕ್ಕಿನಲ್ಲಿ ವಿಶಾಲವಾದೊಂದು ಶಿಲೆಗೆ ಹಸಿನೂಲನ್ನು ಸುತ್ತಿ, ಉಪ್ಪು – ಜೀರಿಗೆ – ಬೆಲ್ಲ ಸಹಿತವಾಗಿ ಪಶ್ಚಿಮಾಭಿಮುಖವಾಗಿ ಸ್ಥಾಪಿಸಿರುವ ಕಲ್ಲಿನ ಮೇಲೆ, ಏಳು ಉಪ್ಪಿನ ಮತ್ತು ಅಕ್ಕಿಯ ಪುಂಜಗಳನ್ನಿಟ್ಟು ಸಪ್ತಮರಮಸ್ಥಾನವೆಂದು ಭಾವಿಸಿ ಪೂಜಿಸುತ್ತಾರೆ. ವರನು ವಧುವಿನೊಂದಿಗೆ ಆ ಶಿಲೆಯ ಪುಂಜವನ್ನು ಮಂತ್ರ ಸಹಿತವಾಗಿ ಮುಟ್ಟಿ ವಂದಿಸುತ್ತಾನೆ. ಪುರೋಹಿತರು ಪೂರ್ಣಾಹುತಿಯನ್ನು ಮುಗಿಸಿ ದಂಪತಿಗಳನ್ನು ಅಗ್ನಿಗೆ ಪ್ರದಕ್ಷಿಣೆ ಬರಿಸಿ, ಹೋಮಭಸ್ಮವನ್ನು ಕೊಟ್ಟು ಹಸೆಯ ಮೇಲೆ ನಿಲ್ಲಿಸುತ್ತಾರೆ. ಅನಂತರ ಪರಸ್ಪರರು ಏಳೇಳು ಸಪ್ತಪದಿ ವಾಕ್ಯಗಳ ಪ್ರತಿಜ್ಞೆಯನ್ನು ಕೈಗೊಳ್ಳುತ್ತಾರೆ"[೨೨]

ಹೀಗೆ ಕಾವ್ಯದಲ್ಲಿ ವರ್ಣಿಸಿರುವ ಚಕ್ರೇಶನ ವಿವಾಹ ವಿಧಿಗಳು ಇಂದಿಗೂ ತುಳುನಾಡಿನ ಜೈನಮತೀಯರಲ್ಲಿ ಆಚರಣೆಯಲ್ಲಿವೆ. ಕೆಲವು ಸಣ್ಣಪುಟ್ಟ ಬದಲಾವಣೆಗಳು ಈ ವಿಧಿಗಳಲ್ಲಿ ಆಗಿದ್ದರೂ ಮುಂಚಿನ ಸತ್ವವನ್ನು ಉಳಿಸಿಕೊಂಡಿದೆ. ರತ್ನಾಕರವರ್ಣಿಯ 'ಭರತೇಶ ವೈಭವ' ಮಹಾಕಾವ್ಯವೊಂದು ರಸಭರಿತ ಹಣ್ಣು. ಅದಕ್ಕೆ ಹಿಂಡಿದಷ್ಟು ಸವಿ ಹೆಚ್ಚು. ಮೂಡಬಿದಿರೆಯ ಮಣ್ಣಿಂದ ಉದಿಸಿದ ಕವಿ

ಅಲ್ಲಿನ ಸತ್ವಗಳನ್ನೂ ಪದ್ಯದಲ್ಲಿ ಸಾಧಿತಗೊಳಿಸಿರುವುದನ್ನು ಓದುತ್ತ ಹೋದಂತೆಲ್ಲ ಮೈನವಿರೇಳುತ್ತದೆ; ಅದು ಸಹೃದಯನಿಗೆ ದಕ್ಕುವ ಇನ್ನೊಂದು ಮಗ್ಗುಲಿನ ಸಾರ್ಥಕ್ಯತೆಯೆನ್ನಬಹುದು. "ಕಲೆಯನಲ್ಲದೆ ಶಿಲ್ಪಿ ಶಿಲೆಯನೇನ್ ಸೃಷ್ಟಿಪನೆ" ಎಂದು ಕವಿ ಕುವೆಂಪು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಸಾಹಿತ್ಯ ನಿಂತ ನೀರಲ್ಲ, ಹರಿವ ಗಂಗೆ. ಪ್ರಾಚೀನ ಕಾಲದಿಂದಲೂ ಯುಗ ಯುಗಗಳನ್ನು ದಾಟಿ ಆಯಾ ಕಾಲದ ಅನುಭವಗಳನ್ನು ತುಂಬಿಕೊಂಡು, ಶ್ರೀಮಂತವಾಗಿ ಬೆಳೆಯುತ್ತ ಬಂದಿದೆ. 'ಕವಿ ಕಾಲದ ಶಿಶು' ಎಂಬ ಮಾತಿದೆ. ಬದುಕು ಸಮಾಜದಲ್ಲಿ ತಲೆದೋರಿದ ಸಂಗತಿಗಳು ಸಾಹಿತ್ಯದಲ್ಲಿ ಕಾಣಿಸಿಕೊಂಡಿರುತ್ತದೆ. ಸಾಹಿತಿಯಾದವನು ಇದೆಲ್ಲದರ ಪ್ರೇಕ್ಷಕನಾಗಿ ಉಳಿದಿರಲು ಸಾಧ್ಯವಿಲ್ಲ. ಅದರ ಜೊತೆಗೆ ಸ್ಪಂದಿಸುತ್ತ, ಅವನ್ನೆಲ್ಲ ತನ್ನದೇ ಆದ ರೀತಿಯಲ್ಲಿ ದಾಖಲಿಸುತ್ತ ಹೋಗುತ್ತಾನೆ. ಕವಿಯ ಮನೋಧರ್ಮಕ್ಕನುಸಾರವಾಗಿ, ಕಾಲಧರ್ಮಕ್ಕನುಸಾರವಾಗಿ, ಕವಿ ಪ್ರತಿಭೆಯ ಸತ್ವವನ್ನೊಳಗೊಂಡು ಅವು ರೂಪುಗೊಳ್ಳುವ ಬಗೆಯೇ ಹೊಸ ಸಾಹಿತ್ಯ ಸೃಷ್ಟಿ"[೧೩] ರತ್ನಾಕರವರ್ಣಿಯ 'ಭರತೇಶ ವೈಭವ'ವನ್ನು ಓದಿದಾಗ ಈ ಬರಹದಲ್ಲಿ ಹೇಳಿರುವ ಮಾತುಗಳು ನಿಜವೆನ್ನಿಸುತ್ತದೆ. ಕಾಲಮನೋಧರ್ಮದಲ್ಲಿ ಕವಿಯ ಸತ್ವವು ಕೃತಿಯಲ್ಲಿ ಹೇಗೆ ಮೈದಳೆಯುತ್ತದೆ ಎನ್ನುವುದಕ್ಕೆ ಕವಿ ರತ್ನಾಕರವರ್ಣಿ ಮತ್ತು ಅವನ ಕೃತಿ ಸಾಕ್ಷೀಭೂತವಾಗಿ ನಿಲ್ಲುತ್ತದೆ.

ಇ. ಅಕ್ಷತೆ, ಶೋಭನ ಪ್ರಸ್ತ, ಕಳಸ–ಕನ್ನಡಿ

ಭಾರತೀಯ ಸಂಪ್ರದಾಯದಲ್ಲಿ ನಿಶ್ಚಿತಾರ್ಥ, ವಿವಾಹ, ಸೀಮಂತ... ಇತ್ಯಾದಿ ಶುಭ ಸಮಾರಂಭಗಳಲ್ಲಿ ವಧೂವರರ ಶಿರದ ಮೇಲೆ ಅಕ್ಷತೆಯನ್ನಿಕ್ಕಿ ಹರಸುತ್ತಾರೆ. ದೇ. ಜವರೇಗೌಡರು ತಮ್ಮ 'ಜಾನಪದ ಅಧ್ಯಯನ' ಎಂಬ ಗ್ರಂಥದಲ್ಲಿ ಈ ಪದ್ಧತಿಯನ್ನು 'ಫಲವತ್ತತೆಯ ಸಂಕೇತ' ಎಂದು ಹೇಳಿದ್ದಾರೆ. ಮತೀಯ ನೆಲೆಗಟ್ಟಿನಲ್ಲಿ ನೋಡುವುದಾದರೆ ಇದು ಕೇವಲ ಜೈನಧರ್ಮಕ್ಕೆ ಮಾತ್ರ ಸಂಬಂಧಿಸಿದ್ದಲ್ಲ; ಸಾಧಾರಣವಾಗಿ ಹಿಂದೂ ಧರ್ಮದ ಎಲ್ಲಾ ಜಾತಿಗಳಲ್ಲೂ ಈ ಪದ್ಧತಿಯಿದೆ. ತುಳುನಾಡಿನ ಎಲ್ಲಾ ಶುಭ ಸಮಾರಂಭಗಳಲ್ಲೂ ಈ ಪದ್ಧತಿ ಹಾಸುಹೊಕ್ಕಾಗಿದೆ. ಜೈನರು ಬೆಳ್ತಿಗೆ ಅಕ್ಕಿಯನ್ನು ಉಪಯೋಗಿಸಿದರೆ ಹಿಂದೂಗಳಲ್ಲಿ ಕೆಲವರು ಕುಚ್ಚಿಗೆ ಅಕ್ಕಿಯನ್ನೂ, ಇನ್ನು ಕೆಲವರು ಕುಂಕುಮ, ಅರಶಿನ ಬೆರೆಸಿದ ಬೆಳ್ತಿಗೆ ಅಕ್ಕಿಯನ್ನೂ ಉಪಯೋಗಿಸುತ್ತಾರೆ. ತುಳುನಾಡಿನ ಬೇರೆ ಬೇರೆ ಜಾತಿಗಳಲ್ಲಿ ಭಿನ್ನ ಭಿನ್ನ ಕ್ರಮ ಜಾರಿಯಲ್ಲಿದೆ. ಮೂಡುಬಿದಿರೆಯ ಸುತ್ತಮುತ್ತಲಿನ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಸಾರ್ವತ್ರಿಕವಾಗಿ ಬೆಳ್ತಿಗೆ ಅಕ್ಕಿಯನ್ನೇ ಉಪಯೋಗಿಸುತ್ತಾರೆ. ರತ್ನಾಕರವರ್ಣಿಯು ಕಾವ್ಯದ ಅನೇಕ ಪದ್ಯಗಳಲ್ಲಿ ಹೀಗೆ ವರ್ಣಿಸಿದ್ದಾನೆ;

> ಪರಮಮಂತ್ರವನೋದಿ ಮುತ್ತಿನಕ್ಷತೆಗಳ । ಹರಸಿ ದಂಪತಿಗಳಿಗಿಡುತ ॥
> ತಿರುಗಿ ಮತ್ತಾಯತವೇಯಂಬರದಕೆ ಚೆ । ಚ್ಚರ ದೊಳಾಯತವೆಂಬರೊಸೆದು ॥೨೧॥
>
> ಕೂಡೆ ಗಂಗಾದೇವಿ ಸಿಂಧುದೇವಿಯರೆದ್ದು । ಜೋಡಾಗಿ ಮುತ್ತಿನಕ್ಷತೆಯಾ ॥
> ಗಾಡಿಯೊಳ್ಪರಸಿ ದಂಪತಿಗಳಿಗಿಟ್ಟರು । ಪಾಡುವಧವಲ ಶೋಭನದಿ ॥೭೯॥

ಸೇಸೆಯನಿಕ್ಕಿದ ತಂಗಿಯರಿಗೆ ಮಂಗ । ಲಾಸನಗೊಡಿಸಿ ರಾಜೇಂದ್ರ ॥
ಬಾ ಸಿಂಧು ದೇವಿ ಗಂಗಮ್ಮಿ ಕುಳ್ಳಿರಿರೆನ । ಲಾಸುದತಿಯರು ಕುಳಿತರು ॥೧೫॥

ಪರಿಪೂರ್ಣವಾಗೆ ಶೃಂಗಾರ ನೀರಾಜನ । ವಿರಚನಗೈದು ದಾದಿಯರು ॥
ಭರತರಾಜೇಂದ್ರನ ಮನದ ಸೋಲಿಸಿಯೆಂದು । ಹರಸಿ ಸೇಸೆಗಳನಿಕ್ಕಿದರು ॥೫೪॥

ಉತ್ತಮಬುಧರು ಸಿದ್ಧಾಂತ ಮಂತ್ರವನೋದಿ । ಮುತ್ತಿನ ನಕ್ಷತೆಗಳನಿಡುತ ॥
ಮತ್ತಡಿಗಡಿಗೊಡನಾಯತವೆಯೆಂಬ । ರುತ್ತಮಾಯತವೆಂಬರದಕೆ ॥೯೦॥[೧೪]

ಸಂಪ್ರದಾಯಗಳಲ್ಲಿ ಪ್ರಾದೇಶಿಕ ಭಿನ್ನತೆಯಿದ್ದಂತೆ ಪ್ರಾದೇಶಿಕ ಏಕತೆಯೂ ಇದೆ. ಜೈನರು, ಬಂಟರು ಹಾಗೂ ಇತರರಲ್ಲಿ ಪ್ರತಿಯೊಂದು ಶುಭ ಸಮಾರಂಭಗಳಲ್ಲಿಯೂ ಸುಮಂಗಲಿಯರು ಶೋಭನವನ್ನು ಹೇಳುವ ಸಂಪ್ರದಾಯವಿದೆ. ಮದುವೆ, ಸೀಮಂತಗಳಲ್ಲಿ ವಧೂವರರಿಗೆ, ಸೀಮಂತಿನಿಗೆ ಮುತ್ತೈದೆಯರು ಆರತಿ ಎತ್ತುವ ಸಂದರ್ಭದಲ್ಲಿ ಸಂದರ್ಭೋಚಿತವಾಗಿ ಹಾಡುತ್ತಾರೆ. 'ಭರತೇಶ ವೈಭವ'ದ ಹಲವಾರು ಮಂಗಳ ಪ್ರಸಂಗಗಳಲ್ಲಿ ಶೋಭನದ ಉಲ್ಲೇಖವಿದೆ;

ಸವಿಸವಿಯಾಗಿ ಸಂಭ್ರಮವಾಗಿ ಕೋಕಿಲ ।ರವದಂತೆ ಮಿಂಚುಂಚವಾಗಿ ॥
ಧವಳ ಶೋಭನಗಳ ಪಾಡುತ್ತಿರ್ದರು ಖಗ । ಯುವತಿಯರಾ ಸಮಯದೊಳು ॥೬೯॥

ಮಂಗಲಧವಳಶೋಭನಗಳ ಸತಿಯರು । ಭೃಂಗಾಳಿಯಂತೆ ಪಾಡುತಿರೆ
ಮಂಗಲಾಷ್ಟಕ ಪೂರ್ಣವಾಗೆ ಮಧ್ಯದ ತೆರೆ । ಪಿಂಗಿತು ಜಯಜಯವೆನಲು ॥೯೧॥

ಶೋಭನ ಶೋಭನ ಮಂಗಲಜಯಜಯ । ಲಾಭ ಉತ್ತಮ ಸಿದ್ಧಿಯೆಂಬ ॥
ವೈಭವದೊಳು ಹೆಂಗಳಂಗುಲಿವಿಡಿದನಾ । ಶ್ರೀ ಭರತೇಶನೋಜೆಯೊಳು ॥೯೫॥

ಸಂಗೀತಧವಳ ಶೋಭನ ನಿಲ್ಲೆ ನೃಪ ತನ್ನ । ತಂಗಿಯರ್ಗುಡುಗೊರೆಯಿತ್ತು ॥
ಅಂಗನೆಯರ ಕೈಯ ಪಿಡಿದುಡುಗೊರೆಯಿತ್ತು । ಸಂಗಡೆಲ್ಲರನು ಮನ್ನಿಸಿದ ॥೮೭॥[೧೫]

ತುಳುನಾಡಿನ ಧಾರ್ಮಿಕ ಪರಂಪರೆ ವಿಶಿಷ್ಟವಾದುದು. ಇಲ್ಲಿನ ಜೈನರಲ್ಲಿ ಹಾಗೂ ಅನೇಕ ಹಿಂದೂ ಒಳಪಂಗಡಗಳಲ್ಲಿ ಮದುವೆಯ ದಿನದಂದು ವಧುವಿನ ಕಡೆಯವರನ್ನು ಎದುರ್ಗೊಳ್ಳುವ ಸಂದರ್ಭದಲ್ಲಿ ವರನ ಸಹೋದರಿ ಇತರ ಸಂಬಂಧಿಕರೊಡನೆ ಹೂ, ಕಲಶ, ಕನ್ನಡಿ, ಪನ್ನೀರು ಇತ್ಯಾದಿ ಮಂಗಲ ಪ್ರಸಾದನಗಳೊಂದಿಗೆ ಎದುರ್ಗೊಳ್ಳುತ್ತಾಳೆ. ಅತೀ ಪ್ರಾಚೀನ ಕಾಲದಿಂದಲೂ ಈ ಸಂಪ್ರದಾಯ ಆಚರಣೆಯಲ್ಲಿದೆ. ದಿಬ್ಬಣವನ್ನು ಎದುರ್ಗೊಳ್ಳುವ ಸಂದರ್ಭದಲ್ಲಿ ವರನ ಸಹೋದರಿ ವಧುವಿಗೆ ಹಾಗೂ ಇತರ ಸುಮಂಗಲಿಯರಿಗೆ ಪನ್ನೀರನ್ನು ಚಿಮುಕಿಸಿ, ಕುಂಕುಮವನ್ನು ಹಚ್ಚಿ, ಹೂವನ್ನು ಕೊಟ್ಟು ಎದುರ್ಗೊಳ್ಳುತ್ತಾಳೆ. 'ಭರತೇಶ ವೈಭವ' ಮಹಾಕಾವ್ಯದ ಹೆಜ್ಜೆ ಹೆಜ್ಜೆಗೂ ಈ ಸಂಪ್ರದಾಯಗಳು ನಮಗೆ ಗೋಚರಿಸುತ್ತವೆ.

"ಮಹಾಕಾವ್ಯ ತನ್ನ ಕಾಲದ ಅಪ್ರಜ್ಞಾಪೂರ್ವಕವಾದ ಜೀವನತತ್ವಗಳ ಸಮಷ್ಟಿ ರೂಪವನ್ನು ಪ್ರತಿಬಿಂಬಿಸುವುದಲ್ಲದೆ ಅದನ್ನು ಪ್ರಸಿದ್ಧವಾದ ಪೌರಾಣಿಕ ಅಥವಾ ಐತಿಹಾಸಿಕ ಕಥೆಯೊಂದನ್ನು ಅವಲಂಬಿಸಿ ನಿರ್ವಹಿಸಬೇಕೆಂಬ ಅಂಬರ್ ಕ್ರೊಂಬಿಯ ಮಾತು ಇಲ್ಲಿ ಗಮನಾರ್ಹವಾದದ್ದು. ಕಥೆಯೇ ಆಗಲೀ ಜನಮನವನ್ನು ಹೊಕ್ಕು ಅವರ ಮಾನಸಿಕ ಸಾಮಾಗ್ರಿಯಾಗಿ ಪರಂಪರೆಯಿಂದ ಬೆಳೆದುಕೊಂಡು ಬಂದಿದ್ದರೆ ಅದರ ಮೂಲಕ ಬದಲಾದ ಪರಿಸರದ ಮೌಲ್ಯಗಳನ್ನು ಸಮಷ್ಟಿ ಮನಸ್ಸಿನ ಆಶಯಗಳನ್ನು ಪ್ರತಿಬಿಂಬಿಸುವುದು ಸುಲಭವಾಗುತ್ತದೆ."[೧೧] ಹೀಗೆ ರತ್ನಾಕರವರ್ಣಿಯು ತನ್ನ 'ಭರತೇಶ ವೈಭವ' ಮಹಾಕಾವ್ಯದಲ್ಲಿ ತುಳುನಾಡಿನ ಬದುಕಿನ ಸಾಂಸ್ಕೃತಿಕ ಚಿತ್ರಣಗಳನ್ನು ಕೆತ್ತಿ ಒಂದು ಅದ್ಭುತವಾದ ಶಿಲ್ಪವಾಗಿಸಿದ್ದಾನೆ.

ತುಳುನಾಡಿನ ಶುಭ ಸಮಾರಂಭಗಳಲ್ಲಿರುವ ಕಲಶ ಕನ್ನಡಿ ಸಂಪ್ರದಾಯದ ಅನೇಕ ಪದ್ಯಗಳು ಭರತೇಶ ವೈಭವದಲ್ಲಿದೆ.

ಕಳಸಕನ್ನಡಿಯಕನ್ನಿಕೆಯರು ಮುಂದೆಡ । ಬಲದಿ ಮಂಗಲಗಾಯಕರು ॥
ಹೊಳೆವಾರತಿ ತಮ್ಮ ಹಸ್ತದೊಳೆಸೆಯಲು । ಕುಲಸತಿಯರು ಬಂದರಾಗ ॥೭೬॥

ಆರತಿಕಲಶಕನ್ನಡಿಯಿಂದ ಪಾತ್ರದಾ ವಾರನಾರಿಯರೊಡಗೂಡಿ ॥
ಸಾರತಿಯಯ್ತುಂದು ನಿವಾಳಿಯಿಟ್ಟೆಲ್ಲರು । ವೀರರಿಗೆರಗಿ ನಡೆದರು ॥೮೭॥

ಕಳಸಕನ್ನಡಿಯ ಹೆಂಗಳು ಮುಂದೆ ಕ್ಷತ್ರಿಯ । ಬಲ ಹಿಂದೆ ಬರಲೈದೆ ಬಂದು ॥
ಒಳುನುಡಿಯಿಂದ ಕೈ ಮುಗಿದು ವಿನಮಿರಾಜ । ಗುಳಿದವರ್ಗುಚಿತವ ನುಡಿದಾ ॥೬೩॥

ನೇಜಿಯ ಪಲ್ಲದ ಸತ್ತಿಗೆಯಿಂದಭಿ । ರಾಜಿಪ ಕಳಸ ಕನ್ನಡಿಯ ॥
ಪೂಜಿತ ಕನ್ನೆಯರಿಂದ ಸಂಧಿಸಿ ನಮಿ । ರಾಜಗೆ ಮಂತ್ರಿ ಕೈಮುಗಿದಾ ॥೭॥

ಕಲಸಗನ್ನಡಿಕೂಡಿ ತೋರಣ ಶೃಂಗಾರ । ದಳವಟ್ಟ ತೇರಾನೆಕುದುರೆ ॥
ತಳಮೇಲೆ ನರ್ತಿಪ ಪಾತ್ರಗೀತಗಳಿಂದ । ಬಲವರ್ದಿಂದುದಾ ನೃಪಗೆ ॥೩೦॥[೧೭]

ಸ್ಥಳೀಯ ಸಂಸ್ಕೃತಿ ಮತ್ತು ಜೈನಧರ್ಮ ಒಂದರ ಪ್ರಭಾವಕ್ಕೆ ಇನ್ನೊಂದು ಒಳಗಾಗಿ ಪರಸ್ಪರ ಆಂತರಿಕ ಕೊಳುಕೊಡುಗೆಯಿಂದ ಒಂದು ವಿಶಿಷ್ಟ ಸಂಸ್ಕೃತಿ ರೂಪುಗೊಂಡಿದೆ. ಜೈನಧರ್ಮವು ತುಳು ಸಂಸ್ಕೃತಿಯೊಡನೆ ಇಟ್ಟುಕೊಂಡ ಸೌಹಾರ್ದಾಯುತವಾದ ಸಂಬಂಧದಿಂದಾಗಿ ಅನೇಕ ಸಂಪ್ರದಾಯಗಳು ಸಾರ್ವತ್ರಿಕವಾಗಿ ಅಚರಣೆಯಲ್ಲಿವೆ.

ಈ. ಜಾತಕರ್ಮ, ನಾಮಕರಣ

"ತುಳುನಾಡಿನ ಜೈನಮತೀಯರ ಧಾರ್ಮಿಕ ಆಚರಣೆಗಳಲ್ಲಿ 'ಷೋಡಶ ಕ್ರಿಯೆ'ಯು ಬಹಳ ಮುಖ್ಯವಾದುದು. ಈ ಷೋಡಶ ಕ್ರಿಯೆಗಳನ್ನು 'ಷೋಡಶ ಸಂಸ್ಕಾರ'ಗಳೆಂದು ಕರೆಯುತ್ತಾರೆ. ಪ್ರತಿಯೊಬ್ಬ

ವ್ಯಕ್ತಿಯು ಹುಟ್ಟಿನಿಂದ ಮೊದಲ್ಗೊಂಡು ಮರಣದವರೆಗಿನ ವಿವಿದ ಹಂತಗಳಲ್ಲಿ ಪಾಲಿಸಲೇಬೇಕಾದ ವಿಧಿಗಳಿವು. ಜೀವನದ ಒಂದೊಂದು ತಿರುವಿನಲ್ಲೂ ಧಾರ್ಮಿಕತೆಯನ್ನು ತುಂಬಿ, ಆ ಘಟ್ಟದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಡುವುದು ಇವುಗಳ ಉದ್ದೇಶವಾಗಿದೆ. ಜೈನ ಶಾಸ್ತ್ರ ಗ್ರಂಥಗಳಲ್ಲಿ ಇವುಗಳನ್ನು ಹೇಗೆ ಆಚರಿಸಬೇಕೆನ್ನುವುದನ್ನು ಕುರಿತು ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.”[೧೮]

“ಸಂಸ್ಕಾರವೆಂಬ ಮಾತಿಗೆ ಇಂಗ್ಲಿಷ್‌ನಲ್ಲಿ SACRAMENT CEREMONY ಎಂಬ ಅರ್ಥವನ್ನು ನೀಡಲಾಗಿದೆ”[೧೯] ಆದರೆ ಇವು ನಮ್ಮಲ್ಲಿ ಬಳಕೆಯಲ್ಲಿರುವ ಸಂಸ್ಕಾರ ಶಬ್ದದ ಪೂರ್ತಿಯಾದ ಅರ್ಥವನ್ನು ಕೊಡುವುದಿಲ್ಲ. “ಸಂಸ್ಕಾರವೆಂದರೆ ಧಾರ್ಮಿಕವೂ ಪವಿತ್ರವೂ ಎನಿಸಿದ ಕಾರ್ಯಾನುಚರಣೆಗಳ ಅನುಷ್ಠಾನದಿಂದ ಉಂಟಾಗುವ ಒಂದು ವಿಶಿಷ್ಟವಾದ ಶ್ರೇಷ್ಠತೆ”[೨೦]ಯೆಂದು ಅರ್ಥಮಾಡಲಾಗುತ್ತಿದೆ. ದೇಹ ಮನಸ್ಸುಗಳಿಗೆ ಸಂಸ್ಕಾರಗಳು ಉಂಟಾದಾಗ ಒಂದು ರೀತಿಯ ಪವಿತ್ರತೆಯ ಅರಿವು ಈತನಲ್ಲಿ ಉಂಟಾಗುತ್ತದೆ. ಕಾಳಿದಾಸನು ಸಂಸ್ಕಾರದ ಬಗ್ಗೆ ವಿವರಿಸಿರುವ ಮಾತನ್ನು ಹೀಗೆ ವಿವರಿಸಬಹುದು. “ಹುಟ್ಟಿ ಬಂದಾಗ ಮನುಷ್ಯನ ದೇಹವು ಖನಿಯಿಂದ ಆಗ ತಾನೆ ಹೊರತೆಗೆದ ಅಶುದ್ಧ ರಕ್ತದಂತಿರುತ್ತದೆ. ಆದರೆ ಅದು ಶುದ್ಧಿಯನ್ನು ಹೊಂದಿ ರತ್ನಶೋಧಕನ ಕೈಯಿಂದ ಕಾಂತಿಯನ್ನು ಪಡೆಯುವಂತೆ ಸಂಸ್ಕಾರಗಳಿಂದ ಮನುಷ್ಯನ ಮನಸ್ಸು ಒಂದು ರೀತಿಯ ಹದವನ್ನೂ ಓಜಸ್ಸನ್ನೂ ಪಡೆಯುತ್ತದೆ”[೨೧] ಸಂಸ್ಕಾರವೆನ್ನುವುದು ಮನುಷ್ಯನ ಬದುಕನ್ನು ಒಂದು ಹದಕ್ಕೆ ಪಾಕಗೊಳಿಸುತ್ತದೆ. ಸಂಸ್ಕಾರಗೊಂಡ ವ್ಯಕ್ತಿಜೀವನವು ಸಾಂಪ್ರದಾಯಿಕವಾದ ಹಲವಾರು ಕಟ್ಟುಕಟ್ಟಳೆಗಳಿಗೆ ಒಳಗಾಗಿರುತ್ತದೆ.

ತುಳುನಾಡಿನ ಜೈನರ ಅನೇಕ ಸಂಪ್ರದಾಯಗಳೂ, ಸಂಸ್ಕಾರಗಳೂ ರತ್ನಾಕರವರ್ಣಿಯ ‘ಭರತೇಶ ವೈಭವ’ದಲ್ಲಿ ನಮಗೆ ಕಾಣಸಿಗುತ್ತವೆ. ಇದರಲ್ಲಿ ಜಾತಕರ್ಮ ಮತ್ತು ನಾಮಕರಣ ಸಂಸ್ಕಾರಗಳು ಮುಖ್ಯವಾದುವುದಾಗಿದೆ. ಭರತೇಶನ ದಿಗ್ವಿಜಯದಲ್ಲಿ ಆತನಿಗೆ ಹೆಜ್ಜೆಗೊಂದರಂತೆ ವಿವಾಹೋತ್ಸವಗಳೂ, ಪುತ್ರೋತ್ಸವಗಳೂ ಜರುಗುತ್ತದೆ. ಪ್ರಸ್ತುತ, ಕಾವ್ಯದ ‘ವಿಜಯಾರ್ಧ ದರ್ಶನ’ ಸಂಧಿಯಲ್ಲಿ ಭರತೇಶನು ದಿಗ್ವಿಜಯದಲ್ಲಿದ್ದಾಗ ಒಂದು ದಿನ ಅತ್ತ ಅತಃಪುರದಲ್ಲಿ ಆತನ ಕಾಂತೆಯರಾದ ಶ್ರೀಮಾಲೆ, ವನಮಾಲೆ, ಹೇಮಾಜಿ, ಗುಣದೇವ, ಮಣಿದೇವಿಯರು ಪಂಚಪುತ್ರರನ್ನು ಹಡೆಯುತ್ತಾರೆ. ಸುತರಾದ ಸಿಹಿಸುದ್ದಿಯನ್ನು ತಂದ ದಾಸಿಯರಿಗೆ ಸಕಲ ಸಮ್ಮಾನಗಳನ್ನು ಮಾಡಿದ ಭರತೇಶನು ಅಂತಃಪುರದೆಡೆಗೆ ನಡೆಯುತ್ತಾನೆ. ಐವರು ಮಕ್ಕಳ ಮುಖದರ್ಶನವನ್ನು ಮಾಡಿ ಉತ್ತಮವಾದ ರೀತಿಯಲ್ಲಿ ಜಾತಕರ್ಮವನ್ನು ರಚಿಸಿ, ನಾಮಕರಣೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾನೆ. ಮಕ್ಕಳಿಗೆ ಹಂಸರಾಜ, ನಿರಂಜನ ಸಿದ್ಧರಾಜ, ಮಹಾಂಶರಾಜ, ರತ್ನರಾಜ, ಸಂಸುಖರಾಜ ಎಂದು ನಾಮಕರಣ ಮಾಡುತ್ತಾನೆ. ಈ ಭಾಗವು ಪದ್ಯದಲ್ಲಿ ಇಂತಿದೆ:

ಸಂಚಯ ಸಭೆಯಲ್ಲಿ ನೃಪನಿರುತಿರಲತ್ತ । ಮಿಂಚುವೆತ್ತರಮನೆಯೊಳಗೆ ॥
ಪಂಚಕಾಂತೆಯರು ಪೆತ್ತರು ಪಂಚಪುತ್ರರ । ಪಂಚರತ್ನವ ಪಡೆದಂತೆ ॥೩೧॥

ಶ್ರೀಮಾಲೆ ವನಮಾಲೆ ಗುಣದೇವಿ ಮಣಿದೇವಿ । ಹೇಮಾಜಿಯೆಂಬ ಕಾಂತೆಯರು ॥
ಕ್ಷೇಮದೊಳೈವರುಪುತ್ರರ ಪಡೆದರು । ಕಾಮನ್ನೈಸರಲ ನಗುವರ ॥೩೨॥

ರಾಣಿಯರರ್ತಿವಟ್ಟೊಸಗೆಯ ನೃಪನಿದ್ದ । ತಾಣಕೆ ಕಳುಹುವದೊಂದು ॥
ಜಾಣತನವನೇನೆಂಬೆನವರನುರೆ ನೆರೆ । ಜಾಣನರ್ಧಾಂಗಿಯರಲ್ತೆ ॥೩೩॥

ಕದಬೊದವಾಗಿ ಹೆಂಗಳು ಹೋಗಿ ನೃಪಗೆ ಹೇ । ಳಿದೊಡಣ್ಣತಮ್ಮನಿಂತೆಂದು ॥
ಮೊದಲು ಕಡೆಯೊಳು ಹುಟ್ಟಿದನರಿಯಬಾರ । ದದಕೆ ಯೋಚಿಸಿ ಕಳುಹಿದರು ॥೩೪॥

ಆಸ್ಥಾನದೊಳು ಸತಿಯರ ನಾಮ ಸಲ್ಲದಂ । ತಸ್ಥದೊಳ್ ಪತಿಕೇಳತೀಕೆ ॥
ಈ ಸ್ಥಿತಿಗವರ ಹೆಗ್ಗುರುಹಿನವರನಟ್ಟೆ । ಸ್ವಸ್ಥವೆಂದೆಣಿಸಿದರವರು ॥೩೫॥

ಬಾಲರೊಬ್ಬೊಬ್ಬರ ಹಿಂದೊಗೆದಂತೆ ಶ್ರೀ । ಮಾಲೆ ಮುಂತಾದ ನಾರಿಯರೂ ॥
ಊಳಿಗವೆಂಗಳೈವರನೊಂದುಗೂಡದೆ । ಸಾಲಾಗಿ ಕಳುಹಿದರಾಗ ॥೩೬॥

ಒಬ್ಬೊಬ್ಬರೆಡೆಗೆ ನಾಲ್ಕೆಂಟುದೂರಷ್ಟ ಬಿ । ಟ್ಟೊಬ್ಬುಳಿಯೊಂದೆ ಸಾಲಾಗಿ ॥
ಉಬ್ಬಿನೊಳೋಡಿ ಬಪ್ಪರ ಕಂಡು ಸುತರಾದ । ಕೊಬ್ಬೆಂದು ತಿಳಿದನಾ ಚಕ್ರಿ ॥೩೭॥

ಶ್ರೀಮಾಲೆಯೂಳಿಗದವಳೆಯ್ದಿ ನಗುತೆಲೆ । ಸ್ವಾಮಿ ನಮ್ಮಮ್ಮಾಜಿಯಿಂದು
ಕೋಮಲಸುತನ ಪಡೆದಳೆನಲೊಂದು ಮು । ಕ್ತಾಮಾಲೆಯಿತ್ತನವಳಿಗೆ ॥೩೮॥

ವನಮಾಲೆಯೂಳಿಗದವಳೆಯ್ದಿ ಸ್ವಾಮಿ ಚೆ । ಲ್ವೆನಿಸಲೆಮ್ಮಮ್ಮಾಜಿಯಿಂದು ॥
ತನುಜನ ಪಡೆದರೆಂದೆನಲೊಡನೊಂದು ಮು ।ತ್ತಿನ ಸರವಿತ್ತನವಳಿಗೆ ॥೩೯॥

ಗುಣದೇವಯೂಳಿಗದವಳೆಯ್ದಿ ಮುದ ಚತು । ರ್ಗುಣಿಸೆ ನಮ್ಮಮ್ಮಾಜಿಯಿಂದು ॥
ಗುಣರತ್ನಸುತನ ಪಡೆದರೆನಲೊಡನೊಂದು । ಗುಣಯುಕ್ತಹಾರವನಿತ್ತ ॥೪೦॥

ಮಣಿದೇವಿಯೂಳಿಗದವಳೆಯ್ದಿ ಚಕ್ರಿಗೆ । ಮಣಿದು ನಮ್ಮಮ್ಮಾಜಿಗಿಂದು ॥
ಮಣಿಬೊಂಬೆಯಂದದ ಮಗನಾದನೆನಲೊಂದು । ಮಣಿಹಾರ ವಿತ್ತನವಳಿಗೆ ॥೪೧॥

ಬಂದು ಹೇಮಾಜಿಯೂಳಿಗದವಳಮ್ಮಾಜಿ । ಕುಂದಣಬೊಂಬೆಯಂತೆಸೆವ ॥
ಕಂದನ ಪಡೆದರೆಂದೆನಲವಳಿಗೆ ನಲಿ ।ದೊಂದು ಮುತ್ತಿನ ಸರವಿತ್ತಾ ॥೪೨॥

ಪರಿವಿಡಿಯಿಂದೊಬ್ಬರೊಬ್ಬರಿಗೊಂದೊಂದು । ಸರದ ಸಮಾನದೊಳೀಯೆ ॥
ಭರತ ಚಕ್ರೇಶನಿಕ್ಕಿರ್ದ ಕೊರಳ ಪಂಚ । ಸರ ಸರಿಯಾದುದ್ಯೆವರಿಗೆ ॥೪೩॥

ಪಂಚರುಕುಮಾರರೊಸಗೆಯ ಪೇಳಿದವರಿಗೆ । ಪಂಚಸರವನೊಸೆದಿತ್ತು ॥
ಪಂಚಮುಖಾಸನದೊಳು ಲೀಲಿಯಿಂದಿರ್ದ । ಪಂಚಾಸ್ತ್ರನಿರ್ಜಿತರೂಪ ॥೪೪॥

ಅರಸನಾನಂದವನಂತಿಂತುಚೆಂಬುದಂ । ತಿರಲಿ ಮಹಾಸ್ಥಾನದಲ್ಲಿ ॥
ನೆರೆದಿದ್ದರೆಲ್ಲರು ತವಗೆ ಚಕ್ರೇಶನ । ಸಿರಿ ಸಾರಿದಂತೆ ಹೆಚ್ಚಿದರು ॥೪೭॥

ಪರಿವೃತರೆಲ್ಲರನುಚಿತದಿ ಬೀಳ್ಕೊಟ್ಟು । ಗುರುನಿರಂಜನ ಸಿದ್ಧಯೆಂದು ॥
ಧರಣೀಶನಾಸ್ಥಾನದಿಂದೆದ್ದು ರಾಜಮಂ । ದಿರವ ಹೊಕ್ಕನು ವಿಳಾಸದೊಳು ॥೪೮॥

ತನಯರ್ರೈವರ ಮುಖದರ್ಶನಗೈದು ಲೇ । ಸೆನೆ ಜಾತಕರ್ಮವ ರಚಿಸಿ ॥
ಮನುವಂಶಭೂಷಣ ನಾಮಕರ್ಮದ ಪುಣ್ಯ । ದಿನದೊಳೊಪ್ಪುವ ಪೆಸರಿಟ್ಟಾ ॥೪೯॥

ಹಂಸರಾಜನು ನಿರಂಜನಸಿದ್ದರಾಜ ಮ । ಹಾಂಶುರಾಜನು ರತ್ನರಾಜ ॥
ಸಂಸುಖರಾಜನೆಂದ್ಶೆವರ ಪೆಸರಿಟ್ಟ । ಹಂಸನಾಥನ ನೆನಹಿನೊಳು ॥೫೦॥

ವಿತತಸುವಸ್ತುಗಳುಲುಪೆವೆರಸಿ ಬಂದು । ನುತನಾಮಕರಣದಿನದೊಳು ॥
ಪ್ರತಿಭಾಸದೇವನು ಚಕ್ರಿಯ ಕಂಡವ । ನತನಾಗಿ ಸಲುಗೆವಡೆದನು ॥೫೧॥[೨೨]

ಈ ಪದ್ಯಗಳಲ್ಲಿ ತುಳುನಾಡಿನ ಜೈನಮತೀಯರ ಷೋಡಶ ಸಂಸ್ಕಾರಗಳಲ್ಲಿ ಎರಡು ಸಂಸ್ಕಾರಗಳು ಉಲ್ಲೇಖಿತಗೊಂಡಿದೆ. "ಜೈನಧರ್ಮದ ಪ್ರಕಾರ ಮನುಷ್ಯನ ಹುಟ್ಟು ಆಕಸ್ಮಿಕವಲ್ಲ. ಜನ್ಮಜನ್ಮಾಂತರದ ಕರ್ಮಬಂಧಗಳ ಕಾರಣದಿಂದ ಆತ್ಮನು ರೂಪಧಾರಣೆ ಮಾಡುತ್ತಾನೆ. ದೇವ, ಮನುಷ್ಯ, ನರಕ, ತಿರ್ಯಗ್‌ವೆಂಬ ಚತುರ್ಗತಿಗಳಲ್ಲಿ ಮನುಷ್ಯ ಗತಿಯು ಶ್ರೇಷ್ಟವಾದುದು. ಏಕೆಂದರೆ ಆತ್ಮನಿಗೆ ಕಟ್ಟಿದ ಕರ್ಮಬಂಧಗಳನ್ನು ಕಳಚಿಕೊಂಡು ಮುಕ್ತಾತ್ಮನಾಗುವುದಕ್ಕೆ ಈ ಮನುಷ್ಯಜನ್ಮದಲ್ಲಿ ಮಾತ್ರ ಸಾಧ್ಯವಾಗುತ್ತದೆ. ದೇವಗತಿಗೆ ಹೋಗಿ ಸುಖವನ್ನು ಅನುಭವಿಸಿದರೂ ಅಲ್ಲಿ ಆತ್ಮನಿಗೆ ಬಿಡುಗಡೆಯಿಲ್ಲ. ಇಲ್ಲಿಯ ಜೈನಮತೀಯರಲ್ಲಿ ಆಚರಣೆಯಲ್ಲಿರುವ ಸಂಸ್ಕಾರವಿಧಿಗಳು ಹೀಗಿವೆ;

೧. ಗರ್ಭಾದಾನ ೨. ಪ್ರಮೋದ ೩. ಪುಂಸವನ ೪. ಸೀಮಂತ

೫. ಜಾತಕರ್ಮ ೬. ನಾಮಕರ್ಮ ೭. ಉಪವೇಶನ ೮. ಅನ್ನಪ್ರಾಶನ

೯. ಗಮನ ೧೦. ಚೌಲ ೧೧. ಅಕ್ಷರಾಭ್ಯಾಸ ೧೨. ಪುಸ್ತಕಗ್ರಹಣ

೧೩. ಉಪನಯನ ೧೪. ಸಮಾವರ್ತನ ೧೫. ವಿವಾಹ ೧೬. ಸಮಾಧಿ ಮರಣ.

ಮೇಲೆ ವಿವರಿಸಿದ ಹದಿನಾರು ಸಂಸ್ಕಾರಗಳಲ್ಲಿ ಕೆಲವು ಸಂಸ್ಕಾರಗಳು ಮಾತ್ರ ಇಲ್ಲಿ ಆಚರಣೆಯಲ್ಲಿದೆ. ಉದಾಹರಣೆಗೆ ಗರ್ಭಾದಾನ, ಸೀಮಂತ, ಜಾತಕರ್ಮ, ಚೌಲ, ಉಪನಯನ, ಸಮಾವರ್ತನ, ವಿವಾಹ ಇವಿಷ್ಟು ಈಗ ಆಚರಣೆಯಲ್ಲಿ ಕಂಡುಬರುವ ಸಂಸ್ಕಾರಗಳು. ಮಿಕ್ಕವು ಕಣ್ಮರೆಯಾಗುತ್ತ ಬಂದಿವೆ."[೨೩]

'ಗರ್ಭಾದಾನ' ಎನ್ನುವುದು ಗೃಹಸ್ಥ ಜೀವನದಲ್ಲಿ ಪವಿತ್ರವಾದ ಕಾರ್ಯವಾಗಿದೆ. ಇದು ಗೃಹಸ್ಥನ ಕರ್ತವ್ಯವೂ ಹೌದು. ವಿವಾಹಿತ ದಂಪತಿಗಳು ಯುಕ್ತ ಸಮಯದಲ್ಲಿ ಒಂದಾಗಿ ವಂಶೋದ್ಧಾರಕ್ಕಾಗಿ ಗಂಡು ಮಗುವನ್ನು ಪಡೆಯಬೇಕೆನ್ನುವುದು ಇದರ ಹಿಂದಿರುವ ಉದ್ದೇಶವಾಗಿದೆ. ತುಳುನಾಡಿನ

ಜೈನಮತೀಯರಲ್ಲಿ ವಿವಾಹದ ಅನಂತರ, ದಂಪತಿಗಳ ಪ್ರಥಮ ಸಮಾಗಮವನ್ನು ನಿಷೇಕಶಾಸ್ತ್ರದ ಮೂಲಕ ಆಚರಿಸುವ ಪದ್ಧತಿಯಿದೆ.

ಸ್ತ್ರೀಯು ಗರ್ಭಿಣಿಯೆಂದು ಖಚಿತವಾಗಿ ತಿಳಿದ ಮೇಲೆ, ಮೂರನೆಯ ತಿಂಗಳಲ್ಲಿ ಗರ್ಭಿಣಿಗೆ ಮಾಡತಕ್ಕ ಕ್ರಿಯೆಗಳಿಗೆ 'ಪ್ರಮೋದ' ಎಂದು ಹೆಸರು. 'ಪ್ರಮೋದ'ವೆಂದರೆ 'ಪ್ರೀತಿ' ಎಂದರ್ಥ. ಆ ಸಂದರ್ಭದಲ್ಲಿ ಪತಿಪತ್ನಿಯರನ್ನು ಅಭಿಮುಖವಾಗಿ ಕುಳ್ಳಿರಿಸಿ, ಪತಿಯಿಂದ ಪತ್ನಿಯ ಹೊಟ್ಟೆಯ ಮೇಲೆ ದರ್ಭೆಯಿಂದ ಮಂತ್ರಪೂರ್ವಕವಾಗಿ ಪುಣ್ಯಜಲ, ಮಂತ್ರಾಕ್ಷತೆಯ ಸೇಚನೆಯನ್ನು ಮಾಡಿಸಿ ಆಶೀರ್ವಾದ ಮಾಡಿಸುತ್ತಾರೆ. 'ಪುಂಸವನ' ಕ್ರಿಯೆಯನ್ನು ಐದನೆಯ ತಿಂಗಳಲ್ಲಿ ಮಾಡಿಸುತ್ತಾರೆ. ಗರ್ಭಿಣಿಯ ಗರ್ಭವನ್ನು ಶುದ್ಧಗೊಳಿಸುವುದು ಎಂದರ್ಥ. ಗರ್ಭಿಣಿಗೆ ಏಳನೆಯ ತಿಂಗಳಲ್ಲಿ ತಲೆಗೂದಲಿನ ಮಧ್ಯದಲ್ಲಿ ಬೈತಲೆಯನ್ನು ಬಿಡಿಸಿ ಕೆಲವು ವಿಧಿಯನ್ನು ನಡೆಸುತ್ತಾರೆ. ಇದಕ್ಕೆ 'ಸೀಮಂತ ಕ್ರಿಯೆ' ಅಥವಾ 'ಬಯಕೆ' ಶಾಸ್ತ್ರವೆಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ 'ಶಾಂತಿರಕ್ಷಾರ್ಥ'ವೆಂಬ ಅನೇಕ ಕ್ರಿಯೆಗಳನ್ನು ನಡೆಸುತ್ತಾರೆ.

ಮೊಟ್ಟಮೊದಲು ಮನೆಯ ಹೊಸ್ತಿಲನ್ನು ದಾಟಿ, ಮಗುವನ್ನು ಹೊರಗೆ ತರುವ ಈ ಆಚರಣೆಗೆ 'ಬಹಿರ್ಯಾನ'ವೆನ್ನುತ್ತಾರೆ. ಮಗು ಹುಟ್ಟಿದ ಮೂರು ಅಥವಾ ಐದು ತಿಂಗಳಲ್ಲಿ ಇದನ್ನು ಆಚರಿಸಲಾಗುತ್ತದೆ. ಮಗು ಹುಟ್ಟಿ ಏಳನೆಯ ತಿಂಗಳಲ್ಲಿ 'ಅನ್ನಪ್ರಾಶನ'ವನ್ನು ನಡೆಸುತ್ತಾರೆ. 'ಗಮನಕ್ರಿಯೆ'ಯೆಂದರೆ ಮಗುವನ್ನು ನಡೆಸುವುದು ಎಂದರ್ಥ. ಇದು ಮಗುವಿಗೆ ಒಂಬತ್ತನೇ ತಿಂಗಳಲ್ಲಿ ನಡೆಸುವ ಆಚರಣೆಯಾಗಿದೆ. ಈ ಸಮಯದಲ್ಲಿ ಹೋಮಾದಿ ಕ್ರಿಯೆಗಳನ್ನು ನಡೆಸುತ್ತಾರೆ.

ಮಗು ಹುಟ್ಟಿ ಮೂರುವರ್ಷ ಕಳೆದಾಗ ಅವನಿಗೆ 'ಚೌಲಕ್ರಿಯೆ' ಎಂಬ ವಿಧಿಯನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ತಲೆಗೆ ಜುಟ್ಟನ್ನು ಬಿಟ್ಟು ಕ್ಷೌರ ಮಾಡಿಸುತ್ತಾರೆ. ಬಾಲಕನಿಗೆ ಐದನೆಯ ವರ್ಷದಲ್ಲಿ ಪುಸ್ತಕವನ್ನು ಹಿಡಿಸುವ ಕ್ರಿಯೆಗೆ 'ಪುಸ್ತಕಗ್ರಹಣ'ವೆಂದು ಹೆಸರು. ಇಲ್ಲಿಂದ ಅನಂತರ ಬರುವ ಉಪನಯನ, ಸಮಾವರ್ತನ, ವಿವಾಹ ಮತ್ತು ಸಮಾಧಿ ಮರಣ ವಿಧಿಗಳು ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಬಹುಮುಖ್ಯವಾದ ವಿಧಿಗಳಾಗಿವೆ. ಬಾಲಕನಿಗೆ ಯೋಗ್ಯವಾದ ಕಾಲದಲ್ಲಿ ಮೌಂಜಿ ಬಂಧನವನ್ನು ಮಾಡಿ ವ್ರತೋಪದೇಶವನ್ನು ಕೊಡಿಸಿ ಗುರುವಿನ ಬಳಿಗೆ ಕರೆದೊಯ್ಯುವ ಕ್ರಿಯೆಗೆ 'ಉಪನಯನ' ಎಂದು ಹೆಸರು. ವಿದ್ಯಾಭ್ಯಾಸವನ್ನು ಪೂರೈಸಿದ ವ್ರತಿಕನು, ವಿದ್ಯಾವಂತರಾಗಿ ಉಪನಯನ ಸಂಬಂಧವಾದ ಚಿಹ್ನೆಯನ್ನು ಬಿಡುವುದಕ್ಕೆ 'ಸಮಾವರ್ತನಕ್ರಿಯೆ' ಎಂದು ಹೆಸರು. 'ಷೋಡಶ ಸಂಸ್ಕಾರ'ಗಳಲ್ಲಿ ವಿವಾಹವು ಬಹುಮುಖ್ಯ ವಿಧಿಯಾಗಿದೆ. ಸ್ವಜಾತೀಯ ಕನ್ಯೆಯನ್ನು ಅಗ್ನಿಸಾಕ್ಷಿಯಾಗಿ ಸ್ವೀಕರಿಸುವುದಕ್ಕೆ 'ವಿವಾಹ'ವೆನ್ನುತ್ತೇವೆ. ಕೊನೆಯ ಸಂಸ್ಕಾರವೆಂದರೆ 'ಸಮಾಧಿ ಮರಣ' ಪ್ರತಿಯೊಬ್ಬ ಜೈನಮತೀಯನೂ ತನ್ನ ಜೀವಿತದ ಕೊನೆಯ ಭಾಗದಲ್ಲಿ ಸಮಾಧಿ ಮರಣವನ್ನು ಬಯಸುತ್ತಾನೆ. ಸಮಾಧಿ ಮರಣವೆಂದರೆ ಮೃತ್ಯುವಿನ ಬಗ್ಗೆ ಭಯಪಡದೆ, ಅದನ್ನು ನಿರ್ಭಯವಾಗಿ ಎದುರಿಸುವ ಸಿದ್ಧತೆಯಾಗಿದೆ. ಈ ಎಲ್ಲಾ ಮಾಹಿತಿಗಳು ನಮಗೆ ಎಸ್. ಡಿ. ಶೆಟ್ಟರ 'ತುಳುನಾಡಿನ ಜೈನಧರ್ಮ' ಎಂಬ ಸಂಶೋಧನಾ ಪ್ರಬಂಧದಲ್ಲಿ ಲಭ್ಯವಾಗುತ್ತದೆ.

ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ ವಿವರಿಸಿರುವಂತೆ "ಮಗು ಹುಟ್ಟಿದಾಗ ನಡೆಸುವ ಕ್ರಿಯೆಗೆ ಜಾತಕರ್ಮವೆಂದು ಹೆಸರು. ಇದಕ್ಕೆ ಪ್ರಿಯೋದ್ಭವ ಕ್ರಿಯೆಯೆಂದೂ ಕರೆಯುತ್ತಾರೆ. ಮಗು ಜನಿಸಿದ ಹತ್ತು ದಿನಗಳವರೆಗೆ ಬ್ರಾಹ್ಮಣರು (ಇಂದ್ರವರ್ಗ ಅಥವಾ ಪುರೋಹಿತರು), ಹನ್ನೆರಡನೆಯ ದಿನಗಳವರೆಗೆ ಕ್ಷತ್ರಿಯರೂ, ಹದಿನಾಲ್ಕು ದಿನಗಳವರೆಗೆ ವೈಶ್ಯರೂ ಸೂತಕವನ್ನು ಆಚರಿಸುತ್ತಾರೆ. ಗರ್ಭಿಣಿ ಸ್ತ್ರೀಯನ್ನು ಹೆರಿಗೆಯ ಸಂದರ್ಭದಲ್ಲಿ, ಪ್ರಸೂತಿಕಾ ಗೃಹದಲ್ಲಿಟ್ಟು ಎಲ್ಲ ರೀತಿಯ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆಂದೇ ಮೀಸಲಾದ ಕೊಠಡಿಯೂ ಕೆಲವರ ಮನೆಯಲ್ಲಿರುತ್ತದೆ. ಈ ಸಂದರ್ಭದಲ್ಲಿ ಮಗುವಿನ ಮಗುವಿನ ಜನನವು ಸುಲಭವಾಗಲೆಂದು, ಪುರೋಹಿತರು ಬಂದು ಮಂತ್ರೋಚ್ಚಾರಣೆ ಸಹಿತ ಧಾರ್ಮಿಕ ವಿಧಿಯನ್ನು ನಡೆಸುತ್ತಾರೆ. ಮಗು ಜನಿಸಿ ಹೊಕ್ಕಳು ಹುರಿಯನ್ನು ಬೇರ್ಪಡಿಸಿದ ಮೇಲೆ, ಮಗುವಿನ ಮೈ ತೊಳೆದು ತಾಯಿಯಿಂದ ಸ್ತನ್ಯಪಾನ ಮಾಡಿಸುತ್ತಾರೆ. ಹಿಂದಿನಂತೆ ಹೋಮಾದಿ ಕ್ರಿಯೆಗಳೂ ಜರುಗುತ್ತವೆ. ತಾಯಿ ಮತ್ತು ಮಗುವಿನ ಗಂಧೋದಕ, ಸೇಚನೆಯ ಅನಂತರ ತಂದೆಯು ಮಂತ್ರಪೂರ್ವಕವಾಗಿ ಪುತ್ರನ ಮುಖವನ್ನು ನೋಡುತ್ತಾನೆ. ಆತನಿಗೆ ಗಂಧೋದಕ ಸೇಚನೆಯನ್ನು ಮಾಡುತ್ತ ಹೀಗೆ ಆಶೀರ್ವದಿಸುತ್ತಾನೆ"[೨೪]

"ಎಲೈ ಪುತ್ರನೇ ಕುಲ, ಜಾತಿ, ವಯಸ್ಸು, ರೂಪ, ಗುಣ, ಶೀಲ, ಅಖಂಡೈಶ್ವರ್ಯ, ಸೌಮ್ಯಕಾರತ್ವ ಈ ಗುಣಗಳಿಂದ ಕೂಡಿದ ನಿನ್ನ ತಾಯಿಯು ಸಮ್ಯಗ್ ದೃಷ್ಟಿಯುಳ್ಳವಳಾಗಿದ್ದಾಳೆ. ಆದುದರಿಂದ ನೀನು ದಿವ್ಯಚಕ್ರ, ಪರಮಚಕ್ರ, ವಿಜಯಚಕ್ರಗಳೆಂಬ ಮೂರು ಚಕ್ರಗಳನ್ನು ಅನುಕ್ರಮವಾಗಿ ಪಡೆದು ಸಂತೋಷವನ್ನು ಹೊಂದು ಎಂದು ನುಡಿದು ಮಗುವಿನ ತಲೆಯನ್ನು ಸ್ಪರ್ಶಿಸುತ್ತಾನೆ"[೨೫]

ಹಾಗೆಯೇ, ಕಾವ್ಯದಲ್ಲಿ ವಿವರಿಸಿರುವ ಇನ್ನೊಂದು ಸಂಸ್ಕಾರವೆಂದರೆ ನಾಮಕರಣ "ಅಂದರೆ ಮಗುವಿಗೆ ಹೆಸರಿಡುವ ಉತ್ಸವವಾಗಿದೆ. ಮಗು ಹುಟ್ಟಿದ ಹನ್ನೆರಡನೆಯ ದಿನ ಜೈನ ಪುರೋಹಿತರು, ಹದಿನಾರನೆಯ ದಿನ ಇತರರೂ ಇದನ್ನು ಆಚರಿಸುತ್ತಾರೆ. ಬಸದಿಯಲ್ಲಿ ಪೂಜಾದಿ ಧಾರ್ಮಿಕ ವಿಧಿಯನ್ನು ನಡೆಸಿದ ಬಳಿಕ, ಮನೆಯಲ್ಲಿ ಇದನ್ನು ಆಚರಿಸುತ್ತರೆ. ಈ ಸಂದರ್ಭದಲ್ಲಿ ಮಗುವಿಗೆ ಹೆಸರಿಡುವುದರ ಜೊತೆಗೆ, ಕಿವಿಚುಚ್ಚುವುದು, ತೊಟ್ಟಿಲಿಗಿಕ್ಕುವ ಶಾಸ್ತ್ರವನ್ನು ನಡೆಸುವುದಿದೆ. ಮಾನವನಿಗೆ ಭಾಷೆಯ ಬಳಕೆ ತಿಳಿದಂದಿನಿಂದ ವ್ಯಕ್ತಿಗಳನ್ನು ಗುರುತಿಸಲು, ಹೆಸರಿಡುವ ಕ್ರಮವನ್ನು ಆರಂಭಿಸಿರಬೇಕು. ಪುರೋಹಿತರು ಆಗಮಿಸಿ ಹೋಮಾದಿ ಕ್ರಿಯೆಗಳನ್ನು ನಡೆಸುತ್ತಾರೆ. ಮುತ್ತೈದೆಯರು ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮಗುವಿನ ತಂದೆಯು ಶುದ್ಧವಾದ ಅಕ್ಕಿಯನ್ನು ಒಂದು ತಟ್ಟೆಯಲ್ಲಿ ಹರಡಿ, ಅದರ ಮೆಲೆ ಅರಸಿನ ಪುಡಿಯನ್ನು ಸೇಚಿಸಿ, ತಾನು ಮಗುವಿಗೆ ಇಡಲಿರುವ ಹೆಸರನ್ನು ಚಿನ್ನದ ಸಲಾಕೆಯಿಂದ ಬರೆದಿಡುತ್ತಾನೆ. ಹಾಲು, ತುಪ್ಪ ಸಹಿತವಾಗಿರುವ ಹರಿವಾಣದಲ್ಲಿ ತಾನು ಮಗುವಿಗಾಗಿ ತಂದ ಹೊಸ ಆಭರಣಗಳನ್ನಿಟ್ಟು ಅದನ್ನು ಪುರೋಹಿತರ ಕೈಗೆ ಒಪ್ಪಿಸುತ್ತಾನೆ. ಪುರೋಹಿತರು ಮಂತ್ರ ಪೂರ್ವಕವಾಗಿ ತಂದೆಯ ಹೆಸರನ್ನು ಹೇಳಿ ಇವರು ತಮ್ಮ ಮಗುವಿಗೆ ಈ ಹೆಸರನ್ನು ಇಟ್ಟಿದ್ದಾರೆ ಎಂದು ಮೂರು ಬಾರಿ ನೆರೆದ ಜನರಿಗೆ ತಿಳಿಸುತ್ತಾರೆ. ಆ ತರುವಾಯ ಸುಮಂಗಲಿಯರು

ಮಗುವಿಗೆ ಹೊಸ ಆಭರಣವನ್ನು ತೊಡಿಸಿ, ಹಾಲು ತುಪ್ಪವನ್ನು ಊಡಿಸಿ ತೊಟ್ಟಿಲಲ್ಲಿಟ್ಟು ಜೋಗುಳ ಹಾಡಿ ಮಗುವನ್ನು ತೂಗುತ್ತಾರೆ.

ಸಾಮಾನ್ಯವಾಗಿ ಮಗುವಿಗೆ ಅಜ್ಜ - ಅಜ್ಜಿಯರ ಹೆಸರಿಡುವುದು ತುಳುನಾಡಿನಲ್ಲಿ ಜೈನರು ಪಾಲಿಸಿಕೊಂಡು ಬಂದ ಸಂಪ್ರದಾಯವಾಗಿದೆ. ಇಲ್ಲವಾದರೆ, ಜ್ಯೋತಿಷ್ಯಶಾಸ್ತ್ರದ ನೆರವನ್ನು ಪಡೆದು ಜನನ ನಕ್ಷತ್ರಕ್ಕೆ ಸರಿಹೊಂದುವ ಹೆಸರನ್ನು ಇಡುತ್ತಾರೆ. ಇಲ್ಲವೇ ಮನೆ ದೇವರಿಗೆ ಸರಿಹೊಂದುವ ಹೆಸರನ್ನೂ ಇಡಲಾಗುತ್ತದೆ. ಇಲ್ಲಿ ಕೆಲವರು ಸಂತಾನದ ಬಗ್ಗೆ ಹರಕೆ ಹೇಳಿಕೊಳ್ಳುವ ಪದ್ಧತಿಯೂ ಇರುವುದರಿಂದ, ಅಂಥ ಸಂದರ್ಭದಲ್ಲಿ ತಾವು ಯಾವ ದೇವರಿಗೆ ಹರಕೆ ಹೇಳಿಕೊಂಡಿದ್ದಾರೋ, ಅಲ್ಲಿಗೆ ಮಗುವನ್ನು ಕರೆದುಕೊಂಡು ಹೋಗಿ ಈ ವಿಧಿಯನ್ನು ನಡೆಸುತ್ತಾರೆ. ಹುಂಬಚದ ಪದ್ಮಾವತಿಗೆ ಹರಕೆ ಹೇಳಿಕೊಳ್ಳುವುದು ವಾಡಿಕೆ. ಮಗುವನ್ನು ಅಲ್ಲಿಗೆ ಕರೆದೊಯ್ದು, ಶಾಸ್ತ್ರವನ್ನು ನೆರವೇರಿಸಿ ಗಂಡು ಮಗುವಾದರೆ ಪದ್ಮರಾಜ, ಪದ್ಮಪ್ಪನೆಂದೋ ಹೆಣ್ಣು ಮಗುವಾದರೆ ಪದ್ಮಾವತಿ, ಪದ್ಮಾಕ್ಷಿಯೆಂದೋ ಹೆಸರಿಡುತ್ತಾರೆ. ಇದೇ ರೀತಿ ಬ್ರಹ್ಮದೇವನಿಗೋ ಕೂಷ್ಮಾಂಡಿನೀ, ಜ್ವಾಲಾಮಾಲಿನಿಯರಿಗೋ ಹರಕೆ ಹೇಳಿಕೊಂಡರೆ ಆ ಕ್ಷೇತ್ರಕ್ಕೆ ಮಗುವನ್ನು ಕರೆದೊಯ್ದು ಮುಂದಿನ ವಿಧಿಯನ್ನು ನಡೆಸುತ್ತಾರೆ. ತುಳುನಾಡಿನಲ್ಲಿ ಬಂಗಾಡಿ, ನೆಲ್ಲಿಕಾರು, ನಿಡಗಲ್ಲುಗಳಲ್ಲಿರುವ ಬ್ರಹ್ಮದೇವ, ಮೂಡುಬಿದಿರೆಯ ಲೆಪ್ಪದ ಬಸದಿಯಲ್ಲಿರುವ ಜ್ವಾಲಾಮಾಲಿನೀ, ನಲ್ಲೂರಿನಲ್ಲಿರುವ ಕೂಷ್ಮಾಂಡಿನೀ, ವರಂಗ, ವೇಣೂರುಗಳಲ್ಲಿರುವ ಪದ್ಮಾವತಿಯರು ಪ್ರಸಿದ್ಧಿ ಪಡೆದಿರುವುದರಿಂದ, ಸಾಮಾನ್ಯವಾಗಿ ಇಲ್ಲಿಯ ಜೈನಮತೀಯರು ಆ ಕ್ಷೇತ್ರಗಳಲ್ಲಿ ಇಂಥ ವಿಧಿಯನ್ನು ನಡೆಸುವುದಿದೆ”[೨೬]

ಹೀಗೆ ತುಳುನಾಡಿನ ಜೈನಮತದ ಅನೇಕ ಸಂಪ್ರದಾಯಗಳು ಅದೇ ಮಣ್ಣಿನುಸಿರಿನಲ್ಲಿ ಬೆರೆತ ರತ್ನಾಕರವರ್ಣಿಯ ಕಾವ್ಯದಲ್ಲಿ ಮೈದೋರಿದೆ. ಕವಿಯ ನಿಡುಗಣ್ಣು ಸಂಪ್ರದಾಯದ ಸಾರಸರ್ವಸ್ವವನ್ನು ತನ್ನ ಕಾವ್ಯದಲ್ಲಿ ಅಲ್ಲಲ್ಲಿ ವ್ಯಾಪಿಸಿದೆ. ಕಾವ್ಯವನ್ನು ಓದುತ್ತ ಹೋದಂತೆಲ್ಲ ಅದರಲ್ಲಿರುವ ಮಣ್ಣಿನ ವಾಸನೆ ಮೊದಲ ಮಳೆ ಬಿದ್ದಂತೆ ಘಮ್ಮೆನ್ನುತ್ತದೆ.

ಕೊನೆ ಟಿಪ್ಪಣಿ

೧. **ದೇ. ಜವರೇಗೌಡ** : ಜಾನಪದ ಅಧ್ಯಯನ, ಪು.೩೪೩, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ೧೨/೧, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು - ೫೭೦೦೦೧

೨. **ಡಾ। ಎಚ್. ತಿಪ್ಪೇರುದ್ರಸ್ವಾಮಿ** : ಮಹಾಕಾವ್ಯ ಸ್ವರೂಪ, ಪು. ೫೪, ಚೇತನ್ ಬುಕ್ ಹೌಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು - ೫೭೦೦೨೪

೩. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೧, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೪. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೦೨, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೫. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೭೭, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೬. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೦೩, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೭. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೭೭, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೮. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೪೨, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೯. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೨೬, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೦. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೯೬, ೨೯೮, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೧. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೩೫೮, ೩೪೩, ೩೮೪, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೨. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೪೨, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೧೩. **ಪ್ರೊ. ಡಿ.ಕೆ. ರಾಜೇಂದ್ರ** : ವಾಲ್ಮೀಕಿ – ಕುವೆಂಪು – ತೌಲನಿಕ ದೃಷ್ಟಿ, ಪು. ೧೦೭, ಚೇತನ ಬುಕ್ ಹೌಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು – ೫೭೦೦೨೪

೧೪. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೯೮, ೨೯೫, ೩೮೩, ೪೦೧, ೫೯೩, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೫. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೯೬, ೨೯೮, ೪೦೨ ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೬. **ಡಾ। ಎಚ್. ತಿಪ್ಪೇರುದ್ರಸ್ವಾಮಿ** : ಮಹಾಕಾವ್ಯ ಸ್ವರೂಪ, ಪು. ೬೭, ಚೇತನ್ ಬುಕ್ ಹೌಸ್, ಅಂಜನಾದ್ರಿ, ರೇಣುಕಾಚಾಂರ್ಯ್ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೧೭. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೯೦, ೩೮೨, ೪೩೫ ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೧೮. **ಪಂಡಿತ ನಾಗರಾಜಯ್ಯ (ಸಂ.)**: ಹೋಮವಿಧಿ ಮತ್ತು ಕ್ರಿಯಾದರ್ಪಣ, ಪು. ೫೪ರಿಂದ ೯೦, ಶ್ರೀ ಸಿದ್ಧಾಂತ ಕೀರ್ತಿ ಗ್ರಂಥಮಾಲೆ, ೧೯೮೮, ಹೊಂಬಚ

೧೯. **ಯಾಗಯಾತ್ರೀ ಮತ್ತು ಭಾರತೀಯ ಸಂಸ್ಕೃತಿ** : ಭಾಗ – ೩, ಪು. ೨೯೦–೩೦೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೨೦. **ಯಾಗಯಾತ್ರೀ ಮತ್ತು ಭಾರತೀಯ ಸಂಸ್ಕೃತಿ** : ಭಾಗ – ೩, ಪು. ೨೯೦–೩೦೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೨೧ **ಯಾಗಯಾತ್ರೀ ಮತ್ತು ಭಾರತೀಯ ಸಂಸ್ಕೃತಿ** : ಭಾಗ – ೩, ಪು. ೨೯೦–೩೦೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೨೨. **ಜಿ. ಬ್ರಹ್ಮಪ್ಪ ಮತ್ತು ಇತರರು** : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು.೨೭೦ ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮು ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೨೩. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೩೪–೧೩೫, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೨೪. **ಪಂಡಿತ ನಾಗರಾಜಯ್ಯ (ಸಂ.)**: ಹೋಮವಿಧಿ ಮತ್ತು ಕ್ರಿಯಾದರ್ಪಣ, ಪು. ೬೧, ಭಾಗ –೩ ಪ್ರಸರಾಂಗ, ಮೈಸೂರು ವಿಶ್ವವಿದ್ಯಾಲಯ

೨೫. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೩೭–೧೩೮, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

೨೬. **ಡಾ। ಎಸ್. ಡಿ. ಶೆಟ್ಟಿ** : ತುಳುನಾಡಿನ ಜೈನಧರ್ಮ, ಪು. ೧೩೮, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು ಉಡುಪಿ – ೫೭೬೧೦೨

ಅಧ್ಯಾಯ : ಏಳು

ಭಾಷಿಕ ವೈಲಕ್ಷಣಗಳು

ಅಧ್ಯಾಯ : ಏಳು
ಭಾಷಿಕ ವೈಲಕ್ಷಣಗಳು

ಒಂದು ಜನಾಂಗದ ಸಂಸ್ಕಾರ, ಸಂಸ್ಕೃತಿಗಳನ್ನು ಅರಿಯಲು ಭಾಷೆ ಪ್ರಮುಖ ಸಾಧನವಾಗಿದೆ. ಏಕೆಂದರೆ ಆ ಜನಾಂಗದ ಸಕಲ ಜ್ಞಾನಧಾರೆ ಭಾಷೆಯಲ್ಲಿ ಕೆನೆಗಟ್ಟಿರುತ್ತದೆ. ಭಾಷೆಯು ಒಂದು ಮಾನಸಿಕ ಅಭಿವ್ಯಕ್ತಿಯಾಗಿರುವುದರಿಂದ, ಅದು ಮಾನವನ ಪ್ರಾಪಂಚಿಕ ಜ್ಞಾನವನ್ನು ಅಭಿವ್ಯಕ್ತಿಸುತ್ತದೆ. ಒಬ್ಬ ಕವಿಯ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಭಾಷೆಯಿಂದ ಅವನ ಕಾಲದ ಒಂದು ಸಾಂಸ್ಕೃತಿಕ ಚಿತ್ರಣವನ್ನು ನಾವು ಪಡೆಯಬಹುದಾಗಿದೆ. ಕವಿಯು ಭಾಷೆಗೊಂದು ಸುಂದರ ಲಾಲಿತ್ಯವನ್ನು ಒದಗಿಸಿ, ಅದನ್ನೊಂದು ಅದ್ಭುತ ಶಿಲ್ಪವನ್ನಾಗಿಸುವ ಶಿಲ್ಪಿಯೂ ಆಗಿರುತ್ತಾನೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಪ್ರಕೃತ ಅಧ್ಯಾಯದಲ್ಲಿ ರತ್ನಾಕರವರ್ಣಿಯ "ಭರತೇಶ ವೈಭವ" ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಪ್ರಾದೇಶಿಕ ಭಾಷಿಕ ಅಂಶಗಳನ್ನು ಗಮನಿಸಲಾಗಿದೆ. ಸಾಂಗತ್ಯ ಲೋಕದ ಕವಿ ರತ್ನಾಕರವರ್ಣೀಯ ಸಾಂಗತ್ಯವನ್ನು ತನ್ನಿಷ್ಟದಂತೆ ಬಳಸಿ ಕನ್ನಡಿಗರಿಗೆ ರುಚಿಕಟ್ಟಾದ ಕಾವ್ಯವನ್ನು ನೀಡಿ, ಕನ್ನಡ ಸಾಹಿತ್ಯಲೋಕಕ್ಕೆ ಮರೆಯಲಾರದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ತನ್ನ ಕಾವ್ಯವನ್ನು ಸಾಮಾನ್ಯನೂ ಸವಿಯಬೇಕೆನ್ನುವ ಉದ್ದೇಶದಿಂದ ಸಾಂಗತ್ಯದಲ್ಲಿ ರಚಿಸಿದ್ದಾನೆ. ತನ್ನ ಕಾವ್ಯವು "ಕಬ್ಬಿನಂತಿರಬೇಕೇ ಹೊರತು ಬಿದಿರಿನಂತಲ್ಲ" ಎಂಬುದು ಕವಿಯ ಉದ್ದೇಶವಾಗಿದೆ.

ರತ್ನಾಕರನು ತುಳುನಾಡಿನ ನಿವಾಸಿಯಾಗಿದ್ದನು. ಆತನು ಕನ್ನಡದಲ್ಲಿ ಸಾಂಗತ್ಯವನ್ನು ಮಾಧ್ಯಮವನ್ನಾಗಿಸಿಕೊಂಡು ಕಾವ್ಯ ರಚನೆ ಮಾಡಿದ್ದರೂ ಅವನಿಗೆ ತುಳು, ತೆಲುಗು ಭಾಷೆಗಳೂ ಬರುತ್ತಿದ್ದುವೆನ್ನುವುದಕ್ಕೆ ಕಾವ್ಯದ ಆರಂಭದ "ಆಸ್ಥಾನ ಸಂಧಿ"ಯಲ್ಲಿ ಬರುವ ಈ ಪದ್ಯ ಸಾಕ್ಷಿಯಾಗಿದೆ. ಕವಿಯು ತನ್ನ ಕಾವ್ಯವು ಹೇಗಿರಬೇಕೆಂದು ಹೇಳುತ್ತಾ,

ಕಬ್ಬಿಗರೋದುಗಬ್ಬವ ಹಾಡುಗಬ್ಬವ । ಕಬ್ಬದೊಳೊರೆವರವೆರಡು ॥
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲ್ಕೇ । ಕಬ್ಬೆ ಹೇಳಲೆ ಸರಸ್ವತಿಯೆ ॥೬॥

ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು! ರಯ್ಯಾಮಂಚಿದಿಯೆನೆ ತೆಲುಗಾ ॥
ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು । ಮೆಯ್ಯುಬ್ಬಿ ಕೇಳಬೇಕಣ್ಣ ॥೭॥[1]

ರತ್ನಾಕರವರ್ಣಿ ಆಸ್ಥಾನ ಕವಿಯಾಗಿದ್ದರೂ, ಅವನಲ್ಲಿ ಪಾಂಡಿತ್ಯಕ್ಕೆ ಕೊರತೆಯಿಲ್ಲದಿದ್ದರೂ ತನ್ನ ಕಾವ್ಯ ಪಾಮರಪ್ರಿಯವಾಗಬೇಕೆನ್ನುವುದು ಅವನ ಅಭಿಲಾಷೆಯಾಗಿತ್ತು. "ಅಯ್ಯಯ್ಯ ಚೆನ್ನಾದುದು"

ಎಂದು ತನ್ನ ಗ್ರಂಥವನ್ನು ಓದಿದ ಕನ್ನಡಿಗರು ಹೊಗಳುವುದರ ಜೊತೆಗೆ, ಬೇರೆ ಭಾಷೆಯವರಾದ ತೆಲುಗರು "ರಯ್ಯ ಮಂಚಿದಿ" ಎಂದೂ, ತುಳುವರು, "ಅಯ್ಯಯ್ಯ ಎಂಚ ಪೊರ್ಲಾಂಡ್" ಎಂದೂ ಉದ್ಗರಿಸಬೇಕೆನ್ನುವುದು ಕವಿಯ ಆಶಯವಾಗಿತ್ತು.

ಕವಿಯ ಕೆಲವು ವರ್ಣನೆಗಳೋ, ಅವನು ಕೊಟ್ಟ ಹೋಲಿಕೆಗಳೋ... ನಗೆಯುಕ್ಕಿಸುತ್ತವೆ. ಕಾವ್ಯವು ಎಲ್ಲೋ ನಮ್ಮ ಮನೆಯಂಗಳದಲ್ಲಿ ಉದಿಸಿದೆಯೋ ಎಂಬಂತಾಗುತ್ತದೆ. "ರಾಜಲಾವಣ್ಯ ಸಂಧಿ"ಯಲ್ಲಿ ಕುಸುಮಾಜಿಯು ಅಮೃತವಾಚಕನೆಂಬ ಗಿಳಿಯೊಡನೆ ಭರತೇಶನನ್ನು ವರ್ಣಿಸಿರುವ ಪರಿಯನ್ನು ನೋಡಿ;

ಮಿರುಗುವ ಕನ್ನಡಿಯೊಳು ಹರಹಿದ ಸಣ್ಣ । ಹರುವೆಯ ಬಿತ್ತುಗಳಂತೆ ॥
ತುರುಗಿದ ಬವರಿಯಿಂದೆಸೆವ ಗಲ್ಲಗಳೊಂದು । ಮೆರಹು ಸಾಲದೆ ಚಕ್ರಧರಗೆ ॥೪೮॥

ಮುತ್ತಿನ ಮಣಿಗಳತೆಯ ಮಾಡಿ ಕುಂಬಳ । ಬಿತ್ತಿನಂದದಿ ಕೊರೆ ಕೊರೆದು ॥
ತೆತ್ತಿಸಿದಂತೆಸೆವವನ ಕೆಂಬಲ್ಗಳ । ಬಿತ್ತರವಾದ ಸೋಲಿಸದು ॥೫೩॥

ಮರಿಗಿಳಿ ಕೇಳೆಮ್ಮ ನೃಪನೊಮ್ಮೆ ನುಡಿಗೆ ಬಾ । ಯ್ದೆರೆಯೆ ಚೆಂದುಟಿ ಜಿಹ್ವೆಯಾಟ ॥
ನೆರೆ ಕಲ್ಪವೃಕ್ಷದ ತಳಿರುನೇರಿಲೆಹಣ್ಣ । ಮರೆಯೊಳಿಹಂತದೆ ಚಿತ್ರ ॥೫೪॥

ಮರೆಯೇಕೆ ಕೇಳೊಮ್ಮೆ ನೃಪನ ತೆಳ್ವಸಿರಿನ । ಕಿರುರೋಮರಾಜಿಯ ಕಂಡು ॥
ಇರುವೆಯ ಸಾಲೆಂದು ತೊಡೆದನದಕೆ ರಾಯ । ನುರೆನಕ್ಕ ನಾನು ನಾಣ್ಚಿದೆನು ॥೬೩॥[೨]

ಹೊಳೆಯುವ ಕನ್ನಡಿಯ ಮೇಲೆ ಹರಿವೆಯ ಬೀಜವನ್ನು ಹರಡಿದಂತೆ ಭರತೇಶನ ಗಲ್ಲದಲ್ಲಿ ಮೊಳೆತ ಗಡ್ಡದ ಸೊಬಗು, ಮುತ್ತುಗಳಿಗೆ ಅಲತಿಗೆ (ಅರಗು) ಲೇಪಿಸಿ ಕುಂಬಳದ ಬೀಜದ ಆಕಾರಕೊಟ್ಟು ಜೋಡಿಸಿದಂತೆ ಆತನ ಕೆಂಪು ಹಲ್ಲುಗಳ ಸೊಬಗು, ಅವನು ಬಾಯ್ದೆರೆದರೆ ಅವನ ಚೆಂದುಟಿ ಮತ್ತು ನಾಲಗೆಗಳಾಟ ಕಲ್ಪವೃಕ್ಷದ ಚಿಗುರ ನಡುವೆ ನೇರಿಲಹಣ್ಣು ಕಂಗೊಳಿಸಿದಂತಾಗುವುದು. ಒಮ್ಮೆ ಭರತೇಶನ ಹೊಟ್ಟೆಯ ಮೇಲಿನ ಕಿರುಗೂದಲನ್ನು ಕಂಡು ಇರುವೆಯ ಸಾಲೆಂದು ಭ್ರಮಿಸಿ ಕುಸುಮಾಜಿಯು ಓಡಿಸಲು ಯತ್ನಿಸಿದಳಂತೆ!

ಹರುವೆಯ ಬಿತ್ತುಗಳಂತೆ... ಕುಂಬಳದ ಬಿತ್ತಿನಂದದಿ... ನೇರಿಲ ಹಣ್ಣಿನಂತಹ ಹೋಲಿಕೆಗಳು ತುಳುನಾಡಿನಲ್ಲಿ ಬಾಳಿ ಬದುಕಿ ರತ್ನಾಕರವರ್ಣಿಯಲ್ಲಿ ಮಾತ್ರ ಕಾಣಲು ಸಾಧ್ಯವೆನಿಸುತ್ತದೆ.

"ಇದ್ದುದನ್ನು ಇದ್ದ ಹಾಗೆ ವರ್ಣಿಸುವ ಚಾತುರ್ಯದಲ್ಲಿ ರತ್ನಾಕರನು ಎತ್ತಿದ ಕೈ. ಜನರ ಅನುಭವದಲ್ಲಿರುವ ವಸ್ತುಗಳನ್ನು ಹೋಲಿಕೆಗಾಗಿ ಆಯ್ದುಕೊಳ್ಳುವುದರ ಮೂಲಕ ಈ ಕಾರ್ಯವನ್ನು ಕವಿ ಸರ್ವಸಮರ್ಪಕವಾಗಿ ನಿರ್ವಹಿಸುತ್ತಾನೆ. ಕುಂಭದ್ರೋಣದಂತೆ ಸುರಿಯುತ್ತಿರುವ ಮಳೆಯನ್ನು

ವರ್ಣಿಸುವಾಗ 'ಕಿರುಧಾರೆಯಲ್ಲ ತೆಂಗಿನ ಮರಗಳ ತೋರ । ದುರುವ ಧಾರೆಯೊಳೆಡೆ ಬಿಡದೆ; ಅಗಣಿತ ದೈವಗಳೊಂದು ಹಬ್ಬದ ಮಾಡ । ಲಗಲದೊಳ್ ನೆರೆದೊತ್ತಲಾಗಿ ॥ ಗಗನವೆಂದೆಂಬ ಸೇವಗೆಯೊರಳಿಂದ ಸೇವಗೆ ಇಳಿವೊಲು ಮಳೆಯಾಯ್ತು' ಎನ್ನುತ್ತಾನೆ. ಗುಡುಗನ್ನು ವರ್ಣಿಸುತ್ತಾ 'ಕೊಡದ ಸಾಲಂದದ ಮುಗಿಲ ಕಾಮನಬಿಲ್ಲು । ಬಡಿಗೆಯಿಂ ಬಡಿಯೆ ದೈವಗಳು ॥ ಒಡೆದಂತೆ ಗುಡುಗಾದುದೊಳಗಿದ್ದ ನೀರು ತೋಟ್ಟಿಡುವಂತೆ ಕರೆದುದು ವೃಷ್ಟಿ' ಎನ್ನುತ್ತಾನೆ"[೩]

ಕವಿಯ ಕಾವ್ಯದಲ್ಲಿ ಅವನ ಆಡುನುಡಿಯು ಅಭಿವ್ಯಕ್ತಗೊಳ್ಳುವುದು ಸಹಜ. ಕಾವ್ಯದಲ್ಲಿ ಬಳಕೆಯಾಗಿರುವ ಪ್ರತಿಮೆಗಳು, ಭಾಷೆಯ ಸೂಕ್ಷ್ಮತೆಯಲ್ಲಿರುವ ಲೇಖಕನ ಅಂತರ್ದೃಷ್ಟಿ ಇತ್ಯಾದಿಗಳಲ್ಲಿ ನಾವು ಕವಿಯ ಜನ್ಮ ಭೂಮಿಯ ಭಾಷೆಯ ಸೊಗಡನ್ನು ಗುರುತಿಸಬಹುದಾಗಿದೆ. ಕೊನೆಯದಾಗಿ ಜಿ. ಬ್ರಹ್ಮಪ್ಪ ಮತ್ತು ಇತರರು ಸಂಪಾದಿಸಿರುವ 'ವಿಶ್ವ ಕವಿಯ ರತ್ನಾಕರನ ಭರತೇಶ ವೈಭವ' ಎಂಬ ಗ್ರಂಥದಲ್ಲಿರುವ ಈ ಅಂಶಗಳನ್ನು ಅಧ್ಯಾಯದಲ್ಲಿ ಸೇರಿಸದಿದ್ದರೆ ಅದು ಅಪೂರ್ಣವಾದೀತು;

"ರತ್ನಾಕರ ಕನ್ನಡ ಭಾಷೆಗೆ ಹೊಸ ಹೊಸ ನುಡಿಮುತ್ತಿನ ಕುಚ್ಚನ್ನು ಅರ್ಪಿಸುವುದರ ಜೊತೆಗೆ, ಬಹುಜನ ಮತ್ತೆ ಮತ್ತೆ ಬಳಸಿ ಸವಕಲಾಗಿ ಸತ್ವಹೀನವಾಗಿದ್ದ ಮಾತಿಗೆ ಈ ಕವಿ ನೂತನ ಹೊಳಪನ್ನೂ ಕಮನೀಯವಾದ ಕನ್ನಡದ ಕಂಪನ್ನೂ ಪ್ರತಿಭಾಸ್ಪರ್ಶದ ಪೆಂಪನ್ನೂ ಕೊಟ್ಟು ಅವನ್ನೆಲ್ಲ ಸಪ್ರಾಣಗೊಳಿಸಿರುವನು! ಅನುಕರಣ ಪದಪುಂಜವನ್ನು ಪರಿಣಾಮಕಾರಿಯಾಗಿ ಬಳಸಿ ಕನ್ನಡಸಿರಿಯನ್ನು ಹೆಚ್ಚಿಸಿರುವನು. ಅಚ್ಚ ಕನ್ನಡ ನುಡಿಯಲ್ಲೂ ಸುಖೋಷ್ಣವಾದ ಶ್ಲೇಷೆಯನ್ನು ತಂದು ದೇಶೀಯ ಗೌರವವನ್ನು ಮಾರ್ಗದ ಮಟ್ಟಕ್ಕೇರಿಸಲು ಪ್ರಯತ್ನಿಸಿರುವನು. ಜನಪದ ಧಾಟಿಯಲ್ಲಿ ದಿನಬಳಕೆಯ ಮಾತುಗಳಿಂದ ದಿನಚರಿಯ ಬದುಕನ್ನು ರತ್ನಾಕರ ಬಣ್ಣಿಸಿ ಮಹಾಕಾವ್ಯವನ್ನು ರಚಿಸಿದುದಕ್ಕಿಂತ ಕನ್ನಡ ನುಡಿಯ ಬೆಳವಣಿಗೆಗೆ ಬೇರೆ ಉಪಕಾರ ಬೇಕೆ? "ಮಾತು ತಾನೆ ಮನದೊಳಗೆ ಸೂಚಿಸುವುದು", "ಉಂಡವ ತೇಗುವಂತೆ ಆತ್ಮನ ಭಾವಿಸಿ ಕಂಡವನು ಹೇಳಬೇಕು", "ನಾವಿಪ್ಪ ಸದನವೆಲ್ಲವು ಡೊಂಕು ನಮ್ಮ ಹೃದಯವಿನ್ನೆಷ್ಟು ಡೊಂಕೋ!" "ಪತಿಗುತ್ತರವ ಕೊಡಬಾರದು ಕೈಕೊಂಡ ವ್ರತವ ಕೆಡಿಸಬಾರದು", "ಅರುವೆಯ ಬಿಸುಟರೆ ತಪಸಿಯೆ? ಹೆರೆ ಬಿಟ್ಟರರೆಗೋಲೆ ವಿಷ ಹೋಯ್ತೆ ಫಣಿಗೆ?", "ಮೈಯ ಬತ್ತಲೆ ಮಾಡಿ ಮನವ ಕತ್ತಲೆ ಮಾಡಿ", "ಲೇಪವಳಿದರೆ ಸರ್ವರು ಸರಿ", "ಹೆಣ್ಣು ಬೇಕಾದರೆ ಬರಬೇಕು! ನಾವೆಮ್ಮ ಬಣ್ಣಿಗೆದಪ್ಪಿ ಕೊಡುವೆವೆ?", "ಕಡಲನೊತ್ತದೆ ಕಡುಲುದಕವ ತುಂಬುವ ಕೊಡನನೊತ್ತವರಂತೆ", "ಲೇಸಿಗೆ ಕಾಲಿಗೆರಗಬಹುದರಸ, ಉದಾಸೀನಕೆ ಆರೆರಗುವರು", ಅಚ್ಚ ಕನ್ನಡ ನುಡಿಯ ಕಟ್ಟಾಣಿ ಮುತ್ತುಗಳಿಂದ, ಕನ್ನಡ ಕಂಪಿನ ಬಿರಿಮುಗುಳ ಮಾತಿನ ಮಾಲೆಯಿಂದ ರತ್ನಾಕರ ಕನ್ನಡಾಂಬೆಯನ್ನು ಸಿಂಗರಿಸಿರುವನು"[೪]

ರತ್ನಾಕರ ಜೈನನಾದರೂ ಬದುಕನ್ನು ವರ್ಣಿಸುವಾಗ ತನ್ನ ಸುತ್ತಲಿನ ಜೈನ ಸಂನ್ಯಾಸಿಗಳ ವರ್ತನೆಯನ್ನು ಲಕ್ಷ್ಯವಾಗಿರಿಸಿಕೊಂಡುದು ಅವನ ನೇರ, ದಿಟ್ಟ ನಡವಳಿಕೆಗೆ ಸಾಕ್ಷಿ.

ಕೊನೆ ಟಿಪ್ಪಣಿ

೧. ಜಿ. ಬ್ರಹ್ಮಪ್ಪ ಮತ್ತು ಇತರರು : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೧, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೨. ಜಿ. ಬ್ರಹ್ಮಪ್ಪ ಮತ್ತು ಇತರರು (ಸಂ.) : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೫೦–೫೧, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

೩. ದಿ। ವಿ. ಸೀತಾರಾಮಯ್ಯ(ಸಂ.) : ರತ್ನಾಕರವರ್ಣಿ ಪು. ೧೧೬ ಐಬಿಎಚ್ ಪ್ರಕಾಶನ, ಬೆಂಗಳೂರು

೪. ಜಿ. ಬ್ರಹ್ಮಪ್ಪ ಮತ್ತು ಇತರರು : ವಿಶ್ವಕವಿ ರತ್ನಾಕರನ ಭರತೇಶ ವೈಭವ, ಪು. ೨೪, ಅತ್ತಿಮಬ್ಬೆ ಪ್ರಕಾಶನ, ೨೧೩, ಸುಬ್ಬರಾಮ ಚೆಟ್ಟಿರೋಡ್, ಬಸವನಗುಡಿ, ಬೆಂಗಳೂರು – ೪

ಅಧ್ಯಾಯ : ಎಂಟು

ಫಲಿತ

ಅಧ್ಯಾಯ : ಎಂಟು
ಫಲಿತ

ಭಾರತ ದೇಶ ನಾನಾ ಪ್ರಾಂತಗಳು, ಧರ್ಮ, ಜಾತಿ, ಭಾಷೆ, ಆಚಾರ–ವಿಚಾರ, ಆಹಾರ–ವಿಹಾರ, ವೇಷ–ಭೂಷಣಗಳು, ಭಿನ್ನ ಸಂಸ್ಕೃತಿಗಳಿಂದೊಡಗೂಡಿದ ವಿಶಾಲ ದೇಶ. ಆಯಾ ಪ್ರದೇಶದ ವಿಶಿಷ್ಟವಾದ ಭಾಷೆ, ಸಂಸ್ಕೃತಿ, ಪ್ರಾಕೃತಿಕ ವೈವಿಧ್ಯಗಳನ್ನು ನಾವು "ಪ್ರಾದೇಶಿಕತೆ" ಎಂದು ಕರೆಯಬಹುದು. ಕವಿಯು ತಾನು ಹುಟ್ಟಿ ಬೆಳೆದ ಪರಿಸರಕ್ಕೆ ತೀವ್ರ ಸಮೀಪದವನಾಗಿ ಅಲ್ಲಿಯ ಗಾಳಿ ನೀರುಗಳಿಂದ ಬೆಳೆದವನಾದುದರಿಂದ ಆತ ಪ್ರಾದೇಶಿಕ ಸಂಸ್ಕೃತಿಯ ಜೀವಂತ ವಿವರಗಳನ್ನು ಯಥಾರ್ಥವಾಗಿ, ವಿಶ್ವಾಸಾರ್ಹವಾಗಿ ನಮ್ಮೆದುರು ಇಡುತ್ತಾನೆ. ಆದುದರಿಂದ ಆತನ ಕಾವ್ಯ ವಿಶೇಷತೆ, ವೈಶಿಷ್ಟ್ಯತೆ, ಸ್ವೋಪಜ್ಞತೆಗಳನ್ನು ಉಳಿಸಿಕೊಂಡು ಬದುಕಿನ ದರ್ಶನವಾಗಬಲ್ಲುದು. ಕಥಾವಸ್ತುವು ಪುರಾಣವೇ ಆಗಿರಲಿ, ಐತಿಹಾಸಿಕವೇ ಆಗಿರಲಿ, ಅದಕ್ಕೊಂದು ಕಸುವನ್ನು ನೀಡುವುದು ಕಾವ್ಯವು ಒಳಗೊಳ್ಳುವಂತಹ ಪ್ರಾದೇಶಿಕ ಅಂಶಗಳು.

'ತುಳು ದೇಶಕ್ಕೆ ವಿಶಿಷ್ಟಮಪ್ಪ ನಗರ', 'ಜಿನಧರ್ಮದಾಗರ', 'ಧಾರೆಯೊಳಗಂ ಪ್ರಸಿದ್ಧಿ ಪಡೆದೊಪ್ಪುವ ನಗರ' ಎಂದೆಲ್ಲ ಹೊಗಳಿಸಿಕೊಂಡಿರುವ ವಿಶಿಷ್ಟ ಊರು ಮೂಡುಬಿದಿರೆ. ಅಂತೆಯೇ ಕನ್ನಡ ಸಾಹಿತ್ಯಕ್ಕೆ ರತ್ನಾಕರವರ್ಣಿಯಂತಹ ಒಬ್ಬ ಕವಿಯನ್ನು ಕೊಟ್ಟಿದೆ. ರತ್ನಾಕರನ ಕವಿತಾಶಕ್ತಿಯು ಕನ್ನಡ ಸಾಹಿತ್ಯ ಲೋಕದಲ್ಲಿ ಆತನನ್ನು ಧ್ರುವತಾರೆಯನ್ನಾಗಿಸಿದೆ. ಕಾವ್ಯಧರ್ಮ, ಧರ್ಮಗಳ ಸಮನ್ವಯವನ್ನು ಆತ ತನ್ನ ಕಾವ್ಯದಲ್ಲಿ ಸಾಧಿಸಿದ್ದಾನೆ; ತನ್ನ ಕಾವ್ಯದಲ್ಲಿ ತುಳು ಮಣ್ಣಿನ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾನೆ. ಈ ಸಂಪ್ರಬಂಧದಲ್ಲಿ ರತ್ನಾಕರವರ್ಣೀಯ 'ಭರತೇಶ ವೈಭವ'ವೆಂಬ ಸಾಂಗತ್ಯ ಛಂದಸ್ಸಿನಲ್ಲಿರುವ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಪ್ರಾದೇಶಿಕಾಂಶಗಳನ್ನು ಕುರಿತು ಬೇರೆ ಬೇರೆ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ.

ರತ್ನಾಕರವರ್ಣಿಯು ತುಳುನಾಡಿನ ಮೂಡುಬಿದಿರೆಯಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಸೂರ್ಯವಂಶಕ್ಕೆ ಸೇರಿದ ದೇವರಾಜನ ಪುತ್ರ, ಕಾರ್ಕಳದ ಭೈರರಸ ಒಡೆಯರ ಆಸ್ಥಾನಕವಿಯಾಗಿ, ಸಾಂಗತ್ಯ ಕವಿತೆಯ ಸೀಮಾಪುರುಷನಾಗಿ ತುಳುನಾಡಿನ ಜೈನ ಸಂಸ್ಕೃತಿಯ ಸಾರಸರ್ವಸ್ವವನ್ನು ಹೀರಿಕೊಂಡು 'ಅಯ್ಯಯ್ಯ ಎಂಬ ಪೊರ್ಲಾಂಡೆಂದು' ಮೆಯ್ಯುಬ್ಬಿ ಕೇಳಬಲ್ಲಂತಹ ಕೃತಿರತ್ನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾನೆ. "ಧ್ಯಾನಕೆ ಬೇಸರಾದಾಗ ನನ್ನಾತ್ಮಲೀಲಾನುವೃದ್ಧಿಗೆ ಪೇಳ್ದೆನೈಸೆ' ಎಂದು ತನ್ನ 'ಭರತೇಶ ವೈಭವ' ಕೃತಿ ನಿರ್ಮಾಣಕ್ಕೆ ಕಾರಣವನ್ನು ಹೇಳಿದ್ದಾನೆ. ಅಧ್ಯಯನದ ಆರಂಭದಲ್ಲಿ ರತ್ನಾಕರವರ್ಣಿಯ ಬದುಕು – ಬರಹದ ಬಗ್ಗೆ ಕ್ಷ–ಕಿರಣವನ್ನು ಬೀರಲಾಗಿದೆ.

ಕವಿಯು ಬಾಳಿ ಬದುಕಿದ ಸಾಮಾಜಿಕ ಪರಿಸರದ ಅಂಶಗಳು ಕಾವ್ಯದಲ್ಲಿ ಅಭಿವ್ಯಕ್ತಗೊಂಡ ರೀತಿಯನ್ನು ಸ್ಥೂಲವಾಗಿ ವಿವೇಚಿಸಲಾಗಿದೆ. ಕವಿಯು ಸಾಮಾಜಿಕ ಪರಿಸರದ ಕ್ರಿಯೆಯಲ್ಲಿ

ಪಾಲುದಾರನಾಗುವುದು ಅನಿವಾರ್ಯವಾಗಿದೆ. ತಾನು ಕಂಡು ಅನುಭವಿಸಿದ ಸುಂದರ ಸನ್ನಿವೇಶಗಳನ್ನು, ತನ್ನ ಅನುಭವಗಳನ್ನು ಕಾವ್ಯದಲ್ಲಿ ಅಳವಡಿಸಿಕೊಳ್ಳುತ್ತಾನೆ. ತಾನು ಬೆಳೆದ ಸಾಮಾಜಿಕ ಪರಿಸರದ ಸನ್ನಿವೇಶಗಳನ್ನು, ಸಾಮೂಹಿಕ ಸಂಬಂಧ ಹಾಗೂ ಸಾಂಸ್ಕೃತಿಕ ಕ್ರಿಯೆಗಳನ್ನು ತನ್ನ ಪ್ರತಿಭೆಯ ಕಾವಿನಲ್ಲಿ ಕರಗಿಸಿ, ವಿದ್ವತ್ತಿನ ಅಡಿಗಲ್ಲ ಮೇಲೆ ಅದರ ಓರೆ – ಕೋರೆಗಳನ್ನು ಸವರಿ ಕಲ್ಪನೆಯ ಮೆರುಗು ಹಾಕಿ ಹೊರಗೆ ತರುತ್ತಾನೆ. ಹಾಗೆಯೇ 'ಭರತೇಶ ವೈಭವ'ದಲ್ಲಿ ಕವಿಯು ಹೊರತಂದಿರುವ ಹೃದಯಸ್ಪರ್ಶಿಯಾದ ಸಂಸಾರಚಿತ್ರಣಕ್ಕೆ ಆತನು ಕಂಡು ಅನುಭವಿಸಿದ ಸಮಾಜ ಚಿತ್ರಗಳು ಪ್ರೇರಕವಾಗಿರಬೇಕು. ಪ್ರಸ್ತುತ ಅಧ್ಯಯನದಲ್ಲಿ ಕವಿಯ ಸಮಕಾಲೀನ ಸಮಾಜದಲ್ಲಿದ್ದ ಮಹಿಳೆಯ ಸ್ಥಾನ–ಮಾನಗಳು, ಸಂಸ್ಕೃತಿಯ ಚಿತ್ರಣವನ್ನು ನೀಡಲಾಗಿದೆ.

ಕವಿ ಪ್ರಕೃತಿಯನ್ನು ಕಂಡು ಪಡೆದ ಅನುಭವ ಭಾವಾನುಭವ ರಸಾನುಭವಗಳನ್ನು ತನ್ನ ಕಾವ್ಯದಲ್ಲಿ ನಿರೂಪಿಸುತ್ತಾನೆ. ಬೇರೆ ಬೇರೆ ರೀತಿಯಲ್ಲಿ ಪ್ರಕೃತಿ ವ್ಯಾಪಾರಗಳನ್ನು ಕಾವ್ಯದಲ್ಲಿ ಬಳಸಿಕೊಳ್ಳುವ ಕವಿಯು, ತಾನು ಚಿತ್ರಿಸುವ ಮನುಷ್ಯ ಲೋಕಕ್ಕೆ ಅವುಗಳನ್ನು ಉಪಮಾ, ರೂಪಕ, ಪ್ರತಿಮಾ ಇತ್ಯಾದಿ ವಿಧಾನಗಳಿಂದ ಅಳವಡಿಸುತ್ತಾನೆ. ಮಹಾಕವಿ ಮಾನವ ಸ್ವಭಾವಕ್ಕೆ ಪ್ರಕೃತಿಯ ವಸ್ತು ವ್ಯಾಪಾರಗಳನ್ನು ಪ್ರತಿಮೆಗಳನ್ನಾಗಿ ಮಾಡಿ ತನ್ನ ಕಾವ್ಯದಲ್ಲಿ ನಿಲ್ಲಿಸುತ್ತಾನೆ. ಕವಿಯು ಈ ರೀತಿ ಪ್ರಕೃತಿಯನ್ನು ತನ್ನ ಕಾವ್ಯದಲ್ಲಿ ಪಡಿಮೂಡಿಸಬೇಕಾದರೆ ಪ್ರಕೃತಿಯ ಶ್ರದ್ಧಾಪೂರ್ವಕ ಆರಾಧನೆ, ಸೂಕ್ಷ್ಮ ನಿರೀಕ್ಷಣೆ ಅವನಲ್ಲಿರಬೇಕು. ರತ್ನಾಕರವರ್ಣಿಯು ತನ್ನ ಕಾವ್ಯವನ್ನು ಸಂಪ್ರದಾಯನಿಷ್ಠತೆಗೆ ಅಂದರೆ ಅಷ್ಟಾವದಶವರ್ಣನೆಯೆಂಬ ಸ್ವರ್ಣಸಂಖಲೆಗೆ ಬಂಧಿಸಿಲ್ಲ. ಈ ಒಂದು ಗುಣವೇ ಆತನ ಕಾವ್ಯದಲ್ಲಿ ನೈಜತೆಯ ಅಭಿವ್ಯಕ್ತತೆಗೆ ಕಾರಣವಾಯಿತು. ಈತನ ಕಾವ್ಯದಲ್ಲಿ ಶುಷ್ಕ ಅಲಂಕಾರಗಳಿಲ್ಲ. ಈತನು ಕಾವ್ಯದಲ್ಲಿ ತಂದಿರುವ ವರ್ಣನೆಯಲ್ಲಿ ಕರುನಾಡಿನ ವರ್ಣನೆಗಳೇ ಆಗಿವೆ. ಈತನು ಕಾವ್ಯದಲ್ಲಿ ಮಾಡಿರುವ ಸಮುದ್ರವರ್ಣನೆ ಅತ್ಯಂತ ನೈಜವಾಗಿ ಮೂಡಿಬಂದಿದೆ. ತುಳುನಾಡಿನ ಭಾಷೆಯ ಅನೇಕ ಅಂಶಗಳು, ಪ್ರಕೃತಿಯನ್ನು ಕವಿಯು ಈ ಕಾವ್ಯದಲ್ಲಿ ಬಳಸಿಕೊಂಡಿರುವುದನ್ನು ಇಲ್ಲಿ ಗಮನಿಸಲಾಗಿದೆ.

ತುಳುನಾಡಿನ ಜೈನಮತೀಯರು ಆಚರಿಸುತ್ತ ಬಂದಿರುವ ಪ್ರಾದೇಶಿಕ ಆಚರಣೆಗಳಲ್ಲಿ ಭೂತಾರಾಧನೆ ಬಹುಮುಖ್ಯವಾದುದು. ಭೂತರಾಧನೆಯು ದ್ರಾವಿಡ ಮತ್ತು ದ್ರಾವಿಡ ಪೂರ್ವ ಕಾಲದಲ್ಲಿ ಆಚರಣೆಯಲ್ಲಿದ್ದ ಪ್ರಾಚೀನ ಆರಾಧನಾ ಪದ್ಧತಿಯಾಗಿದೆ. ಜೈನಧರ್ಮವು ಕ್ರಿ.ಪೂ. ೩–೨ನೆಯ ಶತಮಾನದ ಸುಮಾರಿಗೆ ಭದ್ರಬಾಹು ಭಟ್ಟಾರಕರ ಮೂಲಕ ಶ್ರವಣಬೆಳಗೊಳಕ್ಕೆ ಆಗಮಿಸಿ, ಅಲ್ಲಿಂದ ತುಳುನಾಡಿಗೆ ಕಾಲಿರಿಸಿದಾಗ ಜೈನಾಚಾರ್ಯರ ಪ್ರಚಾರ ಸಂಘಟನೆಗಳಿಂದ ಅನೇಕ ಜನರು ಜೈನಧರ್ಮವನ್ನು ಸ್ವೀಕರಿಸಿದ್ದರು. ಇಂಥವರು ಜೈನಾಚರಣೆಯನ್ನು ಅನುಸರಿಸಿದರೂ ಅವರಲ್ಲಿ ಮೂಲಭೂತವಾಗಿ ರಕ್ತಗತವಾಗಿ ಬಂದ ಭೂತಾರಾಧನೆಯಂತಹ ಆಚರಣೆಗಳು ಅಂತರಾಳದಲ್ಲಿ ಜೀವಂತವಾಗಿರುವ ಸಂಭವಗಳಿವೆ. ಹಾಗೆಯೇ ತನ್ನ ಮೂಲಧರ್ಮದ ಆಶಯಗಳಿಗೆ ಭಂಗಬಾರದ ರೀತಿಯಲ್ಲಿ ಕೆಲವು ಬದಲಾವಣೆಗಳೊಡನೆ ಜೈನಧರ್ಮವು ಭೂತಾರಾಧನೆಯನ್ನು ವ್ಯಾವಹಾರಿಕ ನೆಲೆಯಲ್ಲಿ ಸ್ವೀಕರಿಸಿತು. ತುಳುನಾಡಿನ ದೈವಗಳ

ಜೀವಂತ ಚಿತ್ರಣವು ರತ್ನಾಕರ ವರ್ಣಿಯು ತನ್ನ ಕಾವ್ಯದಲ್ಲಿ ತಂದಿರುವ ದೈವಗಳ ಸನ್ನಿವೇಶದಲ್ಲಿ ಇರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಭೌಗೋಳಿಕ, ಮತೀಯ ಹಾಗೂ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಆಯಾಯ ಜನರ ಮನೋಧರ್ಮವನ್ನಲಂಬಿಸಿ ಸಂಪ್ರದಾಯಗಳು ಉಗಮಗೊಳ್ಳುತ್ತವೆ. ಹಾಗೆಯೇ ಈ ಪರಿಸರದಲ್ಲಿ ಹುಟ್ಟಿ ಬೆಳೆದ ಕವಿ ಇಲ್ಲಿಯ ಸಂಪ್ರದಾಯಗಳು, ಸಾಂಸ್ಕೃತಿಕ ಬದುಕಿನ ವಿವಿಧ ಮಗ್ಗುಲುಗಳನ್ನು ತನ್ನ ಕಾವ್ಯದಲ್ಲಿ ಪಡಿಮೂಡಿಸುತ್ತಾನೆ. ಅಂತೆಯೇ, ರತ್ನಾಕರವರ್ಣಿಯು ತುಳುನಾಡಿನ ಜೈನ ಸಂಪ್ರದಾಯಗಳನ್ನು ತನ್ನ ಕಾವ್ಯದುದ್ದಕ್ಕೂ ತಂದಿದ್ದಾನೆ. ಕಾವ್ಯದಲ್ಲಿ ವರ್ಣಿಸಿರುವ ವಿವಾಹ ವಿಧಿಗಳು ತುಳುನಾಡಿನ ಜೈನಮತೀಯರ ವಿವಾಹವಿಧಿಗಳಾಗಿವೆ. ಅಲ್ಲದೆ ಇಲ್ಲಿಯ ಜೈನಮತೀಯರ ಇತರ ಅನೇಕ ಸಂಪ್ರದಾಯಗಳು ಕಾವ್ಯದಲ್ಲಲ್ಲಿ ಅಡಕಗೊಂಡಿವೆ. ತುಳುನಾಡಿನಲ್ಲಿ ಸಾರ್ವತ್ರಿಕವಾಗಿ ಆಚರಣೆಯಲ್ಲಿ ಮಹಾನವಮಿಯ ಹಬ್ಬ ಕಾವ್ಯದಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ. ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಪ್ರಾದೇಶಿಕ ಜೈನ ಸಂಪ್ರದಾಯಗಳ ಕುರಿತ ಅಧ್ಯಯನ ಈ ಸಂಪ್ರಬಂಧದ ರಚನೆಯಲ್ಲಿ ಮೈಗೂಡಿದೆ.

ಪ್ರಸ್ತುತ ಅಧ್ಯಯನದಲ್ಲಿ ರತ್ನಾಕರವರ್ಣಿಯ 'ಭರತೇಶ ವೈಭವ'ವೆಂಬ ಸಾಂಗತ್ಯ ಛಂದಸ್ಸಿನಲ್ಲಿ ಬರೆಯಲ್ಪಟ್ಟಿರುವ ಕಾವ್ಯದಲ್ಲಿ ಅಡಗಿರುವ ತುಳು ಮಣ್ಣಿನ ಸೊಗಡನ್ನು ವಿಭಿನ್ನ ಸೂಕ್ಷ್ಮಗಳೊಂದಿಗೆ ದಾಖಲಿಸಲಾಗಿದೆ. ಪ್ರಾಜ್ಞನೊಬ್ಬ ಹೇಳಿದ ಹಾಗೆ ರತ್ನಾಕರವರ್ಣಿಯ ಕಾವ್ಯವೊಂದು ಸಕಲ ತೊರೆಗಳು ಬಂದು ಸೇರುವ ವಾರಿಧಿಯಂತೆ. ಹಾಗೆಯೇ ಬೇರೆ ಬೇರೆ ನೆಲೆಗಳಲ್ಲಿ ಕಾವ್ಯದ ಅಧ್ಯಯನ ಸಾಧ್ಯವೆಂದು ಹೇಳಬಹುದಾಗಿದೆ.

ಅನುಬಂಧ

ಪರಾಮರ್ಶನ ಗ್ರಂಥಗಳು

೧. **ಸಿ.ಪಿ.ಕೆ. : ಜೈನ ಸಾಹಿತ್ಯ** : ಕೆಲವು ನೋಟಗಳು, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೨. **ಜಿ. ಪ್ರಶಾಂತ ನಾಯಕ** : ಭಾರತೀಯ ಕಾವ್ಯ ಮೀಮಾಂಸೆ, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೩. **ವಸಿಷ್ಠ** : ರತ್ನಾಕರವರ್ಣಿಯ ಭರತೇಶ ವೈಭವ, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೪. **ಜಿ.ಎಸ್. ಭಟ್ಟ (ಸಂ.)** : ಸಂಸ್ಕೃತಿ ಒಂದು ಅಧ್ಯಯನ, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೫. **ಕೆ. ಮೋಹನ ಕೃಷ್ಣ ರೈ** : ತುಳು ಸಂಸ್ಕೃತಿ ಚತುರ್ಮುಖೀ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. **ನ್ಯಾಯತೀರ್ಥ ಎ. ಶಾಂತಿರಾಜ ಶಾಸ್ತ್ರಿ** : ಶತಕತ್ರಯಾ, ಮೈಸೂರು ಎ. ಎಸ್. ಶ್ರೀ ಪಾಲಯ್ಯನವರಿಂದ ಪ್ರಕಾಶಿಸಲ್ಪಟ್ಟಿತು.

೭. **ಡಾ॥ ರಾಜಶೇಖರ ಈ ಇಚ್ಚಂಗಿ** : ಪಾರ್ಶ್ವನಾಥ ಪುರಾಣ, ಒಂದು ತೌಲನಿಕ ಅಧ್ಯಯನ, ಜೈನ ಅಧ್ಯಯನ ಸಂಸ್ಥೆ, ಶ್ರವಣಬೆಳಗೊಳ – ೫೭೩೧೩೫

೮. **ಡಾ॥ ಕೆ.ಸಿ. ಶಿವಾ ರೆಡ್ಡಿ** : ಕನ್ನಡದ ಹಾಡುಪಾಡು, ಅಧ್ಯಯನ ಮಂಡಲ, ಬೆಂಗಳೂರು, ಕರ್ನಾಟಕ, ೨೦೦೩

೯. **ಜಿ.ಎಸ್. ಭಟ್ಟ (ಸಂ.)** : ಬೇಂದ್ರೆ ಸಾಹಿತ್ಯ ವಿಹಾರ, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು – ೫೭೦೦೨೪

೧೦. **ರಂ. ಶ್ರೀ ಮುಗಳಿ** : ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು

೧೧. **ಜಿ. ಬ್ರಹ್ಮಪ್ಪ** : ರತ್ನಾಕರ ವೈಭವ (ತಿಳಿಗನ್ನಡ), ರತ್ನತ್ರಯ ಪ್ರಕಾಶನ, ಕುವೆಂಪು ನಗರ, ಮೈಸೂರು – ೫೭೦೦೨೩

೧೨. **ಪಿ.ಕೆ. ನಾರಾಯಣ** : ಭರತೇಶನ ದಿನಚರಿ, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ ನಿಯಮಿತ, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮.

೧೩. **ಭರತೇಶ ವೈಭವ (ಸಂ.)** : ಸಂ. ಟಿ. ಎಸ್. ಶಾಮರಾವ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೨

೧೪. **ರಾಜಶೇಖರ ನೆಗಳೂರ** : ಬಳ್ಳಾರಿ ಜಿಲ್ಲೆಯ ಪ್ರದರ್ಶಕ ಕಲೆಗಳು, ಸಾರಾ ಎಂಟರ್‌ಪ್ರೈಸಸ್, ನಂ. ೫೬, ೫ನೇ ಮುಖ್ಯರಸ್ತೆ, ಸುಭಾಷ್ ನಗರ, ಮೈಸೂರು